ಜನಶಕ್ತಿ

ದುಡಿವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 52

ಡಿಸೆಂಬರ್ 28 , 2008


ರೂ. 5/-



ಕೋಮುವಾದ ಭಯೋತ್ಪಾದನೆ ವಿರುದ್ಧ

ಸೌಹಾರ್ದ ಸಂಗಮ





ವೈವಿಧ್ಯತೆಯೇ ಇಲ್ಲಿನ ಏಕತೆ

-ಜಿ.ಕೆ.ಜಿ

'ಕೋಮುವಾದ ದೇಶಪ್ರೇಮವಲ್ಲ ಭಯೋತ್ಪಾದನೆ ಧರ್ಮ ನಿಷ್ಠೆಯಲ್ಲ' - ನಿಡುಮಾಮಿಡಿ ಶ್ರೀ

ಧರ್ಮದ ಜಾಗತೀಕರಣ : ಒಂದು ಪಕ್ಷಿ ನೋಟ

ನೋಟ




ಡಾ. ಜಿ. ಭಾಸ್ಕರ ಮಯ್ಯ

ಮತ ಧರ್ಮ ಸಂಸ್ಕೃತಿಗೆ ತನ್ನದೇ ಆದ ಒಂದು ಅರ್ಥಶಾಸ್ತ್ರವಿದ್ದು, ಅದರ ರೇಂಜ್ ಜಾಗತಿಕವಾಗಿದೆ. ಹಿಂದೂ ಧರ್ಮವೂ ಇಂದು ಆಧುನಿಕೋತ್ತರ ಕಾಲದಲ್ಲಿದೆ. ಇದರಲ್ಲಿ ಉಚ್ಚ ತಂತ್ರಜ್ಞಾನ, ಮಾಹಿತಿತಂತ್ರಜ್ಞಾನ ಇಲೆಕ್ಟ್ರಾನಿಕ್ ಮಾಧ್ಯಮಗಳು ಸೇರಿಕೊಂಡಿವೆ. ಕಾರ್ಪೊರೇಟ್ ವಿಭಾಗದ ಇದರ ಹಳೆಯ ಸಂಬಂಧಗಳು ನವೀಕರಿಸಲ್ಪಟ್ಟಿವೆ. ದೇಶದ ಅನೇಕ ಮಂದಿರಗಳ ಕಾರುಬಾರು ನೋಡಿದರೆ ಅವುಗಳು ಕಾರ್ಪೊರೇಟ್ ಸಂಸ್ಥೆಗಳೊಂದಿಗೇ ಸ್ಪರ್ಧೆಗಿಳಿದಿವೆ. ಆದರೆ ಈ ಮಂದಿರಗಳಲ್ಲಿ ಜಮೆಯಾಗುವ ಧನಸಂಪತ್ತು ಎಲ್ಲಿಗೆ ಹೋಗುತ್ತದೆ ಎಂಬ ಬಗ್ಗೆ ಕೂಡಾ ಸ್ಪಷ್ಟ ಲೆಕ್ಕಪತ್ರ ಸಿಗುವುದಿಲ್ಲ.

ಮಂದಿರಗಳ ಮರೆಯಲ್ಲಿ

ರಾಮಮಂದಿರ ಆಂದೋಲನ ದೇವಸ್ಥಾನಗಳ ಉತ್ಥಾನಕ್ಕೂ ಹೊಸ ಪ್ರೇರಣೆ ನೀಡಿತು. ರಾಜಸ್ಥಾನದ 'ಬಸಲಾ' ಹೋಬಳಿಯು ಬೆಟ್ಟಪ್ರದೇಶದಿಂದ ಕೂಡಿದ್ದು ನೀರಿನ ಅಲ್ಲಿ ಅಭಾವವಿದೆ. ಆ



ಹೋಬಳಿಯಲ್ಲಿ 40 ಹಳೆಬಾವಿಗಳು ಮುಚ್ಚಿಹೋಗಿವೆ. ಕಳೆದ ಕೆಲವೇ ವರ್ಷಗಳಲ್ಲಿ ಅಲ್ಲಿ 400 ದೇವಸ್ಥಾನಗಳಾದವು. ಆದರೆ ಬರೇ 4 ಬಾವಿಗಳ ಜೀರ್ಣೋದ್ಧಾರವಷ್ಟೇ ಆಗಿದೆ.

ಮಂದಿರಗಳ ಮರೆಯಲ್ಲಿ ಇಂದು ಅತ್ಯಂತ ಲಜ್ಜಾಸ್ಪದ ಕೃತ್ಯಗಳು ನಡೆಯುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಸ್ವಾಮಿಗಳ, ಮಹಂತರ, ಧರ್ಮಗುರುಗಳ ಜೀವನ ಅತ್ಯಂತ ವಿಲಾಸಮಯವಾಗಿದೆ. ಧರ್ಮಗುರುಗಳ ಜೀವನ ನೇರ ಸರಳ, ಪವಿತ್ರ, ತ್ಯಾಗಮಯ ಎಂಬುದೆಲ್ಲಾ ಪುಸ್ತಕದ ಬದನೇಕಾಯಿ. ಈಗ ಅವುಗಳಿಗೆ ತದ್‌ವಿರುದ್ಧ ಗುಣಗಳ ಭಂಡಾರವೇ? ತುಂಬಿಕೊಂಡಿದೆ. ಡೊಂಗೀ ಮೋಸ ಕಪಟಗಳಿಗೆಲ್ಲಾ ಹಲವು ಸ್ವಾಮಿಜೀಗಳೇ, ಅವರ ಮಠಗಳೇ ತವರುಮನೆ. ದೊಡ್ಡ ದೊಡ್ಡ ಸ್ವಾಮಿಗಳು ಅತ್ಯಂತ ಬೆಲೆಬಾಳುವ ಕಾರಿನಲ್ಲಿ ಸಂಚರಿಸುತ್ತಾರೆ. ಅವರ ಹಿಂದೆ ಮೋಟಾರವಾಹನಗಳ ಸಾಲೇ ಇರುತ್ತದೆ. ಮಾಧ್ಯಮದವರನ್ನು ಅವರು ಅದಾ ಹತ್ತಿರದಲ್ಲೇ ಇರಿಸಿಕೊಳ್ಳುತ್ತಾರೆ. ಸೆಟಲೈಟ್ ಚಾನಲ್‌ಗಳಿಂದಾಗಿ ಈ ಸ್ವಾಮಿಗಳ ಮುಖ ಮಂಡಲವು ಪ್ರಭಾವಲಯದಿಂದ ಪ್ರದೀಪ್ತವಾಗಿರುತ್ತದೆ!

ಭಾರತದಲ್ಲಿರುವ ಸಾಧು ಸಂತರ ಸಂಖ್ಯೆ ಸುಮಾರು ಒಂದು ಕೋಟಿಯೆಂದು ಅಂದಾಜಿಸಲಾಗಿದೆ. ಸಾಧುಗಳ ವ್ಯಕ್ತಿತ್ವವನ್ನು ಅಧ್ಯಯನ ಮಾಡಿದರೆ ಅವರು ಸಮಾಜದಲ್ಲಿ ಒಂದು ಬಗೆಯ 'unfit' ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಅವರು ಮಹತ್ವಾಕಾಂಕ್ಷಿಗಳು, ಅಸಂತುಷ್ಟರು ಅಥವಾ ಪಲಾಯನವಾದಿಗಳು. ಈಗ ಕೆಲವು ಸ್ವಾಮಿಗಳು ಹಿಂದೂ ಭಯೋತ್ಪಾದಕ ರಾಗಿರುವುದು, ಕೋಮುವಾದ, ಭಯೋತ್ಪಾದನೆಯನ್ನು ಸಮರ್ಥಿಸುತ್ತಿರುವುದು ಮಾಧ್ಯಮಗಳಿಂದ ಪ್ರಕಟವಾಗಿರುವ ವಿಚಾರ.


'ಆಸ್ಥಾ' ಚಾನೆಲ್ ಜಗತ್ತಿನ 167 ದೇಶಗಳಲ್ಲಿ ಪ್ರಸಾರವಾಗುತ್ತದೆ. ಈ ಚಾನೆಲ್‌ನಲ್ಲಿ ಮುಖ್ಯವಾಗಿ ಇಸ್ಕಾನ್, ಸ್ವಾಮಿನಾರಾಯಣಸಂಪ್ರದಾಯ, ಬ್ರಹ್ಮಕುಮಾರಿ, ಪ್ರಜ್ಞಾ ಮಿಶನ್, ಶ್ರೀ ರವಿಶಂಕರ್ ಇತ್ಯಾದಿಗಳ ಪ್ರಚಾರ ಭಾಷಣಗಳಿರುತ್ತವೆ.

'ಸಂನ್ಯಾಸ' ಇಂಫೊ ಟಿ.ವಿ ಯ ಪ್ರಸಾರವು ದಿನದ 24 ಗಂಟೆಯೂ ಇರುತ್ತದೆ. ಈ ಚಾನೆಲ್‌ನಲ್ಲಿ ಸಂತರ ಪ್ರವಚನ, ಕೀರ್ತನೆ, ಭಜನೆ, ಆರತಿ ಇತ್ಯಾದಿಗಳಿರುತ್ತವೆ.

ಇಸ್ಕಾನ್

ಇಸ್ಕಾನ್‌ನ ಸಮಾಜ ಸೇವೆ, ಕೃಷ್ಣ ಭಕ್ತಿ ಜಗದ್ವಿಖ್ಯಾತವಿದೆ. ಕೃಷ್ಣನ ಒಲುಮೆಗೆ ಪಾತ್ರರಾದ ಬಿಳಿಯರನ್ನು ಕಂಡು ನಮ್ಮವರಿಗೆ ಅತ್ಯಾಶ್ಚರ್ಯವಾಗುತ್ತದೆ. ಒಂದು ವಿದೇಶೀ ಸಮುದಾಯ ಹೇಗೆ ಕೃಷ್ಣ ಭಕ್ತಿಯಲ್ಲಿ ತಲ್ಲೀನವಾಗಿದೆ ಎಂದು ಗದ್ಗದಿತರಾಗುತ್ತಾರೆ. ಆದರೆ, ಇಸ್ಕಾನ್ ವಿದೇಶೀ ಮೂಲದ್ದಲ್ಲ. ಅದರ ಸ್ಥಾಪಕ 'ಅಭಯಚರಣ್ ಡೇ' ಎಂಬ ಹೆಸರಿನ ಕಲ್ಕತ್ತಾದ ನಿವಾಸಿ. ಆತ ಹುಟ್ಟಿದ್ದು 1896ರಲ್ಲಿ. ಡಿಗ್ರಿ ತನಕ ಓದಿದ್ದ ಅಭಯ್ ಚರಣ್ ಚೈತನ್ಯಪಂಥದ 'ಭಕ್ತಿ ಸಿದ್ಧಾಂತ ಸರಸ್ವತಿ' ಎಂಬ ಸಾಧುವಿನ ಶಿಷ್ಯನಾದ. 1932ರಲ್ಲಿ ಆತನಿಂದ ಸನ್ಯಾಸಿ ದೀಕ್ಷೆ ಪಡೆದ. 1936ರಲ್ಲಿ ಭಕ್ತಿ ಸಿದ್ಧಾಂತ ಸತ್ತು ಹೋದ ಮೇಲೆ ಆತನ ಮಠದ ಉತ್ತರಾಧಿಕಾರದ ವಿಚಾರದಲ್ಲಿ ಸಾಕಷ್ಟು ವಿವಾದವಿದ್ದರೂ ಅಭಯಚರಣ್ ತನ್ನ ಶಕ್ತಿಸಾಮರ್ಥ್ಯಗಳಿಂದ ಮಠದ ಉತ್ತರಾಧಿಕಾರಿ ಯಾದ. ದಿಲ್ಲಿಯಿಂದ ಆತ 'Back godhood? ಎಂಬ ಪತ್ರಿಕೆ ಆರಂಭಿಸಿದ. ಕೊನೆಗೆ ಯಮುನ ನದಿಯ ದಂಡೆಯಲ್ಲಿರುವ ಬೃಂದಾವನದಲ್ಲಿ ವಾಸಿಸತೊಡಗಿದ. ಈತನ ಹೊಸ ಹೆಸರು 'ಅಭಯಚರಣಾರವಿಂದ ಭಕ್ತಿ ವೇದಾಂತ ಸ್ವಾಮಿ'. 1965 ಆಗೋಸ್ತ್ 13 ರಂದು ಆತ ಅಮೆರಿಕಾಕ್ಕೆ ಹೋದ. ಅಲ್ಲಿ ಆತ 'International society of Srikrishna consciousness (ಇಸ್ಕಾನ್) ಸ್ಥಾಪಿಸಿದ. 9 ಸಪ್ಟೆಂಬರ್ 1966ರಲ್ಲಿ ಅದರ ಮೊದಲ ದೀಕ್ಷಾ ಸಮಾರಂಭವನ್ನು ಏರ್ಪಡಿಸಿದ. ಮೊದಲಿಗೆ 11 ಜನ ಶಿಷ್ಯರು ಆತನಿಂದ ದೀಕ್ಷೆ ಪಡೆದರು. ಆತ ತನ್ನ ವಿದೇಶೀ ಶಿಷ್ಯರ ಜತೆ ಭಾರತಕ್ಕೆ ಮರಳಿದ. ಅವರ ವೇಷಭೂಷಣವೆಲ್ಲ ಭಾರತೀಯ. ಕುತ್ತಿಗೆಯಲ್ಲಿ ಜಪಮಾಲೆ, ಹೆಗಲಲ್ಲಿ ಜೋಳಿಗೆ, ಬೋಳುತಲೆ, ಜುಟ್ಟು. ಅವರು ಗಟ್ಟಿಯಾಗಿ ಬೊಬ್ಬಿರಿದು ಹಾಡುತ್ತಿದ್ದರು. ಅವರ ಹೆಸರುಗಳು ಸಂಸ್ಕೃತದಲ್ಲಿರುತ್ತಿದ್ದವು. ಇವರನ್ನೆಲ್ಲ ಕಂಡು ಭಾರತೀಯರಿಗೆ ಆಶ್ಚರ್ಯವೊ ಆಶ್ಚರ್ಯ. ಕೆಲಕಾಲದ ನಂತರ ಈ ಸ್ವಾಮಿ ಅಮೆರಿಕಾದಲ್ಲಿ ನೆಲಸಿದ. 14 ನವೆಂಬರ್ 1977ರಲ್ಲಿ ತನ್ನ 81ನೆಯ ವಯಸ್ಸಿನಲ್ಲಿ ವೃಂದಾವನದ ಕೃಷ್ಣ ಬಲರಾಮ ಮಂದಿರದಲ್ಲಿ ಆತ ತೀರಿಕೊಂಡ. ಅಷ್ಟರೊಳಗೆ ಆತ ಸ್ಥಾಪಿಸಿದ ಇಸ್ಕಾನ್ ಜಗತ್ತಿನಾದ್ಯಂತ ಪಸರಿಸಿತ್ತು. ಜಗತ್ತಿನೆಲ್ಲೆಡೆ ಇಸ್ಕಾನ್‌ನ ನೂರಾರು ಮಂದಿರಗಳಿವೆ. ಸೋವಿಯತ್ ರಷ್ಯ ಕೂಡಾ ಇಸ್ಕಾನ್ ಮಂದಿರ ಸ್ಥಾಪಿಸಲು ಅನುಮತಿಕೊಟ್ಟಿತ್ತು. ಈ ಭಕ್ತಿ ವೇದಾಂತ ಸ್ವಾಮಿ 50 ಕ್ಕಿಂತ ಹೆಚ್ಚು ಪುಸ್ರಕಗಳನ್ನು ಬರೆದಿದ್ದ. ಅವುಗಳು ಕೋಟಿಗಟ್ಟಲೆ ಸಂಖ್ಯೆಯಲ್ಲಿ ಮಾರಾಟವಾಗಿವೆ. ಆತ ಬದುಕಿರುವಾಗಲೇ ಆ ಪುಸ್ತಕಗಳು ಜಗತ್ತಿನ 23 ಭಾಷೆಗಳಿಗೆ ಅನುವಾದಗೊಂಡಿದ್ದವು. ಆತ ಸ್ಥಾಪಿಸಿದ ಇಸ್ಕಾನ್ ಈಗ ಹೇಗಿದೆ?

ಅಮೆರಿಕಾದ 40 ಸಾವಿರ ಕೋಟಿ ಮಾನಹಾನಿ ಕೇಸಿನಲ್ಲಿ ಇಸ್ಕಾನಿನ ಭಾರತದ ಎರಡು ಶಾಲೆಗಳೂ ಸೇರಿವೆ. ಇಸ್ಕಾನ್ 'ಅತಿದೊಡ್ಡ ಅಪರಾಧಿ'ಯೆಂದು ಸಾಬೀತಾಗಿದೆ. ಈ ಮೊಕದ್ದಮೆಯ ಸಾರ: ಇಸ್ಕಾನ್ ಮುಖಂಡರು ಶಾಲೆಯ ಅಪ್ರಾಪ್ತ ವಯಸ್ಕ ಮಕ್ಕಳನ್ನು ಲೈಂಗಿಕ ವ್ಯಾಪಾರಕ್ಕೆ ಬಳಸುತ್ತಿದ್ದಾರೆ. ಇಸ್ಕಾನ್‌ನ ಎಲ್ಲಾ ಶಾಲೆಗಳಲ್ಲೂ ಈ ಬಗೆಯ ದುರಾಚಾರ ನಡೆಯುತ್ತಿದೆ. ಇದಕ್ಕೆ ಹೆಚ್ಚು ಬಲಿಯಾದವರು ಅಮೆರಿಕಾ ಮತ್ತು ಕೆನಡಾದ ಮಕ್ಕಳು. ಮುಖ ಮೈಥುನ, ಬಲತ್ಕಾರ, ಸಂಭೋಗ.. ಇತ್ಯಾದಿ ಜಿಗುಪ್ಸೆ ತರುವ ಕೃತ್ಯಗಳು ಅಲ್ಲಿ ನಡೆಯುತ್ತವೆ. ಇದರ ಜತೆಗೆ ಮಾದಕ ಪದಾರ್ಥಗಳ ಕಳ್ಳ ಮಾರಾಟ, ಇನ್ನಿತರ ಸಮಾಜಬಾಹಿರ ಕೃತ್ಯಗಳು ಅಲ್ಲಿ ನಡೆಯುತ್ತವೆ. ಅನುದಾನ ಕೊಡುವವರಿಗೆ ವಿಶೇಷ ಸೌಲಭ್ಯದ ಹೆಸರಿನಲ್ಲಿ ಗುರುಕುಲದ ಹುಡುಗಿಯರನ್ನು ಸಪ್ಲೈ ಮಾಡುವುದು ಅವರ ವಿಶೇಷ ಕಾಯಕ. ಈ ದುರಾಚಾರಗಳು ಅತೀ ಹೆಚ್ಚಾಗಿ ನಡೆದುದು 1972ರಿಂದ 1990ರ ನಡುವಿನ ಕಾಲಾವಧಿಯಲ್ಲಿ.





ಇದು ಇಸ್ಕಾನ್‌ನ ಸಂಕ್ಷಿಪ್ತ ಪರಿಚಯ.

ಪ್ರಜಾಪಿತ ಬ್ರಹ್ಮಕುಮಾರ-ಕುಮಾರಿಯರ ಸಂಘ:

ಅವತಾರವಾದದ ನೆಲಗಟ್ಟಿನ ಮೇಲೆ ನಿಂತಿರುವುದೇ ಪ್ರಜಾಪಿತ ಬ್ರಹ್ಮಕುಮಾರಿಯರ ಸಂಘ. ಇದರ ಸಂಸ್ಥಾಪಕ ಸಿಂಧ್ ಪ್ರಾಂತದ 'ದಾದಾ ಲೇಖರಾಜ್ ಔಹರಿ'. ಆತನೇ ಹೇಳುವಂತೆ ಒಂದು ದಿನ ಭಗವಾನ್ ವಿಷ್ಣುವು ಆತನಿಗೆ 'ನೀನೇ ವಿಷ್ಣು' ಎಂದನಂತೆ. ಆತನೊಳಗೆ ಒಂದು ಅಂತರ್ವಾಣಿಯಾಯಿತು. 'ನೀನೊಂದು ದಿವ್ಯವಾದ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಿದೆ. ಕಲಿಯುಗವನ್ನು ಕೊನೆಗೊಳಿಸಿ ದಿವ್ಯ ರಾಜಕುಮಾರ ರಾಜಕುಮಾರಿಯರ ವಿಶ್ವವನ್ನು ಸ್ಥಾಪಿಸಬೇಕಾಗಿದೆ'. ಕೆಲವರಿಗೆ ಹಿಡಿಯುವ ದೇವರ ಹುಚ್ಚು ಎಷ್ಟೊಂದು ಸಾಂಕ್ರಾಮಿಕವಾದುದೆಂದರೆ ಅದರೆದುರು ಪ್ಲೇಗು, ಮಹಾಮಾರಿಗಳೆಲ್ಲಾ ಏನೂ ಅಲ್ಲ. ಹೀಗೆ ಔಹರಿಗೆ ಭೂತ ಮೆಟ್ಟಿದ್ದು 1936ರಲ್ಲಿ. ಈ ಮಿಶನ್ ಹೆಸರು 'ಓಮ್ ಮಂಡಳಿ' ಕೊನೆಗದೊಂದು ದೊಡ್ಡ ಸ್ತ್ರೀಮಂಡಳಿಯಾಗಿ ಮಾರ್ಪಟ್ಟಿತು. ಆತ 1951ರಲ್ಲಿ ತನ್ನ ಶಿಷ್ಯರಿಂದೊಡಗೂಡಿ ಭಾರತಕ್ಕೆ ಬಂದು ಬ್ರಹ್ಮಕುಮಾರಿ ಆಂದೋಲನ ಪ್ರಾರಂಭಿಸಿದ. ಇದರ ಕೇಂದ್ರ ಸ್ಥಾನ ರಾಜಸ್ಥಾನದ ಮೌಂಟ್ ಅಬೂವಿನಲ್ಲಿದೆ. ಸದ್ರಿ ಔಹರಿ 1969ರಲ್ಲಿ ಸತ್ತುಹೋದ. ಈಗ ಸದ್ಯ ಮೆಟ್ರಿಕ್‌ವರೆಗಷ್ಟೇ ವಿದ್ಯಾಭ್ಯಾಸ

ಪುಟ 12 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ಶ್ಲಾಘನೀಯ ಪ್ರಯತ್ನ : ಬೆಳೆಯಲಿ ವಿಶಾಲ ಪ್ರತಿರೋಧ

ಕೋಮುವಾದ ಮತ್ತು ಭಯೋತ್ಪಾದನೆ ವಿರುದ್ಧ ರಾಜ್ಯದಾದ್ಯಂತ ಸಿಪಿಐಎ(ಂ) ನೇತೃತ್ವದಲ್ಲಿ 'ಸೌಹಾರ್ದ ಕರ್ನಾಟಕ' ನಾಲ್ಕು ಜಾಥಾಗಳು ಕಳೆದ ಹದಿನೈದು ದಿನಗಳ ಕಾಲಸಂಚರಿಸಿ ಬೆಂಗಳೂರಿನಲ್ಲಿ ಸಮಾಗಮವಾಗುತ್ತಿರುವ ಘಟನೆ ನಿಜಕ್ಕೂ ಐತಿಹಾಸಿಕವಾಗಿದೆ. ಪ್ರತಿ ಜಾಥಗಳಲ್ಲಿ ಹಾಡುಗಳು, ಮಾತುಗಳ ಮೂಲಕ ನಾಡಿನ ಜನತೆಗೆ ಒಂದು ಸ್ಪಷ್ಟ ಸಂದೇಶವನ್ನೂ ನೀಡಿದೆ. ಸೌಹಾರ್ದತೆ, ಶಾಂತಿಯನ್ನು ಬಯಸುವ ಶಕ್ತಿಗಳಿಗೆ, ನಾಗರಿಕರಿಗೆ ಹುಮ್ಮಸ್ಸು ನೀಡಿದೆ.


ಕೋಮುವಾದಿಗಳು, ಭಯೋತ್ಪಾದಕ ಶಕ್ತಿಗಳು ಒಂದೇ ಗುರಿಯಿಟ್ಟುಕೊಂಡು ಕಾರ್ಯಚರಣೆ ಮಾಡುತ್ತಿವೆ. ನಾಡಿನ ಸಾಮರಸ್ಯವನ್ನು, ಹಾಳುಗೆಡುವುದು, ವೈವಿಧ್ಯತೆಯ, ಬಹುಮುಖಿ ಸಂಸ್ಕೃತಿಯನ್ನು ಧ್ವಂಸಿಸಿ, ಭಾರತದ ಮೂಲ ಅಡಿಪಾಯವಾಗಿರುವ ಜಾತ್ಯಾತೀತ, ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡಲು ಬಯಸುತ್ತವೆ. ನಗ್ನ ಫ್ಯಾಶಿಸ್ಟ್ ಮಾದರಿ ಆಡಳಿತ ಹೇರಲು ಹವಣಿಸುತ್ತವೆ. ಅವಕ್ಕೆ ಧರ್ಮವೆಂಬುದನ್ನು ರಕ್ಷಣಾಗೋಡೆಯಾಗಿ ಬಳಸಲು ನೋಡುತ್ತವೆ. ವಾಸ್ತವದಲ್ಲಿ ಅವು ಎಲ್ಲಾ ಧರ್ಮಗಳ ಸಾರಕ್ಕೆ ವಿರುದ್ಧವಾಗಿವೆ. ಕರ್ನಾಟಕದಲ್ಲಿ ಹೇಗಾದರೂ ಅಧಿಕಾರ ಯಂತ್ರ ಕೈವಶ ಮಾಡಿಕೊಳ್ಳಬೇಕೆಂದು ಬಿಜೆಪಿ-ಸಂಘಪರಿವಾರ ಹಲವು ದಶಕಗಳಿಂದ ಸತತವಾಗಿ ಯತ್ನಿಸುತ್ತಲೇ ಬಂದಿದೆ. ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಮಾತನಾಡಿದರೂ, ಅದು ಕೋಮು ವಿಭಜನೆಯ ದ್ವೇಷದ ದಾವಾಗ್ನಿ ಹೊತ್ತಿಸಿ ಬೆಳೆಯುವ ಹುನ್ನಾರಗಳು ಹಲವು ಕಡೆ ನಡೆಸಿದೆ. 2008ರ ಮಧ್ಯಂತರ ಚುನಾವಣೆಯಲ್ಲಿ ಅಧಿಕಾರ ವಂಚಿತರೆಂಬ ಅನುಕಂಪ ಹಿಡಿದು ಪಕ್ಷೇತರರನ್ನೂ ಸೆಳೆಯುವ ಹಲವು ಆಮಿಷಗಳ ಕಸರತ್ತುಗಳೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಅಭಿವೃದ್ಧಿಯೇ ಪರಮ ಗುರಿ ಎಂದು ಹೇಳಿದ್ದನ್ನೂ ಮರೆತಿದೆ. ಅದರ ಆರ್ಥಿಕ ನೀತಿಗಳು ಜನರ ಮೇಲೆ ಸಂಕಷ್ಟಗಳ ಹೂರೆ ಹೇರುತ್ತಿದೆ. ಬವಣೆಗಳು ಹೆಚ್ಚುತ್ತಿವೆ. ಇದರೊಂದಿಗೆ ಇವುಗಳನ್ನು ಮರೆ ಮಾಚಲು ಅದು ಹಿಂದುತ್ವದ ಕೋಮುವಾದೀ ರಾಜಕಾರಣಕ್ಕೆ ಇಳಿದಿದೆ. ಈ ಅಧಿಕಾರದ ಅವಕಾಶವನ್ನು ಆರ್‌ಎಸ್‌ಎಸ್ ಬಳಸಿ ಬೆಳೆಸುವ ಕಾರ್ಯಾಚರಿಸುತ್ತಿದೆ. ಹೀಗಾಗಿ ಪ್ರತಿನಿತ್ಯವೂ ಗೋವಿನ ಹೆಸರಿನಲ್ಲಿ, ಮತಾಂತರದ ಹೆಸರಿನಲ್ಲಿ, ಭಯೋತ್ಪದನೆಯ ನೆಪದಲ್ಲಿ ಮುಸ್ಲಿಂ-ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ, ಅಸಂಖ್ಯ ದಲಿತರ -ಹಿಂದುಳಿದ ಜಾತಿ ವಿಭಾಗಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿ ನಡೆಸುತ್ತಿದೆ.

ಹಾಗೆಯೇ ಬಡತನ, ಅನಕ್ಷರತೆ, ಇತ್ಯಾದಿಗಳಿಂದ ಬಳಲುವ ಅಲ್ಪಸಂಖ್ಯಾತರಲ್ಲಿನ ಆತಂಕವನ್ನೂ ಮುಸ್ಲಿಂ ಮೂಲಭೂತವಾದಿಗಳು ಬಳಸುತ್ತಿದ್ದಾರೆ. ಹಿಗಾಗಿ ಇದು ಒಂದು ಗಂಭಿರವಾದ ಸವಾಲಿನ ಸಂದರ್ಭವಾಗಿದೆ. ಇಂತಹ ಶಕ್ತಿಗಳನ್ನು ಎಲ್ಲಾ ಧರ್ಮಗಳ ಜನತೆಯೂ ತಿರಸ್ಕರಿಸಬೇಕಿದೆ.

ಇತ್ತಿಚಿಗೆ ಮುಂಬಯಿಯಲ್ಲಿ ನಡೆದ ಭಯೋತ್ಪಾದನೆ ಧಾಳಿ, ಮಾಲೆಗಾಂವ್‌ನ ವಿಚಾರಣೆಯಲ್ಲಿ ಹೊರಬಂದ ಸಂಗತಿಗಳು ಭಯೋತ್ಪಾದನೆಗೆ ಯಾವುದೇ ಧರ್ಮವಿಲ್ಲ ಎಂಬುದನ್ನೂ ತೋರಿಸಿವೆ. ಕೋಮುವಾದವು ಭಯೋತ್ಪಾದನೆಯಾಗಿ ಬೆಳೆಯುತ್ತಿರುವುದು, ಅಮೇರಿಕಾ ಸಾಮ್ರಾಜ್ಯ ಶಾಹಿಗಳ ಹೆಚ್ಚಿದ ಮಧ್ಯಪ್ರವೇಶವು ಭಾರತದ ಐಕ್ಯತೆಗೆ, ಸಮಗ್ರತೆಗೆ ಗಂಡಾಂತಾರಕಾರಿಯಾಗಿದೆ. ಪರಿಸ್ಥಿತಿ ಹೀಗಿದ್ದರೂ ಬಿಜೆಪಿ ಹೋಗಲಿ, ಕಾಂಗ್ರೆಸ್ ನಂತಹ ಪಕ್ಷಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದೇ ಇರುವುದು ಅವುಗಳ ಜಾತ್ಯಾತೀತತೆಯ ಮಿತಿಗಳನ್ನು ಹೊರಹಾಕಿದೆ. ಬಹುತೇಕ ಪಕ್ಷಗಳು ಹೀಗಿರುವಾಗ ಸಿಪಿಎಂನ ಮುತುವರ್ಜಿ ಶ್ಲಾಘನೀಯ.

ರಾಜ್ಯದಲ್ಲಿ ಸಂಚರಿಸಿದ ಈ ಜಾಥಾಗಳಿಗೆ ಜನತೆಯು ಅಪೂರ್ವವಾಗಿ ಸ್ಪಂದಿಸಿರುವುದು ನಿಜಕ್ಕೂ ಆಶಾದಾಯಕ ಸಂಗತಿಯಾಗಿದೆ. ಜಾತಿ-ಮತಗಳ ಭೇದವಿಲ್ಲದೇ ಸೌಹಾರ್ದತೆಯ ಸಂದೇಶಕ್ಕೆ ಜನತೆ ಸ್ಪಂದಿಸಿದ್ದಾರೆ. ಇದು ನಮ್ಮ ನಾಡಿನ ಪರಂಪರೆಯ ಅಭಿವ್ಯಕ್ತಿಯಾಗಿದೆ. ಈ ಅಭಿಮತದ ಶಕ್ತಿಗಳನ್ನು ಕೋಮುವಾದಿ-ಭಯೋತ್ಪಾದಕ ಶಕ್ತಿಗಳಿಗೆ ಪ್ರತಿರೋಧದ ಶಕ್ತಿಯಾಗಿ ಇನ್ನೂ ಹೆಚ್ಚು ವಿಸ್ತಾರಗೊಳ್ಳಬೇಕಿದೆ. ಈ ದೆಶೆಯಲ್ಲಿ ಇನ್ನೂ ಪ್ರಯತ್ನಗಳು ಇಮ್ಮಡಿಗೊಳ್ಳಲಿ.


ಆಯೋಗ ಸೃಷ್ಟಿಸಿದ ಆತಂಕ !



ಸಂಜೆ 8ರ ಸುಮಾರು ಅದು ಡಿಶೆಂಬರ್ 17, ಮಂಗಳೂರಿನ ಸಂಗಾತಿ ಫೋನ್ ಮಾಡಿದ್ದರು. 'ಇದೀಗ ಪಿ.ಬಿ.ಡೇಸಾರವರ ಕಛೇರಿ ಮೇಲೆ ಧಾಳಿ ನಡೆದಿದೆ. ಅವರ ಕಛೇರಿಯ ಪೀಠೋಪಕರಣ, ಕಂಪ್ಯೂಟರ್, ಗಾಜಿನ ಬಾಗಿಲು ಇತ್ಯಾದಿಗಳನ್ನು ಧ್ವಂಸ ಮಾಡಿದ್ದಾರೆ. ಅಲ್ಲಿದ್ದ ಅವರ ಪತ್ನಿ ಮೇಲೂ ಹಲ್ಲೆಯಾಗಿದೆ. ಇಷ್ಟೆಲ್ಲಾ ಮುಗಿಸಿಕೊಂಡು ಧಾಳಿಕೋರರು ಅನಾಯಾಸವಾಗಿ ಹೋಗಿದ್ದಾರೆ. ಅವರೆಲ್ಲಾ ಬಜರಂಗದಳದವರು ಎಂಬುದರಲ್ಲಿ ಅನುಮಾನವೇ ಇಲ್ಲ.' ಈ ಡೇಸಾರವರು ಹಿರಿಯರು, ವಿಚಾರವಂತರು, ಕೋಮುವಾದ, ಪ್ರಜಾಪ್ರಭುತ್ವದ ಮೇಲಿನ ಧಾಳಿಗಳನ್ನು ಗಟ್ಟಿ ದನಿಯಲ್ಲಿ ವಿರೋದಿಸುತ್ತಾ ಬಂದವರು. ಹೀಗಾಗಿ ಎರಡು ವರ್ಷಗಳಲ್ಲೇ ಇದು ಮೂರನೆಯ ಧಾಳಿ. ಒಮ್ಮೆಯಂತೂ ಅವರ ಮೇಲೆ ಮರಣಾಂತಿಕವಾದ ಧಾಳಿಯೇ ನಡೆದಿತ್ತು. ಸೆಕ್ಯುಲರಿಸಂ, ಪ್ರಜಾಪ್ರಭುತ್ವಕ್ಕಾಗಿ ಎತ್ತುವ ದನಿಯನ್ನು, ಯಾರೇ ಏಷ್ಟೇ ಯತ್ನಿಸಿದರೂ ಅದನ್ನು ಉಡುಗಿಸಲು ಆಗಿಲ್ಲ. ಈಗಿನ ಧಾಳಿಗೂ ಒಂದು ಹಿನ್ನೆಲೆಯಿದೆ.

ಅಟ್ಟಹಾಸಕ್ಕೆ ಮಣೆ

ಸಂಘಪರಿವಾರ ಈ ಅವಧಿಯಲ್ಲಿ ಮಂಗಳೂರಿನ 'ಕರಾವಳಿ ಅಲೆ' ಪತ್ರಿಕೆಯ ಮೇಲೆ ಮತ್ತೇ ಧಾಳಿ ನಡೆಸಿ ಪತ್ರಿಕೆ ಮಾರಾಟ ಮಾಡದಂತೆ, ಪ್ರಸಾರಿಸದಂತೆ ಯತ್ನಿಸಿದೆ. ಇದನ್ನು ಸುಮಾರು 50ಕ್ಕು ಹೆಚ್ಚಿನ ಸಂಘಟನೆಗಳು ಪ್ರತಿಭಟನಾ ರಕ್ಷಣೆಗಾಗಿ ಬೀದಿಗೆ ಇಳಿದಿವೆ. ಇದರಲ್ಲಿ ಮಾನವ ಹಕ್ಕುಗಳ ಹೋರಾಟಗಾರರಾದ ಡೇಸಾ ಒಬ್ಬರು. ಹೀಗಾಗಿ ಅವರು ಬಜರಂಗದಳದ ಗುರಿ. ಅವರ ದಾಳಿ ಇಲ್ಲಿಗೆ ನಿಲ್ಲುವ ಲಕ್ಷಣಗಳಿಲ್ಲ. ಇನ್ನೂ ವಿಸ್ತರಿಸಬಹುದು. ಗೆಳೆಯರು ಹೇಳುವಾಗ ಒಂದಂತೂ ಖಾತ್ರಿಯಾಗಿತ್ತು. ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೋಲಿಸ್ ಇಲಾಖೆ, ಜಿಲ್ಲಾಡಳಿತ ದುಷ್ಟರ ಅಟ್ಟಹಾಸಕ್ಕೆ ಮಣೆಹಾಕಿ ಕುಳಿತಿತ್ತು. ಬಜರಂಗದಳದ ಗೂಂಡಾಗಳ ರಟ್ಟೆಗೆ ಕಸುವು ನೀಡಿತ್ತು.



ಇಂತಹ ಧಾಳಿ ಯಶಸ್ವಿ ಮುಗಿದ ಮೇಲೆ ಅಧಿಕಾರಿಗಳ 'ಪ್ರಮೋಷನ್' ಛಾನ್ಸ್ ಹೆಚ್ಚುತ್ತಾ ಇತ್ತು. ಇದು ಇಂತಹ ಹಲ್ಲೆ, ಹಿಂಸೆ ಕರಾವಳಿಯಲ್ಲಿ ನಿತ್ಯದ ಘಟನೆಗಳು.

ತೀರ ಇತ್ತೀಚಿಗೆ ಕಳೆದೆರಡು ತಿಂಗಳಲ್ಲಿ ಚರ್ಚ್‌ಗಳು ಹಾಗೂ ಕ್ರಿಶ್ಚಿಯನ್ನರ ಮೇಲೆ ಸಂಘಪರಿವಾರ, ಸರ್ಕಾರದ ಆಡಳಿತ ಯಂತ್ರ ನಡೆಸಿದ ಧಾಳಿಗಳಿಂದ ಇನ್ನೂ ಜನ ಚೇತರಿಸಿಕೊಂಡಿಲ್ಲ. ಇಂತಹ ಧಾಳಿಗಳ 'ವಿಚಾರಣೆಗೆ' ನೇಮಿಸಿದ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿಯೂ ಇಲ್ಲ. ಅದು ಇನ್ನೂ ವಿಚಾರಿಸುತ್ತ ಇದೆ. ಹೀಗಿರುವಾಗ ನಿಲ್ಲದ ಪುಂಡಾಟಿಕೆ , ಫ್ಯಾಶಿಸ್ಟ್ ಧಾಳಿಗಳು ಇದು ಕಾನೂನುನ್ನು ಕೈಗೆತ್ತಿಕೊಂಡವರ ಕಥೆ. ಇನ್ನೊಂದು ಕಡೆ ಕಾನೂನು ರಕ್ಷಿಸಬೇಕಾದವರ ಕಥೆಯೇನು? ಧಾಳಿಗಳು ನಡೆಸಿದ ಮೇಲೆ ಸಾರ್ವಜನಿಕರ ತೀವ್ರ ಒತ್ತಡಗಳ ನಂತರ ಅರೆ ಮನಸ್ಸಿನಿಂದಲೇ ಬಿಜೆಪಿ ಸರ್ಕಾರ ಒಂದು ವಿಚಾರಣಾ ಆಯೋಗವನ್ನು ರಚಿಸಿದೆ. ಅದರ ನೇತೃತ್ವ ನಿವೃತ್ತ ನ್ಯಾಯಮೂರ್ತಿಗಳಾದ ಬಿ.ಕೆ. ಸೋಮಶೇಖರವರಿಗೆ ವಹಿಸಲಾಗಿದೆ. ಆಯೋಗದ ಅಧ್ಯಕ್ಷರೇ ಹೇಳಿದಂತೆ ಕರಾವಳಿ ಪ್ರದೇಶದಲ್ಲಿನ ಧಾಳಿಗಳ ಬಗ್ಗೆ ಹಲವರನ್ನು ಕೇಳಲಾಗಿದೆ. 274 ಪತ್ರಗಳು ಬಂದಿವೆ. ಹಲವೆಡೆಗಳಲ್ಲಿ ವಿಚಾರಣೆ ಮುಂದುವರಿದಿದೆ ಎಂದಿದ್ದಾರೆ. ಅಲ್ಲಿಯ ಜನ ತಮ್ಮ ಮೇಲಿನ ಧಾಳಿಯ ವಿವರಗಳನ್ನೆಲ್ಲಾ ಹೇಳಿದ್ದಾರೆ. ಆದ ನಷ್ಟಕ್ಕೆ ಸರ್ಕಾರ ಪರಿಹಾರ ಒದಗಿಸುವುದಾಗಿ ಪ್ರಕಟಿಸಿ ತಿಂಗಳಿಗಳೇ ಕಳೆದರೂ ಇಲ್ಲಿಯವರೆಗೂ ಏನೊಂದೂ ಕ್ರಮ ವಹಿಸಲಾಗಿಲ್ಲ ಎಂಬುದು ದೂರು. ಇದು ಆಯೋಗದ ಕಡತಕ್ಕೆ ಸೇರಿದೆ.

ನೀರು ಕೇಳಿದವರಿಗೆ ಬೆಂಕಿಯುಂಡೆ ಊಟ

ಈ ಆಯೋಗ ದಾವಣಗೆರೆಗೆ ಈಚೆಗೆ ಭೇಟಿ ನೀಡಿದೆ. ಕ್ರಿಶ್ಚಿಯನ್ನರ ಮೇಲೆ ವ್ಯವಸ್ಥಿತ ಧಾಳಿಯ ಪೂರ್ವ ತಯಾರಿ ತಾಲೀಮು ನಡೆದದ್ದೇ ಅಲ್ಲಿ. ಬಾಡ ಚರ್ಚ್‌ಗಳಲ್ಲಿ ಅಲ್ಲಿನ ಮೂರು ಪ್ರಾರ್ಥನಾ ಮಂದಿರಗಳ ಮೇಲೆ ಬಜರಂಗದಳ -ಬಿಜೆಪಿ ಧಾಳಿ ನಡೆಸಿದ ಬಳಿಕ ಚರ್ಚ್‌ಗಳಿಗೆ ಬೀಗ ಹಾಕಲಾಗಿದೆ. ಸಂಘ ಪರಿವಾರ ಕೇಳುತ್ತಿರುವುದು ಇದೆ ಆಗಿತ್ತು. ಇದನ್ನೇ ಅನುಸರಿಸಿ ಬಿಜೆಪಿ ನೇತೃತ್ವದ ದಾವಣಗೆರೆ ಮಹಾನಗರ ಪಾಲಿಕೆ ಕುಡಿಯುವ ನೀರು, ವಿದ್ಯುತ್ ಸರಬರಾಜನ್ನು ಕಟ್ ಮಾಡಿತ್ತು. ಇದನ್ನು ತೆರವುಗೊಳಿಸಲು ಕ್ರೈಸ್ತರು ನ್ಯಾಯಾಲಯದ ಮೊರೆಹೋಗಿದ್ದಾರೆ. ಈಗ ಕ್ರಿಸ್‌ಮಸ್ ಸಮಯ ಹಬ್ಬದ ಆಚರಣೆಗೆ, ಪ್ರಾರ್ಥನೆಗೂ ಆವಕಾಶಬೇಕು. ಅದಕ್ಕಾಗಿ ಆಯೋಗದ ಮುಂದೆ ಮನವಿ ಸಲ್ಲಿಸಿದ ಕ್ರೈಸ್ತರು ಬೀಗ ಮುದ್ರೆ ತೆಗೆಯುವಂತೆ ಕೋರಿದ್ದಾರೆ. ಡಿಶೆಂಬರ 17ರಿಂದ ಜನವರಿ 1ರವರೆಗೆ ಹಬ್ಬವಿರುವುದನ್ನು ಪ್ರಸ್ತಾಪಿಸಿದ್ದಾರೆ. ನಂತರವೂ ತಮ್ಮ ಪ್ರಾರ್ಥನೆಗೆ ಅಬಾಧಿತ ಅವಕಾಶ ಇರಬೇಕೆಂದು ಕೇಳಿದ್ದಾರೆ.

ಇವುಗಳನ್ನು ಆಯೋಗದ ಮುಂದೆ ಮಂಡಿಸಿದ್ದು ಸೂಕ್ತವೇ ಆಗಿದೆ. ಇದನ್ನು ಅನುಸರಿಸಿ ಆಯೋಗ , ಜಿಲ್ಲಾಡಳಿತಕ್ಕೆ ಸೂಕ್ತ ಕ್ರಮ ಅನುಸರಿಸಲು ನೀಡಿದ ಮಧ್ಯಂತರ ವ್ಯವಸ್ಥೆಯ ಆದೇಶ ಮಾತ್ರ "ನೀರು ಅರಸಿ ಬಂದವನಿಗೆ ಬೆಂಕಿಯ ಭರ್ಜರಿ ಊಟ' ಎಂಬಂತಾಗಿದೆ.

ನೀವು ಪ್ರಾರ್ಥಿಸುವಿರಾದರೆ ಚರ್ಚ್‌ನಲ್ಲಿ ಪ್ರಾರ್ಥನೆಗೆ ಕೋರಿಕೆ ಸಲ್ಲಿಸಿದವರು ತಮ್ಮ ಹೆಸರು, ವಿಳಾಸ, ವಿವರ, ಚರ್ಚ್‌ನ ಸ್ಥಾನ, ಮತ್ಯಾರು ಪ್ರಾರ್ಥನೆಗೆ ಬರಲಿದ್ದಾರೆ, ಸ್ಥಳದ ಮಾಲೀಕತ್ವ ಯಾರ ಕೈಯಲ್ಲಿದೆ ಇತ್ಯಾದಿಗಳ ಅಫಡೇವಿಟ್‌ನ್ನು ಜಿಲ್ಲಾಡಳಿತಕ್ಕೆ ಪೂರ್ವಭಾವಿಯಾಗಿ ಸಲ್ಲಿಸಬೇಕು. ಇದನ್ನು ಆಧರಿಸಿ ಜಿಲ್ಲಾಡಳಿತ ಅವಕಾಶ ನೀಡಬಹುದು, ಜಿಲ್ಲಾಡಳಿತ ಎಂದರೆ ಎಸ್.ಪಿ, ಡಿ.ಸಿ, ಹಿರಿಯ ಪೋಲಿಸ್ ಅಧಿಕಾರಿಗಳು,ಕಾರ್ಪೋರೇಷನ್ ಕಮಿಷನರ್ ಇತ್ಯಾದಿ ಹೀಗೆ. ಮನವಿ ಮಾಡಿದವರು ಶಾಂತಿ, ನಾಗರಿಕ ವರ್ತನೆ, ನಡವಳಿಕೆ ಹೊಂದಿರಬೇಕು . ಉತ್ತಮ ನಡತೆ ಇರಬೇಕು. ಇಲ್ಲಿ 'ಕಾನೂನುಬಾಹಿರ' ಚಟುವಟಿಕೆಗಳು ನಡೆಸಬಾರದು ಎಂದಿದೆ. (ಅದು ಯಾವುದೆಂದು ಆಯೋಗದ ಮನಸ್ಸಿನಲ್ಲಿ ಇರಬಹುದು) ಇಲ್ಲಿ ಪ್ರಾರ್ಥನೆ ಅಷ್ಟೇ ಮಾಡಬೇಕು. ಮನವಿದಾರರು ಯಾವುದೇ ಪ್ರಚೋದನಾತ್ಮಕ ಕೆಲಸಗಳಲ್ಲಿ ತೊಡಗಬಾರದು. ಬೇರೆ ಧರ್ಮೀಯರ ಮನಸ್ಸು ನೋಯಿಸಬಾರದು. ಜಿಲ್ಲಾಡಳಿತ ಯಾವಾಗ ಬೇಕಾದರೂ ಇಲ್ಲಿಗೆ ತಪಾಸಣೆಗೆ ಬರಬಹುದು. ಈಗ ವಿಧಿಸಿದ ಅಂಶಗಳಲ್ಲಿ ವ್ಯತಿರಿಕ್ತತೆಯನ್ನು ಆಡಳಿತ ಕಂಡರೆ ಅದು ನೀಡಿದ ಅವಕಾಶವನ್ನು ಹಿಂದೆ ಪಡೆಯಬಹುದು. ಸಮರ್ಥಿಸುವಂತಹ ಕಾರಣ ನೀಡಿ

ಪುಟ 12ಕ್ಕೆ

ಮತಾಂತರ ಯಾಕೆ?

ಯಾರಿಗೂ ಯಾರನ್ನೂ ಬಲತ್ಕಾರವಾಗಿ ಮತಾಂತರ ಮಾಡುವುದಕ್ಕೆ ಸಾಧ್ಯವೇ ಇಲ್ಲ. ದೇಶಾದ್ಯಂತ ಸಂಘ ಪರಿವಾರಗಳು ಕಣ್ಣಿನಲ್ಲಿ ಎಣ್ಣೆಹಾಕಿ ಕಾವಲು ಕಾಯುತ್ತಿರುವಾಗ ಬಲತ್ಕಾರದ ಮತಾಂತರ ಹೇಗೆ ಸಾಧ್ಯ?

ಎಲ್ಲರಂತೆ ನಿಲ್ಲಲು ಒಂದು ಸೂರು, ನಿಮ್ಮ ಹಾಗೆ ಬಂಗಲೆ, ಕಾರು ಬೇಕಾಗಿಲ್ಲ. ಸರಿಯಾದ ಶಿಕ್ಷಣ, ಉದ್ಯೋಗ, ಉಣ್ಣಲು ಎರಡು ಹೊತ್ತು ಅನ್ನ, ಕುಡಿಯಲು ತಿಳಿಯಾದ ನೀರು, ತೊಡಲು ಬಟ್ಟೆ, ಊಳಿ ಬಿತ್ತಲು ಭೂಮಿ, ಕಾಯಿಲೆ ಗುಣಪಡಿಸಲು ಸರಿಯಾದ ಔಷದ ಈ ದಲಿತರಿಗೂ ಬೇಕು ಅಲ್ಲವಾ? ನೀವು ಕೊಟ್ಟಿದ್ದೀರಾ? ಅಥವಾ ಇಂದಿನ ವ್ಯವಸ್ಥೆ ಕೊಟ್ಟಿದೆಯಾ?

ಈ ದಲಿತರುಗಳು ತಲೆತಲಾಂತರದಿಂದಲೂ ಮಾನಮುಚ್ಚುವುದಕ್ಕಾಗಿ ಒಡೆಯ ಬಿಟ್ಟು ಬಿಸಾಡಿದ ಹರಿದ ಬಟ್ಟೆ ಉಟ್ಟು ಅಂಗಳದ ಹೊರಗೆ ಪರಟೆಯಲ್ಲಿ ಸುರಿದ ಹಳಸಿದ ಗಂಜಿಯನ್ನು ಕುಡಿದು ದನದ ದಡ್ಡಿಯಲ್ಲಿ ವಾಸಮಾಡಿ ಕೆಲವರಿಗಾಗಿ ಹಗಲಿರುಳೂ ದುಡಿಯುತ್ತಾ ಬಂದವರು. ಮುಂದೆಯೂ ಇವರು ಹೀನಾಯ ಬಾಳನ್ನು ಬಾಳಬೇಕಾ?

ಇಂದಿಗೂ ಇವರು ಗಂಟಲು ಆರಿಬಂದರೆ ಕೆರೆಯ ನೀರನ್ನು ಮುಟ್ಟಲು ಕೊಡುತ್ತಿಲ್ಲ, ಈ ಹೊತ್ತಿಗೂ ಉಂಡೆಸೆದ ಎಂಜಲು ಬಾಳೆಗಳಲ್ಲಿ ಮಿಕ್ಕಿದ ಕೂಳನ್ನು ಆರಿಸಿ ತಿನ್ನುವ ಹೀನಾಯ ಪರಿಸ್ಥಿತಿ ಇದೆ. ಈ ಶತಮಾನದಲ್ಲಿಯೂ ಅಮಾನುಷ ಮಲ ಹೊರಿಸುವ ನಾಚಿಕೆಗೇಡಿದೆ. ಕ್ಷೌರದವರು ಕ್ಷೌರ ಮಾಡಿದರೆ ಅವರ ಅಂಗಡಿಗೇ ಬಹಿಷ್ಕಾರ ಹಾಕುವ ನೀಚತನವಿದೆ. ಇವರನ್ನು ಜೀತದಾಳನ್ನಾಗಿ ಪುಕ್ಕಟ್ಟೆ ದುಡಿಸಿಕೊಳ್ಳುವ ಕ್ರೌರ್ಯ ನಿಂತಿಲ್ಲ. ದಲಿತರ ಗುಡಿಸಲು ಗಳಿಗೆ ಬೆಂಕಿ ಇಟ್ಟು ಇವರ ಅಂಗೈ ಅಗಲ ಜಾಗೆಯನ್ನು ಕಸಿದುಕೊಂಡು ಬೀದಿಪಾಲು ಮಾಡುವ ಕ್ರೂರ ಹಿಂದುಗಳಿದ್ದಾರೆ. ಇವರಿಗೆ ಬಲತ್ಕಾರವಾಗಿ ಮಲ ತಿನ್ನಿಸಿದ್ದನ್ನು ನಿಜ ಬರೆವ ಪತ್ರಿಕೆಗಳಲ್ಲಿ ಇಂದಿಗೂ ಓದುತ್ತಿದ್ದೇವೆ.

ಮೊನ್ನೆ ಕೆಲವರು ಸ್ವಾಮಿಗಳು ಮತಾಂತರದ ವಿರುದ್ಧ ಮಾನ್ಯ ರಾಜ್ಯಪಾಲರಿಗೆ ಮನವಿ ಒಪ್ಪಿಸಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಬೀದಿಗಿಳಿದಿದ್ದೂ ತಿಳಿದಿದೆ. ಆದರೆ ಇವರು ದಲಿತರುಗಳ ಏಳಿಗೆಗಾಗಿ ಇವರು ಮರ್ಯಾದೆಯಿಂದ ತಲೆಯೆತ್ತಿ ತಿರುಗುವುದಕ್ಕಾಗಿ ಈ ಸ್ವಾಮಿಗಳು ಏನನ್ನಾದರೂ ಮಾಡಿದ್ದಾರ? ಮಾಡದಿದ್ದರೆ ಈ ಮತಾಂತರದ ಕುರಿತು ಸೊಲ್ಲೆತ್ತುವ ಹಕ್ಕು ಇವರಿಗಿದೆಯಾ?

ತಮ್ಮ ಪಾದ ಸೇವಕರಾಗಿ ಹೀನಾಯ ದುಡಿತಕ್ಕೆ ಈ ಜನರು ಬೇಕು. ಚುನಾವಣೆ ಸಮಯದಲ್ಲಿ ಇವರು ಹಿಂದುಗಳಂತೆ ಕಾಣುತ್ತಾರೆ.

ಮಠಗಳಿಗೆ ಉಳ್ಳವರಿಗೆ, ದೇವಳಗಳಿಗೆ, ಭೂಗಳ್ಳರಿಗೆ, ಗಣಿ ಗಳ್ಳರಿಗೆ, ಉದ್ಯೋಗ ಪತಿಗಳಿಗೆ ಕೊಡುವುದಕ್ಕೆ ಬೇಕಷ್ಟು ಭೂಮಿ ಇದೆ, ಹಣವೂ ಇದೆ. ಸೂರು ಇಲ್ಲದ ದಲಿತರುಗಳಿಗೆ ಕೊಡುವುದಕ್ಕೆ ಇಲ್ಲಿ ಕಾನೂನು ತೊಡಕು ಅಲ್ಲವಾ?

ಇಂದು ಕ್ರೈಸ್ತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತ ದಲಿತರುಗಳು ಡಾಕ್ಟರರಾಗಿ, ನರ್ಸ್‌ಗಳಾಗಿ, ಗುಮಾಸ್ತರಾಗಿ, ಶಿಕ್ಷಕರಾಗಿ, ಪ್ರಾಧ್ಯಾಪಕರುಗಳಾಗಿ ಸಮಾಜದ ಮುಖ್ಯ ವಾಹಿನಿಗೆ ಸೇರಿ ಮರ್ಯಾದೆಯಿಂದ ತಲೆಯೆತ್ತಿ ಬಾಳಿ ಬದುಕುತ್ತಿರುವುದನ್ನು ನಾವು ಈ ದೇಶದಾದ್ಯಂತ ಕಾಣುತ್ತಿದ್ದೇವೆ. ನೀವು ಅದನ್ನು ಮಾಡಿದ್ದೀರಾ?

ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬಳಲಿ ಬೆಂಡಾಗಿ ಬಸವಳಿದಿರುವ ಇವರು ಕ್ರೈಸ್ತ ಮತಕ್ಕೆ ಸೇರಿ ಬದುಕಿ ಬಾಳುವ ದಾರಿಯನ್ನು ಕಂಡುಕೊಂಡರೆ ಅದು ತಪ್ಪಾ?

ಮೊದಲು ಈ ಸವಲತ್ತುಗಳೆಲ್ಲವೂ ದಲಿತರುಗಳಿಗೆ ಸಿಗುವಂತೆ ಮಾಡಿ, ಆವಾಗ ಮತಾಂತರ ತಾನಾಗಿ ನಿಲ್ಲುತ್ತದೆ. ಇದು ನಿಮಗೂ ಗೊತ್ತು. ಆದರೆ ನೀವು ಮಾಡುವುದಿಲ್ಲ. ಅದು ನಿಮ್ಮ ಜಾಯಮಾನವೇ ಅಲ್ಲ. ಬಲಾತ್ಕಾರದ ಮತಾಂತರವೆಂದು ಸುಳ್ಳು ಬೊಬ್ಬೆ ಹಾಕಿ ನೀವು ಇದನ್ನು ರಾಜಕೀಯ ದಾಳವನ್ನಾಗಿ ಮಾಡಿಕೊಳ್ಳುತ್ತಿದ್ದೀರಿ ಅಷ್ಟೇ.

- ವಿಡಂಬಾರಿ

ನೈಸ್ ಸಂಸ್ಥೆಯ ಹಗಲು ದರೋಡೆ

ಬೆಂಗಳೂರು ನಗರದ ಫೆರಿಫೆರಲ್ ರಸ್ತೆಯಲ್ಲಿ ದುಬಾರಿ ಶುಲ್ಕ ವಸೂಲಿ ಮಾಡುವುದರ ಮೂಲಕ ಹಗಲು ದರೋಡೆ ನಡೆಸುತ್ತಿರುವ ನೈಸ್ ಸಂಸ್ಥೆಯ ವಿರುದ್ಧ ಹಾಗೂ ಇದರಲ್ಲಿ ಶಾಮೀಲಾಗಿರುವ ಬಿಜೆಪಿ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಜನತೆಗೆ ಮನವಿ ಮಾಡಿದೆ.

ರಸ್ತೆ ಪೂರ್ಣಗೊಳ್ಳದಿದ್ದರೂ ದುಬಾರಿ ಶುಲ್ಕ ವಸೂಲಿ ಮಾಡುತ್ತಿರುವುದು ಖಂಡನೀಯ. ದೇಶದಲ್ಲೇ ದುಬಾರಿಯಾಗಿರುವ ರಸ್ತೆ ಶುಲ್ಕವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಬಿಜೆಪಿ ಸರಕಾರ ಶಾಮೀಲು:

ಮೇಲ್ನೋಟಕ್ಕೆ ನೈಸ್ ಸಂಸ್ಥೆ ಶುಲ್ಕ ಏರಿಸಿದಂತೆ ಕಂಡರೂ ಬಿಜೆಪಿ ಸರಕಾರ ಇದರಲ್ಲಿ ಶಾಮೀಲಾಗಿರುವುದು ಸ್ಪಷ್ಟವಾಗಿದೆ. ಮಾಧ್ಯಮಗಳಲ್ಲಿ ವರದಿಯಾದಂತೆ ಶುಲ್ಕ ಹೆಚ್ಚಳಕ್ಕೆ ನೈಸ್ ಕಂಪೆನಿ ಸರಕಾರಕ್ಕೆ ಮನವಿ ಸಲ್ಲಿಸಿದೆ. ಸರಕಾರ ಅಧಿಸೂಚನೆ ಹೊರಡಿಸದೆ ತನಗೆ ತಿಳಿಯದು ಎಂಬಂತೆ ನಾಟಕವಾಡಿದೆ.

ಬಿಜೆಪಿ ಸರಕಾರದ ಜನವಿರೋಧಿ ನೀತಿ ಹಾಗೂ ರೈತರ ಭೂಮಿಯನ್ನು 'ಗುಳುಂ' ಮಾಡಿಕೊಳ್ಳುತ್ತಿರುವ ನೈಸ್ ಕಂಪೆನಿಯ ವಿರುದ್ಧ ಜನತೆ ತೀವ್ರವಾಗಿ ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಕರೆ ನೀಡುತ್ತದೆ.

ಅಸಲಿಯೋ....? ನಕಲಿಯೋ.....?



'ಗುರು ಮತ್ತು ಸ್ವಾಮೀಜಿಗಳಲ್ಲೂ ನಕಲಿ ಇದ್ದಾರೆ. ಇಂದು ಅಸಲಿ ಯಾವುದು, ನಕಲಿ ಯಾವುದು ಎಂದು ತಿಳಿಯದಂಥ ವಾತಾವರಣ ಇದೆ' ಎಂದು ಎಲ್ಲರಿಗೂ ತಿಳಿದಿದ್ದ ಸತ್ಯ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮೀಜಿಯವರಿಗೆ ಇದೀಗ ಜ್ಞಾನೋದಯವಾಗಿದೆ. 'ಕೆಲವರು ಚಿತ್ತಾಪಹಾರಕ ಮತ್ತೆ ಕೆಲವರು ವಿತ್ತಾಪಹಾರಕ ಎಂದು ಇನ್ನೊಂದು ಸತ್ಯವನ್ನೂ ಕಂಡುಕೊಂಡಿದ್ದಾರೆ. ಸೂರ್ಯನಿಂದ ಬಿಸಿಲು ಬರುತ್ತಿದೆ ಎಂದು ಹೇಳಿದ ಹಾಗಿದೆ ಕಳೆದ ವಾರ ವರದ ಹಳ್ಳಿಯಲ್ಲಿ (ಹಳ್ಳಿ ಎಂದರೆ ಅವಮಾನವೇ? ವರದಹಳ್ಳಿ ಇದ್ದಿದ್ದು ಈಗ ವರದ ಪುರ ಆಗಿದೆ!) ಇವರು ಮಾಡಿರುವ ಪ್ರವಚನ! ಸರಿ ಸ್ವಾಮೀಜಿ ಈಗಿರುವ ಸ್ವಾಮೀಜಿಗಳಲ್ಲಿ ಅಸಲಿ ಯಾರು ನಕಲಿ ಯಾರು? ತಮ್ಮ ಜ್ಞಾನ ಚಕ್ಷುಗಳಿಂದ ಕಂಡು, ಪಾಮರರಿಗೆ ತಿಳಿ ಹೇಳಬಾರದೆ? ಚಿತ್ತಾಪಹಾರಕ ಯಾರು? ವಿತ್ತಾಪಹಾರಕ ಯಾರು? ದೇವಸ್ಥಾನಾಪಹಾರಕ ಯಾರು? ತಮ್ಮ ದಿವ್ಯ ನಾಲಿಗೆಯಿಂದ ನುಡಿಯಬಾರದೇ? ಯಾಕೆ? ಇತರರಡೆಗೆ ಒಂದು ಬೆರಳು ತೋರಿದರೆ ಉಳಿದ ನಾಲ್ಕು ಬೆರಳು ನಿಮ್ಮ ಕಡೆಗೆ ತೋರಿ ಗೊಂದಲವಾಗುತ್ತಿದೆಯೇ?

ದಲಿತರ ಕೇರಿಗಳಲ್ಲಿ ಭಗವದ್ಗೀತೆ ಪಾರಾಯಣ ಮಾಡಿಸುತ್ತಾರಂತೆ ಪರಮ ಪೂಜ್ಯ ಪೇಜಾವರ ಮಠಾದೀಶರು. ದಲಿತರು ಪ್ರಧಾನಿ ಆಗುವುದನ್ನು ಅವರ ಜೀವಿತಾವಧಿಯಲ್ಲಿಯೇ ಕಾಣಲು ಬಯಸಿದ್ದಾರಂತೆ. (ಪಾಪ ಅಡ್ವಾನಿ ! ಅವರೂ ದಲಿತರಾಗಿ ಮತಾಂತರ ಹೊಂದಬೇಕೆ?) ಇದು ಚಿತ್ತಾಪಹಾರಕವೋ? ಬತ್ತಿ ಇಕ್ಕುವ ಕಾಯಕವೋ? ಇವರ ವಿಚಾರ ಪ್ರಚಾರಗಳು ಅಸಲಿಯೋ ನಕಲಿಯೋ ಹೇಳಬಲ್ಲಿರಾ? ಗೋ ಸ್ವಾಮಿಯವರೇ? ಕಷ್ಟವೇ? ಹೋಗಲಿ ಬಿಡಿ.

ಎಲ್ಲರಿಗೂ ಗೊತ್ತಿರುವ ಒಂದು ಸತ್ಯವನ್ನು ಹೇಳಿ ನೋಡೋಣ! ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳ ಡಾಕ್ಟರೇಟು ಅಸಲಿಯೋ ನಕಲಿಯೋ ಹೇಳಿ ನೋಡೋಣ. ಯಾಕೆ ಆಯಾಸವೇ? ಮಾರ್ಗಾಯಾಸ ಪರಿಹಾರಕ್ಕಾಗಿ ನಮ್ಮ ಅಜ್ಜಿ ಕತೆಯೊಂದನ್ನು ಹೇಳುತ್ತೇನೆ ಕೇಳಿ. ಪೇಪರ್ ಗಳಲ್ಲಿ ಭಾರೀ ಗಾತ್ರದ ಕರೀ ಗೌನಿನ ಚಿತ್ರಗಳನ್ನು ನೋಡಿ ನಮ್ಮಜ್ಜಿ ಕೇಳಿದರು, 'ಇದೇನೋ ಮಗು ಬುರ್ಖಾ ಜಾಹೀರಾತಾ?' ಅಂತ. 'ಇಲ್ಲ ಕಣಜ್ಜೀ, ಇದು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರ ಫೋಟೋ ಕಣಜ್ಜೀ' ಅಂತ ಹೇಳಿದೆ. 'ಸುಮ್ನಿರೋ ಮುಂಡೇದೆ, ನನಗೆ ಸರಿಯಾಗಿ ಕಣ್ಣು ಕಾಣಲ್ಲ ಅಂತ ತಮಾಷೆ ಮಾಡಬೇಡ. ನಮ್ಮ ಮುಖ್ಯಮಂತ್ರಿ ಸಾಬ್ರೆಂಗುಸ್ರು ತರಾ ಬುರ್ಖಾ ಹಾಕೊತಾರ? ಅಂತ ರೇಗಿತು ನಮ್ಮಜ್ಜಿ. 'ಇಲ್ಲ ಕಣಜ್ಜೀ, ಯಡೂರಪ್ಪನಾಣೆಯಾಗ್ಲೂ ಇದು ಮುಖ್ಯ ಮಂತ್ರಿಯ ಫೋಟೋನೆ, ಅದು ಬುರ್ಖಾ ಅಲ್ಲ, ಗೌನು, ಅಮೆರಿಕದೋರು ಅವರಿಗೆ ಗೌರವ ಡಾಕ್ಟರೇಟ್ ಕೊಟ್ಟಿದ್ದಾರೆ. ಅದರ ಫೋಟೋ ಅದು' ಎಂದೆ.

'ಅದೇನೋ ಮಗು ಅದು ಗೌರವ್ವ ಅಂದ್ರೆ? ಪ್ರೈಜಾ?' ಅಂತ ಕೇಳಿದರು. ಅಜ್ಜಿಗೆ ಅರ್ಥ ಆಗಲಿ ಅಂತ 'ಹ್ಞೂಂ' ಎಂದೆ. 'ಅದೇನು ಫ್ಯಾನ್ಸಿ ಡ್ರೆಸ್ಸು ಅಂತಾರಲ್ಲ ಅದನ್ನ ಹಾಕ್ಕೊಂಡಿದ್ದಕ್ಕೆ ಈ ಯಪ್ಪನಿಗೆ ಪ್ರೈಜ್ ಬಂತಾ?' ಅಂತ ಕೇಳಿದರು. ಈ ನಮ್ಮಜ್ಜಿಗೆ ಡಾಕ್ಟರೇಟು ಅಂದರೇನು ಅಂತ ಬಿಡಿಸಿ ಹೇಳುವಷ್ಟರಲ್ಲಿ ನನಗೆ ಸಾಕು ಸಾಕಾಯಿತು. ನಮ್ಮ ಮುಖ್ಯ ಮಂತ್ರಿ ಎಷ್ಟು ಉದಾತ್ತ ಎಂದು ತಿಳಿಸಲು, ಆ ಡಾಕ್ಟರೇಟನ್ನು ಅವರು ನಮ್ಮ ರೈತರಿಗೆ ಅರ್ಪಿಸಿದ್ದಾರೆ ಎಂದು ಹೇಳಿದೆ. 'ಓ ಇನ್ಮೇಲೆ ರೈತ್ರನ್ನೆಲ್ಲ ಡಾ.ರೈತ್ರು ಅಂತ ಕರೀಬೇಕಾ? ಡಾ. ರೈತರ ಮೇಲೆ ಗುಂಡಿನೇಟು. ಡಾ. ರೈತರ ಆತ್ಮಹತ್ಯೆ. ಕರೆಂಟ್ ಇಲ್ಲದೆ ಡಾ. ರೈತರ ಪರದಾಟ. ಅಂತ ಹೀಗೆ ಮಾತಾಡಬೇಕಾ?' ಅಂತು ನಮ್ಮ ತರಲೆ ಅಜ್ಜಿ. 'ಹಾಗಲ್ಲ ಕಣಜ್ಜಿ, ಅವರಿಗೆ ರೈತರ ಬಗ್ಗೆ ಅಷ್ಟು ಕಾಳಜಿ' ಎಂದು ಹೇಳಿದೆ. 'ಥೂ ನಿನ್ನ ಮಕಕ್ಕಿಷ್ಟು, ಅಸಲಿ ಯಾವುದು ನಕಲಿ ಯಾವುದು ಅಂತ ನನಗೆ ತಿಳಿಯೋದಿಲ್ವೇನೋ ಮುಂಡೇದೆ?' ಎಂದರು ನಮ್ಮಜ್ಜಿ.

ಹೇಳಿ ಸ್ವಾಮೀಜಿ, ಅಸಲಿ ಯಾವುದು? ನಕಲಿ ಯಾವುದು? ತಿಳಿದೂ ಹೇಳದಿದ್ದರೆ ಮುಖ್ಯಮಂತ್ರಿ ಇನ್ನು ಮುಂದೆ ನಿಮಗೆ ಯಾವುದೇ ದೇವಸ್ಥಾನವನ್ನೂ ಗಿಫ್ಟ್ ಕೊಡುವುದಿಲ್ಲ! ಎಚ್ಚರಿಕೆ!

ಸೌಹಾರ್ದತೆಯ ಸಂದೇಶ ಹೊತ್ತ ಜಾಥಾ ಹಚ್ಚಹಸಿರು, ತಂಪು ಉಸಿರಿನ ಕೋಮು ಸೌಹಾರ್ದ ಸಂಸ್ಕೃತಿಯ ನೆಲೆ ಬಾಬಾಬುಡನ್‌ಗಿರಿಯಿಂದ ಹೊರಟಿದೆ.

ಸುಂದರ ಗಿರಿಯಿಂದ ಹೊರಟಿತು

ಸೌಹಾರ್ದ ಜಾಥಾ

ರಾಷ್ಟ್ರಕವಿ ಕುವೆಂಪುರವರು ಕಂಡಂತೆ ಸರ್ವಜನಾಂಗದ ಶಾಂತಿಯ ತೋಟವು ಕೋಮುವಾದಿಗಳ, ಭಯೋತ್ಪಾದಕರ ಕೈಗೆ ಸಿಕ್ಕಿ ನಲುಗುತಿದೆ. ಧರ್ಮದ ಹೆಸರು ಹೇಳಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರವು ತನ್ನ ಕೋಮುವಾದಿ ಅಜೆಂಡಾವನ್ನು ಬಿಚ್ಚಿಡುತ್ತಿದೆ. ಅಲ್ಲದೆ ತನ್ನ ಅಂಗ ಸಂಸ್ಥೆಗಳಾದ ಆರ್‌ಎಸ್‌ಎಸ್, ವಿ.ಹೆಚ್.ಪಿ, ಎಬಿವಿಪಿ ಮುಂತಾದ ಕೋಮುವಾದಿ ಸಂಘಟನೆಗಳ ಮೂಲಕ ಮುಗ್ಧ ಜನತೆಯನ್ನು, ವಿದ್ಯಾರ್ಥಿಗಳನ್ನು ಧರ್ಮದ ಹೆಸರಲ್ಲಿ ಬಲಿ ಕೊಡುವಂತಹ ಕೆಲಸಕ್ಕೆ ಕೈಹಾಕಿವೆ. ಅಲ್ಲದೆ ಆಹಾರ ಪದ್ಧತಿಯ ಮೇಲೂ ನಿಷೇದ ಹೇರುತ್ತಿದೆ. ರಾಜ್ಯದ ಜನತೆಯು ಅನುಭವಿಸುತ್ತಿರುವ ಸಮಸ್ಯೆಗಳತ್ತ ಗಮನಹರಿಸದ ಬಿಜೆಪಿಯು ಮುಂದಿನ ಲೋಕಸಭಾ ಚುನಾವಣೆಗಾಗಿ ಧರ್ಮ ರಾಜಕಾರಣ ಮಾಡಹೊರಟಿದೆ.

ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಕೋಮುವಾದ ಮತ್ತು ಭಯೋತ್ಪಾದನೆ ವಿರುದ್ಧ ಸೌಹಾರ್ದಯುತ ಕರ್ನಾಟಕಕ್ಕಾಗಿ "ಸೌಹಾರ್ದ ಕರ್ನಾಟಕ ಜಾಥಾ"ವನ್ನು ರಾಜ್ಯದ ನಾಲ್ಕು ಕಡೆಯಿಂದ ನಡೆಸುತ್ತಿದ್ದು ಅವುಗಳಲ್ಲಿ ಒಂದು ಜಾಥಾವನ್ನು ಸೂಫಿ ಪರಂಪರೆ ಸಂತರು ಸೌಹಾರ್ದಯುತವಾಗಿ ಬದುಕಿದಂತಹ ಬಾಬಾಬುಡನ್‌ಗಿರಿಯಲ್ಲಿ ಉದ್ಘಾಟಿಸಲಾಯಿತು. ಮಧ್ಯಾಹ್ನ 12 ಗಂಟೆಯಾದರೂ ಕೊರೆವ ಚಳಿ. ನೋಡುಗರಿಗೆ ಸುಂದರ ರಮಣೀಯ ಸ್ಥಳ ಬಾಬಾಬುಡನ್‌ಗಿರಿಯಲ್ಲಿ ಯಾವುದೇ ಒಂದು ಧರ್ಮಕ್ಕೆ ಸ್ಥಾನವಿಲ್ಲ. ಎಲ್ಲಾ ಧರ್ಮೀಯರ ದುಡಿದು ದಣಿದ ಮನವನ್ನು ತಣ್ಣಗಾಗಿಸುವ ಸುಂದರ ತಾಣ. ಈ ಜಾಥಾವನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ, ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕರಾದ ಜಿ.ವಿ.ಎಸ್. ಉದ್ಘಾಟಿಸಿದರು. ಜಾಥಾದ ನಾಯಕತ್ವವನ್ನು ಸಿಪಿಐ(ಎಂ)ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರು ವಹಿಸಿದ್ದರು. ಈ ಸುಂದರ ರಮಣೀಯ ಬಾಬಾ ಬುಡನ್‌ಗಿರಿಯು ಈಗ ಕೇವಲ ಸುಂದರ ತಾಣವಾಗಿಯಷ್ಟೇ ಉಳಿದಿಲ್ಲ. ಯಾವ ಮುಗ್ಧ ಮನಸುಗಳು, ಆಯಾಸಗೊಂಡ ಮನಸ್ಸಿಗೆ ಮುದ ಬೇಕೆಂದು ಈ ಬಾಬಾ ಬುಡನ್‌ಗಿರಿಗೆ ಹೋಗುತ್ತಿದ್ದವೋ ಅಲ್ಲಿ ಆ ಬಾಬಾ ಬುಡನ್‌ಗಿರಿಯನ್ನು ದತ್ತ ಪೀಠ ಮಾಡುವ ರಭಸದಲ್ಲಿ ಕೋಮುವಾದಿಗಳ ಧ್ವನಿಗೆ ಭಯಗೊಳ್ಳಬೇಕಾದ ಪರಿಸರ ನಿರ್ಮಾಣಗೊಂಡಿದೆ. ಇಡೀ ಚಿಕ್ಕಮಗಳೂರು ಜಿಲ್ಲೆಯೇ ಪ್ರಕ್ಷುಬ್ಧ ವಾತಾವರಣದಿಂದ ಕೂಡಿದೆ. ಮುಗ್ಧ ಜನರ ಧಾರ್ಮಿಕ ಭಾವನೆ ಧಕ್ಕೆ ತರಬೇಕೆಂದೇ ಗೋಪುರ ಕುಸಿದಿದೆ ಎಂಬ ನೆಪದಿಂದ ದರ್ಗಾದ ದರ್ಶನಕ್ಕೆ ಕುತ್ತು ತಂದಿದೆ ರಾಜ್ಯ ಕೋಮುವಾದಿ ಬಿಜೆಪಿ ಸರ್ಕಾರವು.

ಇಂತಹ ಸಂದಿಗ್ಧ ಸಂದರ್ಭದಲ್ಲಿಯೇ ಸಿಪಿಐ(ಎಂ) ಪಕ್ಷವು ಅತ್ಯಂತ ಮಹತ್ವ ಪೂರ್ಣವಾದ ಐತಿಹಾಸಿಕ ಸ್ಥಳದಲ್ಲಿ ಜಾಥಾವನ್ನು ಉದ್ಘಾಟಿಸಿತು. ನಂತರ ಚಿಕ್ಕಮಗಳೂರು ನಗರಕ್ಕೆ ಆಗಮಿಸಿದ ಜಾಥಾವನ್ನು ಕೋಮುವಾದಿಗಳಿಗೆ ಧಿಕ್ಕಾರ ಹೇಳುತ್ತಾ ನೂರಾರು ಜನರು ಸ್ವಾಗತಿಸಿದರು. ನಂತರ ಮೆರವಣಿಗೆ ಹೊರಟು ಪುರಾತತ್ವ ಇಲಾಖೆಯ ಆವರಣದಲ್ಲಿ ಸಮಾವೇಶಗೊಂಡಿತು. ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿ.ವಿ.ಶ್ರೀರಾಮರೆಡ್ಡಿಯವರು "ಕಳೆದ 2 ತಿಂಗಳಲ್ಲಿ ರಾಜ್ಯದ ಅಲ್ಪಸಂಖ್ಯಾತರ ಮೇಲೆ, ದಲಿತರ ಮೇಲೆ ದಾಳಿ ಹೆಚ್ಚಿದೆ. ಅದನ್ನು ನಿಯಂತ್ರಿಸುವಲ್ಲಿ ಬಿಜೆಪಿ ಸರ್ಕಾರವು ವಿಫಲವಾಗಿದೆ. ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿದವರನ್ನು ಶಿಕ್ಷಿಸುವುದನ್ನು ಬಿಟ್ಟು, ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿದವರನ್ನು ಬಿಜೆಪಿಯು ಸಮರ್ಥಿಸಿಕೊಳ್ಳುತ್ತಿದೆ. ಯಾರೋ ಕೆಲವು ಮುಸ್ಲಿಂ ಭಯೋತ್ಪಾದಕರ ಕಾರಣಕ್ಕೆ ಆರ್‌ಎಸ್‌ಎಸ್, ಭಜರಂಗದಳ, ಎಬಿವಿಪಿ ಮುಂತಾದವು ಇಡೀ ಮುಸ್ಲಿಂ ಸಮುದಾಯವನ್ನು ಭಯೋತ್ಪಾದಕರಂತೆ ಬಣ್ಣಿಸುತ್ತಿವೆ. ಆದರೆ ಇಂದು ಮಾಲೆಗಾಂವ್ ಸ್ಫೋಟದಿಂದ ನಮಗೆ ತಿಳಿದಿದೆ 'ಹಿಂದು ಭಯೋತ್ಪಾದಕರು' ಇದ್ದಾರೆ ಎಂದು. ಹೀಗಾಗಿ ಭಯೋತ್ಪಾದನೆಗೆ ಧರ್ಮವಿಲ್ಲ. ಅಲ್ಲದೆ ನಕ್ಸಲ್ ಭಯೋತ್ಪಾದನೆಗಿಂತ ಮತಾಂಧ ಮೂಲಭೂತವಾದ ಭಯೋತ್ಪಾದನೆ ಅತ್ಯಂತ ಅಪಾಯಕಾರಿಯಾಗಿದೆ. ಹೀಗಾಗಿ ಮತಾಂಧವಾದಿಗಳು ಧರ್ಮ ರಕ್ಷಕರಲ್ಲ" ಎಂದರು. ಬಾಬ್ರಿ ಮಸೀದಿಯ ಬೀಗವನ್ನು ರಾಜೀವ್ ಗಾಂಧಿಯವರು ತೆಗೆಸಿದರು. ಅದರ ನಂತರ ಅಡ್ವಾಣಿ ನೇತೃತ್ವದಲ್ಲಿ ಸೃಷ್ಟಿಸಿದ ಕೋಮುಗಲಭೆಗಳಿಂದಾಗಿ ಇಡೀ ದೇಶದಲ್ಲಿ ಕೋಮುವಾದ ಹೆಚ್ಚಾಗಿದೆ. ಅದರ ಭಾಗವಾಗಿಯೇ ಭಯೋತ್ಪಾದನೆ ಹೆಚ್ಚಾಗಿದೆ ಎಂದರು. ಬಿಜೆಪಿಯು ಅಧಿಕಾರಕ್ಕೆ ಬಂದಿರುವುದು ಜನತೆಯ ಸಮಸ್ಯೆಗಳನ್ನು ಆಧಾರವಾಗಿಟ್ಟುಕೊಂಡು ಹೋರಾಟ ನಡೆಸಿ ಅಲ್ಲ ಬದಲಿಗೆ ಕೋಮುವಾದದಿಂದ ಎಂದರು.

ಚಿಕ್ಕಮಗಳೂರಿನಲ್ಲಿ ಜಾಥಾದ ಮೆರವಣಿಗೆಯಲ್ಲಿ ವಿ.ಸುಕುಮಾರ್, ಜಿವಿಎಸ್, ಮಾನ್ಪಡೆ ಇತರರು



ಜಾಥಾದ ನಾಯಕತ್ವವನ್ನು ವಹಿಸಿರುವ ಮಾರುತಿ ಮಾನ್ಪಡೆಯವರು ಮಾತನಾಡುತ್ತ ರಾಜ್ಯದಲ್ಲಿ ಬಿಜೆಪಿಯು ಅಧಿಕಾರಕ್ಕೆ ಬಂದ ಮೇಲೆ

ಪುಟ 10ಕ್ಕೆ

'ಇದು ಕಟ್ಟುವ ಕೆಲಸ' – ಜಯಮೃತ್ಯುಂಜಯ ಸ್ವಾಮೀಜಿ

ಕೂಡಲಸಂಗಮ ಜಾಥಾ ವರದಿ

ಸಂತ ಶಿಶುವಿನಾಶ ಶರೀಫ, ಬಸವ, ಬುದ್ಧ, ಅಂಬೇಡ್ಕರ್, ಕನಕದಾಸ, ಸಂಗೊಳ್ಳಿ ರಾಯಣ್ಣ, ಸ್ವತಂತ್ರ ರಾಣಿ ಚೆನ್ನಮ್ಮ, ಕವಿ ಕುವೆಂಪು, ಹುತಾತ್ಮ ಭಗತ್‌ಸಿಂಗ್, ಕ್ರಾಂತಿಕಾರಿ ಚೆಗುವೆರಾ, ಕಾರ್ಲ್‌ಮಾರ್ಕ್ಸ್ ಮುಂತಾದ ದಿವ್ಯಚೇತನಗಳ ಸಂದೇಶ ಹೊತ್ತು ಶಾಂತಿ-ಸೌಹಾರ್ದತೆ ಸಾರುವ ಜಾಗೃತಿ ಜಾಥಾ ಡಿಸೆಂಬರ್ 15 ರಂದು ಕಾಯಕ ಸಿದ್ಧಾಂತದ ನೆಲೆವೀಡು, ಬಸವಾದಿ ಶರಣರ ಕರ್ಮಭೂಮಿ, ಸಮಾನತೆ ಸಮಾಜದ ಕನಸುಗಾರ ಬಸವಣ್ಣನ ಐಕ್ಯಸ್ಥಳವೆಂದು ಬಿಂಬಿತವಾಗಿರುವ ಕೂಡಲ ಸಂಗಮದಲ್ಲಿ ಉದ್ಘಾಟನೆಗೊಂಡಿತು.

ಕೋಮುವಾದ ಮತ್ತು ಭಯೋತ್ಪಾದನೆ ವಿರೋಧಿಸಿ ಕೋಮಸೌಹಾರ್ದತೆ ಬಿತ್ತುವ, ಜನರನ್ನು ಜಾಗೃತಿಗೊಳಿಸುವ ಸಿಪಿಐ(ಎಂ)ನ ರಾಜ್ಯಮಟ್ಟದ ಜಾಥಾವನ್ನು ಬಸವ ತತ್ವ ಪ್ರಚಾರಕರು, ವೀರಶೈವ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮಿ ಜಂಜರಾ ಬಾರಿಸುವ ಮೂಲಕ ಉದ್ಘಾಟಿಸಿದರು.

ಅವರು ಮಾತನಾಡುತ್ತಾ, ನಮ್ಮನಾಡು ಬಹುಸಂಸ್ಕೃತಿಯ ನಾಡು. ಇಲ್ಲಿಯ ಆಚರಣೆಗಳು ವೈವಿಧ್ಯತೆಯಿಂದ ಕೂಡಿವೆ. ಒಂದ ಎಲ್ಲ ಆಚರಣೆಗಳು ನಮ್ಮ ಹಿರಿಮೆಯಾಗಿವೆ. ಆದರೆ ಹಿಂದುತ್ವದ ಹೆಸರಿನಲ್ಲಿ ಏಕಮುಖಿ ಸಂಸ್ಕೃತಿ ಹೇರುವ ವ್ಯವಸ್ಥಿತ ಹುನ್ನಾರ ನಡೆದಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಬಹುಮುಖಿ ಸಂಸ್ಕೃತಿಯನ್ನು ಒಪ್ಪಿ ಅದನ್ನು ಅಪ್ಪುವುದೇ ಶರಣರ ಉದ್ದೇಶವಾಗಿದೆ.



ಜಾಥಾ ಉದ್ಘಾಟಿಸಿದ ಸ್ವಾಮೀಜಿ ಮತ್ತು ಬಿ.ಐ.ಈಳಗೇರಾ, ಎಸ್‌ವೈಜಿ, ಕೆ.ಮಹಂತೇಶ್, ಭೀಮಸಿ ಕಲಾದಗಿ, ಅಣ್ಣಾರಾಯ ಮತ್ತಿತರರು

ಒಂದಾದ ಸಮಾಜದ ಶಾಂತಿ-ನೆಮ್ಮದಿಯನ್ನು ಕದಡುವ ಪ್ರಯತ್ನ ತೀವ್ರವಾಗಿದ್ದು, ಸಮಾಜ ಒಡೆಯುವ ಕಾರ್ಯದಲ್ಲಿ ಮುತಾಲಿಕ್, ತೊಗಾಡಿಯಾನಂಥವರು ಆರೆಸ್ಸೆಸ್ ಮೂಲಕ ಮುಂದಾಗಿದ್ದಾರೆ. ಇವರ ಹಿಂದುತ್ವ ಸಿದ್ಧಾಂತವನ್ನು ಮನುಷ್ಯರಾದವರು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇವರೆಲ್ಲಾ ಸಮಾಜ ಒಡೆಯುವ ಕಾರ್ಯದಲ್ಲಿ ಮುಂದಾಗಿದ್ದಾರೆ. ನಮ್ಮಂಥವರು ಸಮಾಜ ಕಟ್ಟುವ ಕಾಯಕದಲ್ಲಿ ನಿರತರಾಗಿದ್ದೇವೆ. ಸಮಾಜದಲ್ಲಿ ಒಡೆಯುವ ವಿಭಾಗ, ಕಟ್ಟುವ ವಿಭಾಗ ಎಂದು ಎರಡು ಕಾರ್ಯಗಳು ನಡೆದಿವೆ. ಸಿ.ಪಿ.ಐ(ಎಂ)ನ ಈ ಸೌಹಾರ್ದ ಜಾಥಾ ಮತ್ತು ಬಸವಾದಿ ಶರಣರದು ಕಟ್ಟುವ ವಿಭಾಗಕ್ಕೆ ಸೇರಿದ್ದಾಗಿದೆ ಎಂದರು.

ದೇಶದಲ್ಲಿ ಭಯೋತ್ಪಾದಕ ಶಕ್ತಿಗಳ ಅಟ್ಟಹಾಸ ಮೇರೆ ಮೀರಿದ್ದು ಇದನ್ನು ನಾವು ವಿರೋಧಿಸುತ್ತೇವೆ. ಭಯೋತ್ಪಾದನೆ ಕೃತ್ಯವನ್ನೇ ಬಳಸಿಕೊಂಡು ಹಿಂದು ಧರ್ಮದ ಗುತ್ತಿಗೆದಾರರು ಜನರಲ್ಲಿ ಕೋಮುವಾದ ಬಿತ್ತುವ ಕೆಲಸ ಕೂಡಾ ಮಾಡುತ್ತಿರುವುದು ಅಪಾಯಕಾರಿಯಾಗಿದೆ. ಈ ಕೋಮುವಾದ ಮತ್ತು ಭಯೋತ್ಪಾದನೆ ವಿರೋಧಿಸಿ ನಡೆದಿರುವ ಈ ಜಾಥಾ ಉದ್ಘಾಟನೆಗೆ ನಾನು ಬಹು ಸಂತೋಷದಿಂದ ಭಾಗವಹಿಸಿದ್ದೇನೆ. ಇಂಥ ಶ್ಲಾಘನೀಯ ಕಾರ್ಯ ನಿರಂತರ ನಡೆಯಲಿ, ನಾವೆಲ್ಲಾ ಒಟ್ಟಾಗಿ ಸೇರಿ ಇಂಥ ಕಾರ್ಯಗಳನ್ನು ಹಮ್ಮಿಕೊಳ್ಳೋಣ ಎಂದು ಶ್ರೀ ಬಸವಜಯ ಮೃತ್ಯುಂಜಯ ಶ್ರೀಗಳು ಸಾರಿದರು.

ಇದೇ ಸಂದರ್ಭದಲ್ಲಿ ಜಾಥಾದಲ್ಲಿ ಹಂಚಿಕೆಯಾಗಲಿರುವ ಕೋಮುವಾದ-ಭಯೋತ್ಪಾದನೆ ವಿರೋಧಿ, ಸೌಹಾರ್ದ ಪರಂಪರೆ ಎತ್ತಿ ಹಿಡಿಯುವ ಕಿರುಪುಸ್ತಕಗಳನ್ನು ಶ್ರೀಗಳು ಬಿಡುಗಡೆಗೊಳಿಸಿದರು.

ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡರಾದ

ಪುಟ 10ಕ್ಕೆ

ಸೌಹಾರ್ದ ಕರ್ನಾಟಕ ಒಂದು ಆಂದೋಲನವಾಗಿ

ಇಂದು ಕೋಮುವಾದ, ಭಯೋತ್ಪಾದನೆಯ ವಿರುದ್ಧ ಶಾಂತಿ, ಸಾಮರಸ್ಯ ಪ್ರಗತಿ ಸಾಧಿಸಬಯಸುವ ಶಕ್ತಿಗಳು ಒಂದಾಗಿ ವಿಶಾಲ ಆಂದೋಲನ ಕಟ್ಟಬೇಕಿದೆ

ನಮ್ಮ ಕರ್ನಾಟಕ ರಾಜ್ಯ ತನ್ನ ಈ ಮೋಹಕ ಮಣ್ಣಿನಲ್ಲಿ ವಾಸವಾಗಿರುವ ವಿವಿಧ ಸಮುದಾಯಗಳ ನಡುವೆ ಇರುವ ಸಾಮಾಜಿಕ ಸಾಮರಸ್ಯದ ಪರಂಪರೆಗೆ ಒಂದು ಗಂಭೀರ ಸವಾಲನ್ನು ಎದುರಿಸುತ್ತಿದೆ. ಈ ನಾಡಿನ ಯಾವುದೇ ಪ್ರದೇಶದಲ್ಲಿ ಯಾರೇ ಆಳ್ವಿಕೆ ನಡೆಸಿರಲಿ, ಧಾರ್ಮಿಕ ಸಹಿಷ್ಣುತೆ ಆಚರಣೆಯಲ್ಲಿತ್ತು. ಮೈಸೂರಿನ ಸುಲ್ತಾನರ ಆಳ್ವಿಕೆಯಲ್ಲಿ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ರಕ್ಷಣೆ ಒದಗಿಸಿದ್ದರು, ಅದಕ್ಕೆ ಹಲವು ಕಾಣಿಕೆಗಳನ್ನು, ಉಡುಗೊರೆಗಳನ್ನು ಕೊಡಮಾಡಿದ್ದರು. ಬೆಂಗಳೂರಿನ ಕಾಟನ್ ಪೇಟೆಯ ಬಳಿ ದರ್ಗಾದ ಎದುರು ಕರಗ ಹೊತ್ತ ವೀರಕುಮಾರರು ಕೆಲವು ಕ್ರಮಾಚರಣೆಗಳನ್ನು ನಡೆಸುವುದನ್ನು ಪ್ರತಿ ವರ್ಷ ಒಂದು ವಿಶಾಲ ಜನಸ್ತೋಮ ವೀಕ್ಷಿಸುತ್ತದೆ. ಬಾಬಾಬುಡನ್ ದತ್ತಾತ್ರೇಯ ಪೀಠವನ್ನು ಶತಮಾನಗಳಿಂದ ಹಿಂದೂಗಳೂ, ಮುಸಲ್ಮಾನರೂ ಪೂಜಿಸುತ್ತಾ ಬಂದಿದ್ದಾರೆ. ಕರ್ನಾಟಕದಾದ್ಯಂತ ಇಂತಹ ಅಸಂಖ್ಯ ಪರಂಪರೆಗಳನ್ನು ಕಾಣಬಹುದು.

ಅಧಿಕಾರದ ಪ್ರತಿಷ್ಠಾಪನೆ

ಆದರೆ ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ಬಲಗೂಡಿಸಿಕೊಳ್ಳಲಾರಂಭಿಸಿದವು. ಒಂದು ಸಾಂಸ್ಕೃತಿಕ ಸಂಘಟನೆ ಎಂಬ ಮುಖವಾಡ ಹೊತ್ತು ಮೆಲ್ಲಗೆ ಸಂವಿಧಾನವನ್ನು ಬುಡಮೇಲು ಮಾಡುವ ಮತ್ತು ಹಿಂದೂರಾಷ್ಟ್ರದ ಹೆಸರಿನಲ್ಲಿ ಫ್ಯಾಸಿಸಂನ್ನು ಸ್ಥಾಪಿಸುವ ಆಶಯವನ್ನು ಘೋಷಿಸಿರುವ ಒಂದು ನಿರ್ದಿಷ್ಟ ರಾಜಕೀಯ ಶಕ್ತಿಯ ಯೋಜನಾಬದ್ಧ ಪ್ರಯತ್ನಗಳು ಅಲ್ಪಸಂಖ್ಯಾತರ ಭಾವನೆಗಳನ್ನು ಪರಿಣಾಮಕಾರಿಯಾಗಿ ನೋಯಿಸಿವೆ. ತೊಂಭತ್ತರ ದಶಕದಲ್ಲಿ ನೋಡಿರುವಂತೆ, ಅವರು ಗಲಭೆಗಳನ್ನು ಪ್ರಚೋದಿಸಲಾರಂಭಿಸಿದರು; ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ನಡೆಸಲೆಂದು ರಾಷ್ಟ್ರಧ್ವಜಾರೋಹಣಕ್ಕೆ ಸಂಬಂಧಪಟ್ಟ ಕಾನೂನುಗಳ ವಿರುದ್ಧವೇ ವರ್ತಿಸಿದರು. ಕೋಮುಗಲಭೆಗಳನ್ನು ಪ್ರಚೋದಿಸಲು ಇದನ್ನು ಅವರು ಮತ್ತೆ-ಮತ್ತೆ ಮಾಡಿದರು. ಗಲಭೆಗಳು ನಡೆದೂ ನಡೆದವು. ಸ್ಥಳೀಯ ಧಾರ್ಮಿಕ ಮುಖಂಡರ ನೆರವಿನಿಂದ ಆ ಪ್ರಶ್ನೆಯನ್ನು ಪರಿಹರಿಸಲಾಯಿತು. ಅವರು ನಂತರ ಅವರು ಎತ್ತಿದ್ದು ಬಾಬಾಬುಡನಗಿರಿ ಪ್ರಶ್ನೆಯನ್ನು- ದತ್ತ ಜಯಂತಿಯ ಹೆಸರಿನಲ್ಲಿ ಅದುವರೆಗೆ ಇರದಿದ್ದ ಶೋಭಾಯಾತ್ರೆಯ ಪರಂಪರೆಯನ್ನು ಶುರು ಮಾಡಿದರು. ಇಂತಹ ಹಲವು ರಣರಂಗಗಳನ್ನು ಅವರು ತೆರೆದರು. ಕೋಮು ಗಲಭೆಗಳನ್ನು ವ್ಯವಸ್ಥಿತವಾಗಿ ಸೃಷ್ಟಿಸಿ, ವಿಷಯುಕ್ತ ಅಪಪ್ರಚಾರಗಳನ್ನು ನಡೆಸಿ ಕ್ರಮೇಣ ತಮ್ಮ ಚುನಾವಣಾ ಶಕ್ತಿಯನ್ನು ಹೆಚ್ಚಿಸಿಕೊಂಡರು, ಅಂತಿಮವಾಗಿ 2008ರ ಮಧ್ಯಂತರ ಚುನಾವಣೆಗಳಲ್ಲಿ ಅವರ ಅಧಿಕಾರ ಪ್ರತಿಷ್ಠಾಪನೆಯಾಯಿತು.

ಧಾಳಿಗಳು

ಅಧಿಕಾರದ ಗದ್ದುಗೆ ಏರಿದ ನಂತರವೂ ಬೆಂಗಳೂರಿನ ಜೆ.ಸಿ.ನಗರ, ತುಮಕೂರು ಜಿಲ್ಲೆಯ ತಿಪಟೂರು, ಹಾವೇರಿ ಜಿಲ್ಲೆಗಳಲ್ಲಿ ಕೋಮುಗಲಭೆಗಳಿಗೆ ಪ್ರಚೋದನೆ ನೀಡಲಾಗುತ್ತಿದೆ. ಮಂಗಳೂರು ಮತ್ತು ನೆರೆಯ ಪ್ರದೇಶಗಳಲ್ಲಿ ಮುಸ್ಲಿಮರ ಮೇಲೆ ದಾಳಿ ದಿನನಿತ್ಯ ಎಂಬಂತೆ ನಡೆಯುತ್ತಿದೆ.

ಜತೆಯಲ್ಲಿ ಅವರು ಇನ್ನೊಂದು ರಣರಂಗ ತೆರೆದರು- ಈಬಾರಿ ಕ್ರೈಸ್ತ ಚರ್ಚುಗಳ ಮೇಲೆ, ಪ್ರಾರ್ಥನಾ ಸಭಾಂಗಣಗಳ ಮೇಲೆ ದಾಳಿಗಳನ್ನು ನಡೆಸಿದರು. ಅದು ಆರಂಭವಾದದ್ದು ದಾವಣಗೆರೆಯ ಸಮೀಪ ಅಗಸ್ಟ್ 2008ರಲ್ಲಿ-ಮೂರು ಚರ್ಚುಗಳಿಗೆ ಬೀಗ ಹಾಕಲಾಯಿತು, ಒಂದನ್ನು ಸುಟ್ಟು ಹಾಕಲಾಯಿತು, ಬಾಡ ಎಂಬಲ್ಲಿ. ಸಪ್ಟೆಂಬರ್ 8ರಂದು ಒಂದೇ ದಿನದಲ್ಲಿ 14 ಚರ್ಚುಗಳ ಮೇಲೆ ದಾಳಿ ನಡೆಸಿದರು. ಆ ದಾಳಿ ಮೂರು ಜಿಲ್ಲೆಗಳಲ್ಲಿ ನಡೆಯಿತು-ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು. ದಾಳಿಗಳು ಒಂದು ವಾರದ ಕಾಲ, ಸಪ್ಟೆಂಬರ್ 14ರ ವರೆಗೆ ಮುಂದುವರೆದವು. ವಿವಿಧ ಜನ ವಿಭಾಗಗಳ ತೀವ್ರ ಪ್ರತಿಭಟನೆ, ಕೊನೆಗೆ ಭಾರತ ಸರಕಾರದ ಮಧ್ಯಪ್ರವೇಶದಿಂದ ಸ್ವಲ್ಪ ಸದ್ದಡಗಿತು. ಆದರೆ ನಂತರ ಅತ್ತಿಬೆಲೆಯ ಸಮೀಪ ಇನ್ನೊಂದು ಚರ್ಚಿಗೆ ಬೆಂಕಿ ಹಚ್ಚಲಾಯಿತು. ಈ ಎಲ್ಲ ದಾಳಿಗಳು ಒಂದು ಏಕಪಕ್ಷ ಆಳ್ವಿಕೆಯನ್ನು ಸ್ಥಾಪಿಸುವ ಒಂದು ಅಜೆಂಡಾದ ಭಾಗ ಎಂಬುದು ಸ್ಪಷ್ಟ. ಅಧಿಕಾರಕ್ಕೆ ಬಂದಕೂಡಲೇ ವಿರೋಧ ಪಕ್ಷಗಳಲ್ಲಿನ ಅತೃಪ್ತ ವ್ಯಕ್ತಿಗಳನ್ನು ಪಕ್ಷಾಂತರ ಮಾಡಿಸಿ ಆಪರೇಶನ್ ಕಮಲದ ಹೆಸರಿನಲ್ಲಿ ಅವರಿಗೆ ದಿಢೀರ್ ಅಧಿಕಾರದ ಆಹ್ವಾನ ನೀಡಿದ್ದು, ಇವರಿಗೆ ಸಂಸದೀಯ ಪ್ರಜಾಪ್ರಭುತ್ವದ ನೀತಿ-ನಿಯಮಗಳು ಬೇಕಾಗಿಲ್ಲ ಎಂಬುದನ್ನು ತೋರಿಸಿದೆ.

ಚರ್ಚುಗಳ ಮೇಲಿನ ಇತ್ತೀಚಿನ ಈ ದಾಳಿಗಳನ್ನು ಈ ಶಕ್ತಿಗಳು ಒಂದು ನಿಖರವಾದ ಯೋಜನೆಯಂತೆ ನಡೆಸಿದ್ದರೂ ಇದಕ್ಕೆ ತಾವು ಜವಾಬ್ದಾರರಲ್ಲ ಎಂದು ಹೇಳುತ್ತಿದ್ದಾರೆ. ದಾವಣಗೆರೆಯಲ್ಲಿ ಮೂರು ಚರ್ಚುಗಳಿಗೆ ಬೀಗ ಹಾಕುವಲ್ಲಿ ರೆವಿನ್ಯೂ, ಮುನಿಸಿಪಲ್ ಮತ್ತು ಪೋಲೀಸ್ ಇಲಾಖೆಗಳ ಪ್ರಭುತ್ವ ಯಂತ್ರವನ್ನು ಬಳಸಿಯೂ ತಮಗೆ ಈ ಬಗ್ಗೆ ಏನೂ ಗೊತ್ತಿಲ್ಲವೆಂಬಂತೆ ಅವರು ನಟಿಸುತ್ತಿದ್ದಾರೆ. ಮಂಗಳೂರಿನಲ್ಲಿ ಚರ್ಚುಗಳ ಮೇಲೆ ದಾಳಿಗಳಲ್ಲಿ ಅಧಿಕಾರಸ್ಥರ ಕಾನೂನುಬಾಹಿರ ಆದೇಶಗಳನ್ನು "ಬದ್ಧ" ಅಧಿಕಾರಿಗಳು ಜಾರಿಗೊಳಿಸಿರುವುದಕ್ಕೆ ಸ್ಪಷ್ಟವಾದ ಸಾಕ್ಷಿಗಳು ಇವೆ. ಪೋಲೀಸರು ಚರ್ಚಿನೊಳಗೆ ಪ್ರಾರ್ಥನೆ ಮಾಡುತ್ತಿದ್ದವರನ್ನು ಥಳಿಸಿದರು, ಅಲ್ಲದೆ ಅವರು ಬಂಧಿಸಿದವರಲ್ಲಿ ಹೆಚ್ಚಿನವರು ಈ ಚರ್ಚುಗಳೊಳಗೆ ಪ್ರಾರ್ಥನೆ ಸಲ್ಲಿಸುತ್ತಿದ್ದವರು. ಕೆಲವು ಪೋಲೀಸ್ ಸಿಬ್ಬಂದಿಯ ಪಕ್ಷಪಾತಪೂರ್ಣ ಮತ್ತು ಕಾನೂನುಬಾಹಿರ ಎಂದು ಮೇಲ್ನೋಟಕ್ಕೇ ಕಾಣುವ ಕೃತ್ಯಗಳು ಕ್ರಿಮಿನಲ್ ಸ್ವರೂಪದವುಗಳು ಮತ್ತು ಅತ್ಯಂತ ಶಿಕ್ಷಾರ್ಹ ಅಪರಾಧಗಳು. ಆದರೆ ಆಗುತ್ತಿರುವುದು ಬೇರೆಯೇ-ನೇರ ನಡೆಯ ಅಧಿಕಾರಿಗಳು ತಪ್ಪಿತಸ್ಥ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳದಂತೆ ಅಧಿಕಾರದಲ್ಲಿರುವವರು ಹಿಂದಕ್ಕೆಳೆಯುತ್ತಿದ್ದಾರೆ. ಅಧಿಕಾರಸ್ಥರ ಈ ಎಲ್ಲಾ ವಿಚ್ಛಿದ್ರಕಾರಿ ಕ್ರಮಗಳು ಜನಗಳಲ್ಲಿ ವ್ಯಾಪಕವಾದ ಭ್ರಮನಿರಸನ ಉಂಟು ಮಾಡುತ್ತಿವೆ.

ಗುಜರಾತ್ ಮಾದರಿ

ಸಮಾಜದಲ್ಲಿನ ಹಲವು ನೇರ ನಡೆಯ ವ್ಯಕ್ತಿಗಳಿಗೆ ಈಗ ಆಡಳಿತಗಾರರು 'ತಟಸ್ಥರು' ಎಂಬ ಬಗ್ಗೆ ವಿಶ್ವಾಸವೇ ಉಳಿದಿಲ್ಲ. ಈ ರಾಜ್ಯದಲ್ಲಿ ಕಾನೂನಿನ ಆಳ್ವಿಕೆಯೆಂಬುದು ಸಾಧ್ಯ ಎಂಬ ನಿರೀಕ್ಷೆಯೇ ಅವರಿಗಿಲ್ಲ. ಸಂವಿಧಾನಿಕ ಆಡಳಿತದ ಬಗ್ಗೆ ವಿಶ್ವಾಸವನ್ನು ಕಳಕೊಂಡಿರುವ ವಿವಿಧ ಗುಂಪುಗಳು ಕಾನೂನನ್ನು ತಮ್ಮ ಕೈಗಳಲ್ಲಿ ತಗೊಳ್ಳಬೇಕು ಎನ್ನುವ ಶಕ್ತಿಗಳೊಂದಿಗೆ ಸೇರಿಕೊಳ್ಳುವಂತಹ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಭಯೋತ್ಪಾದನೆ ಬೇರು ಬಿಡುವುದು, ಇಡೀ ಸಮಾಜಕ್ಕೆ ಬೆದರಿಕೆಯೊಡ್ಡುವುದು ಹೀಗೆಯೇ. ಮುಂಬೈ ಪೋಲೀಸ್ ಪಡೆಯ ಭಯೋತ್ಪಾದನ-ನಿರೋಧಕ ತಂಡ (ಎಟಿಎಸ್)ದ ತನಿಖೆಗಳು ದೇಶದಲ್ಲಿ ಹಿಂದೂ ಭಯೋತ್ಪಾದಕ ಗುಂಪುಗಳು ಇವೆ ಎಂಬುದನ್ನು ಹೊರಗೆಡಹಿವೆ. ಒರಿಸ್ಸಾದಲ್ಲಿ ಕಂಧಮಲ್ ಘಟನೆಗಳಲ್ಲಿ ಒಬ್ಬ ಸ್ವಾಮಿಯ ಹತ್ಯೆಗೆ ಕ್ರೈಸ್ತರು ಕಾರಣ ಎಂದು ಆರೋಪಿಸಿ, ಹಿಂದುತ್ವ ಶಕ್ತಿಗಳು ನೂರಾರು ಕ್ರೈಸ್ತರನ್ನು ಕೊಂದು ಹಾಕಿದವು, ಹಲವು ಚರ್ಚುಗಳು, ಪ್ರಾರ್ಥನಾ ಸಭಾಂಗಣಗಳನ್ನು ಮಾತ್ರವಲ್ಲ ಹಲವು ಮನೆಗಳನ್ನೂ ಸುಟ್ಟು ಹಾಕಿ ಜನಗಳು ಅರಣ್ಯಗಳಲ್ಲಿ ವಾಸಿಸುವಂತೆ ಮಾಡಿವೆ. ಮರು ಮತಾಂತರವಾಗುತ್ತೇವೆ ಎಂದು ಒಪ್ಪಿದವರನ್ನು ಮಾತ್ರ ಬದುಕಲು ಬಿಡಲಾಗುತ್ತಿದೆ. ಇದು ಮತ್ತು ಅವರು ತರಬೇಕೆಂದಿರುವ 'ಗುಜರಾತ್ ಮಾದರಿ' ಕರ್ನಾಟಕಕ್ಕೆ ಎಂತಹ ಅಪಾಯ ಕಾದಿದೆ ಎಂಬುದನ್ನು ಸೂಚಿಸುತ್ತವೆ.

ವಿಭಜಕ ರಾಜಕೀಯ

ಪ್ರಜಾಪ್ರಭುತ್ವ ಪರಂಪರೆಗಳನ್ನು ಎತ್ತಿ ಹಿಡಿಯಲು ಬದ್ಧವಾದ ಮತ್ತು ಕೋಮುವಾದಿಗಳೊಂದಿಗೆ ರಾಜಿ ಮಾಡಿಕೊಳ್ಳಲು ಸಿದ್ಧವಿಲ್ಲದ ಪತ್ರಿಕೆ "ಕರಾವಳಿ ಅಲೆ" ಗಂಭೀರ ಬೆದರಿಕೆಗಳನ್ನು ಎದುರಿಸುತ್ತಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದು, ಕನಿಷ್ಟ ಕ್ರಿಮಿನಲ್ ಬೆದರಿಕೆಗಳಿಂದ ಅದನ್ನು ಮುಕ್ತಗೊಳಿಸುವುದು ಅತ್ಯಗತ್ಯ.

ಮುಂಬೈ ಮೇಲಿನ ಇತ್ತೀಚಿನ ಭಯೋತ್ಪಾದಕ ದಾಳಿಗಳು ಜನಗಳ ಸಮ್ಮುಖ, ಅವರು ಯಾವ ಧಾರ್ಮಿಕ ಗುಂಪಿಗೂ ಸೇರಿರಲಿ, ದೇಶದ ಹಿತಾಸಕ್ತಿಯಿಂದ ಒಂದುಗೂಡಬೇಕಾದ ಸವಾಲನ್ನು ನಿರ್ಮಿಸಿದೆ. ಭಯೋತ್ಪಾದಕ ದಾಳಿಗಳಿಂದ ಸಂಕಷ್ಟಗಳಿಗೆ ಈಡಾಗುವವರು ಅಲ್ಪಸಂಖ್ಯಾತರಷ್ಟೇ ಅಲ್ಲ. ಭಯೋತ್ಪಾದನೆಗೆ ಧರ್ಮವಿಲ್ಲ, ದೇಶವಿಲ್ಲ. ಯಾವುದೇ ನಾಗರಿಕ ಸಮಾಜ ಅವರನ್ನು ಸಹಿಸಿಕೊಳ್ಳದು. ಅದಕ್ಕೆ ಅವರು ಅರ್ಹರಲ್ಲ. ಆದರೆ ಒಂದು ಸಮುದಾಯದ ಭಾವನೆಗಳು ಘಾಸಿಗೊಂಡಾಗ, ಅವರಲ್ಲಿ ಸ್ವಲ್ಪ ಮಟ್ಟಿಗೆ ಇದನ್ನು ಸಹಿಸಿಕೊಳ್ಳುವವರು, ಕೆಲವೊಮ್ಮೆ ಸೇರಿಕೊಳ್ಳುತ್ತಾರೆ ಮತ್ತು ಇಂತಹ ಗುಂಪುಗಳಿಗೆ ನೆರವಾಗುತ್ತಾರೆ. ಕೋಮುವಾದಕ್ಕಿಳಿಯುವವರ ವಿಭಜನಕಾರೀ ರಾಜಕೀಯವೇ ಬದುಕು, ಜೀವನಾಧಾರ, ಆತ್ಮಗೌರವ ಮತ್ತು ಭಾವನೆಗಳು ಘಾಸಿಗೊಂಡಿರುವವರ ಒಂದು ವಿಶಾಲ ಜಲಾಶಯವನ್ನು ಸೃಷ್ಟಿಸುತ್ತದೆ. ಭಯೋತ್ಪಾದಕರು ನೀರಿನೊಳಗೆ ಮೀನು ಸರಾಗವಾಗಿ ಓಡಾಡುವಂತೆ ಇಲ್ಲಿ ತೂರಿಕೊಳ್ಳುತ್ತಾರೆ. ಭಯೋತ್ಪಾದನೆಯನ್ನು ಅಡಗಿಸುವುದು, ಜತೆ-ಜತೆಗೇ ಕೋಮುವಾದವನ್ನು ಕೊನೆಗೊಳಿಸದೆ ಸಾಧ್ಯವಿಲ್ಲ.

ಭಯೋತ್ಪಾದಕರು ಕಾನೂನುಗಳನ್ನು ಗೌರವಿಸುವುದಿಲ್ಲ, ಅದೇ ರೀತಿ ಕೋಮುವಾದಿಗಳಲ್ಲೂ ಕಾನೂನಿನ ಬಗ್ಗೆ ಗೌರವವಿಲ್ಲ. ಕಾನೂನಿನ ಆಳ್ವಿಕೆ ಎಂಬುದು ದೇಶದ ಎಲ್ಲಾ ಕಾನೂನು ಪಾಲಿಸುವ ನಾಗರಿಕರಿಗೆ ಬಹಳ ಪ್ರಿಯವಾದದ್ದು. ಈ ಕಾನೂನಿಕ ಆಳ್ವಿಕೆ ಎಂಬ ಭವ್ಯ ಮಂದಿರವನ್ನು ಕೋಮುವಾದ ಮತ್ತು ಭಯೋತ್ಪಾದನೆ ಇವೆರಡೂ ಧ್ವಂಸ ಮಾಡುತ್ತವೆ. ಕಾನೂನಿನ ಆಳ್ವಿಕೆಯಿಲ್ಲದೆ ಸಂವಿಧಾನಿಕ ಆಡಳಿತ ಗಂಭೀರವಾಗಿ ಕುಂಠಿತಗೊಳ್ಳುತ್ತದೆ. ಸರ್ವಾಧಿಕಾರಶಾಹೀ ಆಡಳಿತ ಅದರ ಸ್ಥಾನ ಪಡೆಯುತ್ತದೆ, ಜನಗಳನ್ನು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ವಿರುದ್ಧವೇ ಮಾಡುವ ಅಪಪ್ರಚಾರದಲ್ಲಿ ಮೈಮರೆಸಲಾಗುತ್ತದೆ.

'ಸೌಹಾರ್ದ ಕರ್ನಾಟಕ'ವನ್ನು, ಜಾತ್ಯಾತೀತತೆಯಿಲ್ಲದೆ ನಮ್ಮ ದೇಶ ಒಂದು ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಉಳಿಯಲು ಸಾಧ್ಯವಿಲ್ಲ ಎಂದು ಅರಿತಿರುವ ವ್ಯಕ್ತಿಗಳು ರಚಿಸಿದ್ದಾರೆ. ಆದ್ದರಿಂದ ಇವರೆಲ್ಲಾ ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಪ್ರತಿಷ್ಠಾಪಿಸಿರುವ ಉನ್ನತ ಆದರ್ಶಗಳಿಗೆ ಬದ್ಧರಾಗಿದ್ದಾರೆ ಹಾಗೂ ಸಾರ್ವಭೌಮ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಮತ್ತು ಸಮಾಜವಾದಿ ನೀತಿಗಳನ್ನು ಕಾಪಾಡಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸುವ ಪ್ರತಿಜ್ಞೆಗೈಯುತ್ತಾರೆ.

'ಸೌಹಾರ್ದ ಕರ್ನಾಟಕ' ನಮ್ಮ ರಾಷ್ಟ್ರದ ಐಕ್ಯತೆ ಮತ್ತು ವೈವಿಧ್ಯತೆಯನ್ನು ಕಾಯ್ದುಕೊಳ್ಳಲು ಬದ್ಧವಾದ ಗುಂಪುಗಳು ಮತ್ತು ವ್ಯಕ್ತಿಗಳಿಂದ ಕೂಡಿದೆ. ದೇಶದ ಐಕ್ಯತೆಯನ್ನು ರಕ್ಷಿಸಲು, ಜನಗಳನ್ನು ಕೋಮು ಆಧಾರದಲ್ಲಿ ಒಡೆಯುವ ಎಲ್ಲಾ ಪ್ರಯತ್ನಗಳ ವಿರುದ್ಧ ಹೋರಾಡಲು ಹಾಗೂ ಯಾವುದೇ ಧರ್ಮಕ್ಕೆ ಅಥವಾ ಸಂಕುಚಿತವಾದೀ ರಾಜಕೀಯ ಗುಂಪಿಗೆ ಸೇರಿದ ಭಯೋತ್ಪಾದನೆಯ ವಿರುದ್ಧ ಜನಗಳಿಗೆ ಸತತವಾಗಿ ಶಿಕ್ಷಣ ನೀಡಲು ನಿಸ್ವಾರ್ಥತೆಯಿಂದ, ಬಹಿರಂಗವಾಗಿ ಕೆಲಸ ಮಾಡಲು ಬದ್ಧರಿರುವ ಎಲ್ಲರಿಗೂ ಇದರ ಬಾಗಿಲು ತೆರೆದಿರುತ್ತದೆ.

'ಸೌಹಾರ್ದ ಕರ್ನಾಟಕ', ಭಯೋತ್ಪಾದಕರು ಮತ್ತು ಕೋಮುವಾದಿಗಳು ಇಬ್ಬರೂ ತೊಡಗಿರುವ ಹಿಂಸಾತ್ಮಕ ಪ್ರಕ್ರಿಯೆಗೆ ತದ್ವಿರುದ್ಧವಾಗಿ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಬಲಪಡಿಸಲು ಸಕಲ ಪ್ರಯತ್ನಗಳನ್ನು ಮಾಡುತ್ತದೆ. ಅದು ಧಾರ್ಮಿಕ ಸೌಹಾರ್ದ ಮತ್ತು ಸಾಮಾಜಿಕ ಬದ್ಧತೆಯನ್ನು ತರಲು ನಿರಂತರವಾಗಿ ಪ್ರಯತ್ನಗಳನ್ನು ನಡೆಸುತ್ತದೆ ಹಾಗೂ ಈ ಭಯೋತ್ಪಾದನೆಯನ್ನು, ಅದು ಧಾರ್ಮಿಕವಾಗಿರಲಿ ಅಥವಾ ರಾಜಕೀಯವಾಗಿರಲಿ, ಸೃಷ್ಟಿಸಿ ಪೋಷಿಸುವ ಬಡತನ ಮತ್ತು ಸಂಕಟಗಳಿಂದ ಜನಸಮೂಹಗಳನ್ನು ಮೇಲಕ್ಕೆತ್ತಲು ತನ್ನನ್ನು ಸಮರ್ಪಿಸಿಕೊಂಡಿದೆ.


ಇದನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು. ನ್ಯಾ. ಸಾಲ್ಡಾನಾ, ವಿಜೆಕೆ ನಾಯರ್, ಎಫ್.ಟಿ.ಕೊಲಾಸೋ, ಆಗಾಖಾನ್, ಫಿರೋಜ್, ಪೆರಿಕೋ ಪ್ರಭು, ಎಸ್.ವೈ.ಜಿ. ಮುಂತಾದವರು ಭಾಗವಹಿಸಿದ್ದರು.

ಯುದ್ಧದಾಹಿ ಪಿಶಾಚಿಕೆ ತಕ್ಕ ಬೂಟಿನ ಪೂಜೆ

ಆ ಪತ್ರಕರ್ತನ ಎದೆಯಲ್ಲಿ ಎಷ್ಟು ಆಕ್ರೋಶವಿತ್ತೋ..! ಅಮೇರಿಕಾದ ಬಾಂಬುಗಳಿಂದ ಜರ್ಜರಿತವಾದ ಇರಾಕ್ ದೇಶದ ಜನರ ಮನದಲ್ಲಿ ಹೆಪ್ಪುಗಟ್ಟಿದ ಆಕ್ರೋಶ, ಇರಾಕ್ ಮೇಲಿನ ಅಮೇರಿಕಾ ಮತ್ತು ಮಿತ್ರ ಪಡೆಗಳ ದಾಳಿಯಿಂದ ಪ್ರಾಣ ಕಳೆದುಕೊಂಡ ಲಕ್ಷಾಂತರ ಮುಗ್ಧ ನಾಗರೀಕರ ಮತ್ತು ಮಕ್ಕಳ ಸಾವುಗಳ ಕುರಿತು ವರದಿ ಮಾಡಿ ಮಾಡಿ ಕಂಡು ನೊಂದ ರೋಷ ಅವನ ಮನದಲ್ಲಿ ಅದೆಷ್ಟಿತ್ತೋ... ತನಗೇನಾಗ ಬಹುದು ಅಂತ ಅವನು ಯೋಚಿಸಲಿಲ್ಲ... ಇರಾಕ್ ಮೇಲೆ ಯುದ್ಧಕ್ಕೆ ಆದೇಶಿಸಿದ ಅಮೇರಿಕಾದ ಅಧ್ಯಕ್ಷ ಕೊಲೆಪಾತಕಿ, ಯುದ್ಧ ಪಿಪಾಸು, ಜಾರ್ಜ್ ಬುಷ್ ತನ್ನೆದುರು ಪತ್ರಿಕಾಗೋಷ್ಠಿಯಲ್ಲಿ ಕೂತಿದ್ದಾನೆ. ಅದೂ ಕೇವಲ ಬರಿ ಇಪ್ಪತ್ತು ಅಡಿ ದೂರದಲ್ಲಿ, ಬಾಗ್ದಾದ್‌ನ ಪತ್ರಿಕಾಗೋಷ್ಠಿಯಲ್ಲಿ.

ಆತ ಎದ್ದ, ಇರಾಕ್ ಜನರದ್ದು ಮಾತ್ರವಲ್ಲ ರಕ್ತದಾಹಿ ದುರಾಕ್ರಮಣಕೋರನ ವಿರುದ್ಧ ಜಗತ್ತಿನಾದ್ಯಂತ ಭುಗಿಲೆದ್ದಿರುವ ಜನರ ಆಕ್ರೋಶವನ್ನು ಮೈ ತುಂಬಿಕೊಂಡು ಎದ್ದು ನಿಂತ. ಕಾಲಿನ ಶೂ ಕಳಚಿ ಎದುರು ಕುಳಿತ ಪಿಶಾಚಿಯ ಮೇಲೆ ಎಸದೇ ಬಿಟ್ಟ. ಪಿಶಾಚಿ ತಪ್ಪಿಸಿಕೊಂಡಿತು. ಮತ್ತೊಂದು ಶೂ ಪಿಶಾಚಿಯತ್ತ. ಅದನ್ನು ಪಿಶಾಚಿ ತಪ್ಪಿಸಿಕೊಂಡಿತು.

ಆ ಪಿಶಾಚಿಗೆ ಜಗತ್ತಿನಲ್ಲಿ ಎಲ್ಲಿ ಹೋದರೂ ತನ್ನ ಕಡೆಗೆ ಗುಂಡು ಹಾರಿಬರಬಹುದು, ಚಪ್ಪಲಿ,



ಶೂಗಳು ತೂರಿಬಹುದು ಅಂತ ಮೊದಲೇ ನಿರೀಕ್ಷೆ ಇದ್ದಂತೆ ಕಾಣುತ್ತದೆ. ಅಂತಹ ಕೆಲಸವನ್ನೇ ತಾನೇ ಅದು ಜಗದುದ್ದಗಲ ನಡೆಸಿರುವುದು.

ಇದಲ್ಲದೇ, ಎಷ್ಟೋ ಬಾರಿ ಚಪ್ಪಲಿ ಶೂಗಳಿಂದ ತಪ್ಪಿಸಿಕೊಂಡು ಅಭ್ಯಾಸ ಇರುವುದರಿಂದ ಈ ಬಾರಿಯೂ ತಪ್ಪಿಸಿಕೊಳ್ಳುವುದೇನು ಅಷ್ಟು ಕಷ್ಟವಾಗಲಿಲ್ಲ ಅಂತ ಕಾಣುತ್ತಿದೆ. ಹೋಗಲಿ ಅದರಿಂದ ಅವಮಾನವಾದರೂ ಆದಂತಾಯಿತೇ? ಉಹುಂ ಅದೂ ಆದಂತಿಲ್ಲ. ಮಾನ ಇದ್ದವರಿಗಲ್ಲವೇ ಅವಮಾನ ಆಗುವುದು.

'ಏ ನಾಯಿ, ಇದು ನಿನಗೆ ಬೀಳ್ಕೊಡುಗೆಯ ಮುತ್ತು. ಇದು ವಿಧವೆಯರು, ಅನಾಥರು ಹಾಗೂ ಸತ್ತವರ ಕೊಡುಗೆ' ಎಂದನಂತೆ ಪತ್ರಕರ್ತ ಮುಂತಾಜೀರ್ ಅಲ್ ಜೈದಿ. ಇದರ ಬಗ್ಗೆ ನಾಯಿ ಏನು ಬೊಗಳಿದೆ ಗೊತ್ತೆ. 'ಅಮೇರಿಕಾ ರಾಜಕೀಯ ಪ್ರತಿಭಟನೆಗೆ ಇದು ಸಮನಾಗಿದೆ.... ನಿಮಗೆ ವಿವರ ಬೇಕಿದ್ದಲ್ಲಿ ಹೇಳುತ್ತೇನೆ. ಇದು 10ನೇ ನಂಬರ್ ಬೂಟು' ಅಂತ ಎದುರಿದ್ದ ಪತ್ರಕರ್ತರಿಗೆ ವಿವರಿಸಿದ.

ಇದಾದ ಕೂಡಲೇ ಭದ್ರತಾ ಸಿಬ್ಬಂದಿ ಜೈದಿಯನ್ನು ನೆಲದ ಮೇಲೆ ಕೆಡವಿ ಥಳಿಸಿ ಎಳೆದುಕೊಂಡು ಹೋದರಂತೆ, ಕಾರ್ಪೆಟ್ ಮೇಲೆ ರಕ್ತ ಕಲೆ ಇತ್ತಂತೆ.

ಜಾರ್ಜ್‌ಬುಶ್‌ನ ಬೂಟು ನೆಕ್ಕುವವರು ಇನ್ನೇನು ತಾನೆ ಮಾಡಿಯಾರು. ಅವರ ಧಣಿ ಇರಾಕ್ ದೇಶದ ತುಂಬಾ ರಕ್ತದ ಕೋಡಿ ಹರಿಸಿದ್ದಾನೆ. ಇದ್ಯಾವ ಮಹಾ ಅಲ್ಲವೇ? ಅಂದ ಹಾಗೆ ಆ ಪತ್ರಕರ್ತ ಕೈರೋದಿಂದ ಪ್ರಸಾರಗೊಳ್ಳುವ ಅಲ್ ಬಾಗ್ದಾದಿಯಾ ಟಿ.ವಿ.ಯ ವರದಿಗಾರ.

ಬಾಲಂಗೋಚಿ: ಮೇಲಿನ ಘಟನೆ ನಡೆದಾಗ ಪತ್ರಿಕಾಗೋಷ್ಠಿ ನಡೆದ ಜಾಗದಲ್ಲಿ ಗದ್ದಲವೆದ್ದಿತು. ಆ ಗೌಜು ಗದ್ದಲದ ಬಗ್ಗೆ ನಂತರ ವಿವರಣೆ ಸಿಕ್ಕಿತು. ಅಲ್ಲಿ ನೆರೆದಿದ್ದ ಪತ್ರಕರ್ತರೆಲ್ಲ ಘಟನೆ ಕುರಿತು ಕ್ಷಮೆ ಕೇಳಬೇಕೆಂದು ಜೈದಿಗೆ ಆಗ್ರಹಿಸುತ್ತಿದ್ದರಿಂದ ಗದ್ದಲವಾಯಿತಂತೆ. ಇದನ್ನು ಹೇಳಿದವರು, ಪಿಶಾಚಿಯ ಜೊತೆ ಕುಳಿತಿದ್ದ ಇರಾಕ್ ಪ್ರಧಾನಿ ಅಲ್ಲ, ಬೇರೆ ಯಾರೂ ಅಲ್ಲ. ಸ್ವತಃ ಪಿಶಾಚಿಯೇ ಹಾಗಂತ ಹೇಳಿಕೊಂಡಿದೆ. ಛೇ...ಛೇ..ಏನು ದುರವಸ್ಥೆ.



ತಮಿಳುನಾಡು ದೇವಸ್ಥಾನ ಪ್ರವೇಶ ಚಳುವಳಿ

ಪ್ರಬಲವಾದ ದ್ರಾವಿಡ ಚಳುವಳಿಯನ್ನು ಕಂಡ ತಮಿಳುನಾಡಿನಲ್ಲಿ, ಒಂದಲ್ಲ ಒಂದು ದ್ರಾವಿಡ ಪಕ್ಷಗಳೇ ಸರ್ಕಾರದ ನೇತೃತ್ವದ ವಹಿಸುತ್ತಿರುವ ತಮಿಳುನಾಡಿನಲ್ಲಿ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆ ಇನ್ನೂ ಸಾಕಷ್ಟು ವ್ಯಾಪಕವಾಗಿ ಚಾಲ್ತಿಯಲ್ಲಿದೆ ಎನ್ನುವುದು ರಹಸ್ಯವೇನೂ ಅಲ್ಲ.

ಜಾತೀಯ ಆಚರಣೆ ಅದರಲ್ಲೂ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ತಮಿಳುನಾಡಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಗಂಭಿರ ಆಂದೋಲನವೊಂದು ನಡೆಯುತ್ತಿದೆ.

ತಮಿಳುನಾಡಿನ ಹಳ್ಳಿಹಳ್ಳಿಗಳಲ್ಲಿ ಹತ್ತಾರು, ನೂರಾರು ರೂಪಗಳಲ್ಲಿ ಹರಡಿಕೊಂಡಿರುವ ಅಸ್ಪೃಶ್ಯತೆ ಹಾಗೂ ಜಾತಿ ತಾರತಮ್ಯಗಳ ವಿರುದ್ಧ ತೀವ್ರತರದ ಹೋರಾಟಗಳನ್ನು ನಡೆಸುವುದು. ಹೋಟೆಲ್‌ಗಳಲ್ಲಿ ದಲಿತರಿಗೆ ಪ್ರತ್ಯೇಕ ತಟ್ಟೆ, ಲೋಟಗಳನ್ನು ಇಟ್ಟಿರುವ ಕಡೆ ಅವನ್ನು ಒಡೆದುಹಾಕುವುದು, ದಲಿತರಿಗೆ ಪ್ರವೇಶ ನಿಷೇಧಿಸಿರುವ ಕಡೆ ದಲಿತರ ದೇವಸ್ಥಾನ ಪ್ರವೇಶ ಚಳುವಳಿ ನಡೆಸುವುದು ಇಂತಹವು ವ್ಯಾಪಕವಾಗಿ ನಡೆದಿವೆ. ಅಸ್ಪೃಶ್ಯತಾ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಈ ಹೋರಾಟಗಳು ನಡೆಯುತ್ತಿವೆ. ಒಟ್ಟು ಈ ಚಳುವಳಿಗೆ ನೇತೃತ್ವ ನೀಡುತ್ತಿರುವುದು ಸಿಪಿಐ(ಎಂ) ಪಕ್ಷ.



ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಸಂಕರಕೋಯಿಲ್ ಸಮೀಪದ ಪಂಥಪುಲಿ ಎಂಬಲ್ಲಿ ಒಂದು ದೇವಾಲಯ. ಅದು ಕನ್ನನಲ್ಲೂರು ಮಾರಿಯಮ್ಮನ್ ದೇವಾಲಯ. ದೇವಾಲಯಕ್ಕೆ ದಲಿತರಿಗೆ ಪ್ರವೇಶ ನೀಡಬೇಕೆಂದು ನ್ಯಾಯಾಲಯದ ಆದೇಶವಿದೆ. ಆದರೂ ಜಾತಿವಾದಿಗಳು, ದಲಿತರ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡುತ್ತಿಲ್ಲ. ಸೆಪ್ಟೆಂಬರ್ ತಿಂಗಳಲ್ಲೇ, ಸ್ಥಳೀಯ ನ್ಯಾಯಾಲಯ ದಲಿತರ ಪೂಜೆಯ ಹಕ್ಕನ್ನು ಮಾನ್ಯ ಮಾಡಿ ಆದೇಶ ಕೊಟ್ಟಿದೆ.

ಭಾರತದಲ್ಲಿ ಜಾರಿಯಲ್ಲಿರುವುದು ಮನುಶಾಸ್ತ್ರವಾ ಅಥವಾ ಆಧುನಿಕ ಸಂವಿಧಾನವಾ ಅಂತ ಸ್ವಲ್ಪ ನಾವು ಮೈ ಚಿವುಟಿಕೊಂಡು ಯೋಚಿಸಬೇಕಿದೆ. ಸರ್ಕಾರದ ಸ್ಥಳೀಯ ಆಡಳಿತವೂ ಮೇಲ್ಜಾತಿಯವರ ಕೈ ಗೊಂಬೆಯಾಗಿದೆ. ನ್ಯಾಯಾಲಯದ ಆದೇಶ ಜಾರಿ ಮಾಡಲು ಅದು ಸಿದ್ಧವಿಲ್ಲ. ಆದರೆ ದಲಿತರು ಸಿಪಿಐ(ಎಂ) ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ. ಅವರು ತಮ್ಮ ಹಕ್ಕು ಕೈ ಬಿಡಲು ಸಿದ್ಧರಿಲ್ಲ.

ನ್ಯಾಯಾಲಯದ ಆದೇಶ ಜಾರಿ ಮಾಡುವ ಸಂಬಂಧ ಮಾಡಲಾದ ಮನವಿಯನ್ನು ದೇವಾಲಯದ ಆಡಳಿತ ಮಂಡಳಿ ತಿರಸ್ಕರಿಸಿತು. ಈ ಸಂಬಂಧ ನಡೆಸಲಾದ ಮಾತುಕತೆಯೂ ವಿಫಲವಾಯಿತು. ಸರಿ ಡಿಸೆಂಬರ್ 17, ದೇವಾಲಯ ಪ್ರವೇಶ ಚಳುವಳಿ ನಿಗದಿಯಾಯಿತು.

ನೂರಾರು ದಲಿತರು ಕಲೆತರು. ಮೆರವಣಿಗೆಯ ಮುಂದೆ ಸಿಪಿಐ(ಎಂ) ಮುಖಂಡರು. ದೇವಾಲಯದ ಕಡೆಗೆ ನಡಿಗೆ. ಆಡಳಿತ 144ನೇ ಸೆಕ್ಷನ್ ಜಾರಿ ಮಾಡಿತು. ಮಾತ್ರವಲ್ಲ, ದಲಿತರ ನಡುವೆ ಒಡಕು ತರಲು ಯತ್ನಿಸಿತು. ಊಹುಂ. ಪ್ರಯೋಜನವಾಗಲಿಲ್ಲ. ಸಿಪಿಐ(ಎಂ) ಶಾಸಕಿ ಕೆ.ಬಾಲಭಾರತಿ, ಸಿಪಿಐ(ಎಂ) ಮುಖಂಡರುಗಳಾದ ವೆಂಕಟ ರಾಮನ್, ಎನ್.ನನ್ಮಾರನ್, ಆರ್.ಕರುಮಾಲೈಯನ್ ಮುಂತಾದವರು ಮುಂಚೂಣಿಯಲ್ಲಿ.

ಪೊಲೀಸರು 400 ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದಾರೆ. ಶಾಸಕರನ್ನೂ ದೇವಾಲಯದ ಕಡೆಗೆ ಬಿಡಲಿಲ್ಲ. ಎಲ್ಲರನ್ನೂ ಬಂಧಿಸಲಾಗಿದೆ.

ರಾಜ್ಯ ಸರ್ಕಾರ ಈ ಬಗ್ಗೆ ಮೌನ ವಹಿಸಿದೆ. ಜಿಲ್ಲಾಡಳಿತ ಜಾತಿವಾದಿಗಳೊಂದಿಗೆ ಶಾಮೀಲಾಗಿದೆ. ರಾಜ್ಯವ್ಯಾಪಿ ಹೋರಾಟವು ತೀವ್ರಗೊಳ್ಳಲಿದೆ ಎಂದು ಚಳುವಳಿಗಾರರು ಎಚ್ಚರಿಕೆ ನೀಡಿದ್ದಾರೆ.

"ಧರ್ಮ ಅದನ್ನು ಸೃಷ್ಟಿಸುವ ಪರಿಸ್ಥಿತಿಗಳ ಸುಗಂಧ" ಎಂದಿದ್ದರು ಏಳು ದಶಕಗಳ ಹಿಂದೆ ಸ್ಪೇನಿನಲ್ಲಿ ಫ್ಯಾಸಿಸಂ ವಿರುದ್ಧ ಯುದ್ಧದಲ್ಲಿ ಪ್ರಾಣ ಕಳಕೊಂಡ ಯುವ ಮಾರ್ಕ್ಸ್‌ವಾದಿ, ಕ್ರಿಸ್ಟೊಫರ್ ಕಾಡ್‌ವೆಲ್. 'ಸೌಹಾರ್ದ ಕರ್ನಾಟಕ' ಪ್ರಸಕ್ತ ಪರಿಸ್ಥಿತಿಗಳ ಸುಗಂಧ ಎನ್ನುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಈ ಲೇಖನದಲ್ಲಿ ಕಾರ್ಮಿಕ ವರ್ಗದ ಕಣ್ಣೋಟದಿಂದ ಧರ್ಮದ ವಿಶ್ಲೇಷಣೆ ಮಾಡುತ್ತಾರೆ ಹಾಗೂ ಕೋಮುವಾದ ಮತ್ತು ಭಯೋತ್ಪಾದನೆಯನ್ನು ಹುಟ್ಟು ಹಾಕುವ ದರಿದ್ರ ಪರಿಸ್ಥಿತಿಗಳನ್ನು ಬದಲಿಸುವ ಹೋರಾಟದಲ್ಲಿ ದುಡಿಯುವ ಜನಗಳ ಜತೆಗೂಡುವವರೆಲ್ಲಾ ನಮ್ಮ ಜಗತ್ತಿನಲ್ಲಿ ಹೊಸದೊಂದು ಸುಗಂಧವನ್ನು ಸೃಷ್ಟಿಸಲು ಪ್ರಯತ್ನಿಸುವವರು, ಇವರೆಲ್ಲರೊಡನೆ ಸಮಾನ ಅಂಶಗಳನ್ನು ಕಂಡುಕೊಳ್ಳುವುದು ಮಹತ್ವವಾಗುತ್ತದೆ ಎನ್ನುತ್ತಾರೆ.

ಧರ್ಮ ಮತ್ತು ಕಾರ್ಮಿಕ ವರ್ಗದ ಪಕ್ಷ

ಸೌಹಾರ್ದ ಕರ್ನಾಟಕದಲ್ಲಿನ ಸಮಾನ ಅಂಶಗಳು

ಕೋಮುವಾದ ಮತ್ತು ಭಯೋತ್ಪಾದನೆಯ ವಿರುದ್ಧ ನಮ್ಮ ಪ್ರಚಾರಾಂದೋಲನದಲ್ಲಿ ನಾವು ಧಾರ್ಮಿಕ ಸ್ವಾತಂತ್ರ್ಯ, ಆತ್ಮಸಾಕ್ಷಿಯ ಸ್ವಾತಂತ್ರ್ಯ, ಧರ್ಮವನ್ನು ಆಚರಿಸುವ ಮತ್ತು ಪ್ರತಿಪಾದಿಸುವ ಸ್ವಾತಂತ್ರ್ಯದ ಬಗ್ಗೆ ಮಾತಾಡಬೇಕಾಗುತ್ತದೆ, ಮತಾಂತರದ ಹಕ್ಕಿನ ವಿವಿಧ ಅಂಶಗಳನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ನಮ್ಮ ಚಟುವಟಿಕೆಗಳಲ್ಲಿ ನಾವು ಅಲ್ಪಸಂಖ್ಯಾತ ಸಮುದಾಯಗಳ ಧಾರ್ಮಿಕ ಮುಖಂಡರೊಂದಿಗೆ ಮತ್ತು ಕೋಮುವಾದಿಗಳಲ್ಲದ ಮತ್ತು ಜನಪರರಾದ ಸ್ವಾಮೀಜಿಗಳೊಂದಿಗೆ ನಿಕಟವಾಗಿ ಕೆಲಸ ಮಾಡಬೇಕಾಗುತ್ತದೆ. ಜಾತ್ಯಾತೀತ ಮೌಲ್ಯಗಳಿಗೆ ಮತ್ತು ಮುಕ್ತವಾಗಿ ಧರ್ಮವನ್ನು ಆಚರಿಸುವ ಜನಸಮೂಹಗಳ ಹಕ್ಕುಗಳಿಗೆ ನಾವು ಬದ್ಧರಾಗಿದ್ದೇವೆ ಎಂದರೆ ನಾವು ಯಾವುದೇ ಒಂದು ಧರ್ಮವನ್ನು ಪ್ರತಿಪಾದಿಸುತ್ತೇವೆ ಅಥವಾ ಅದರ ಪರವಾಗಿದ್ದೇವೆ ಎಂದೇನೂ ಅರ್ಥವಲ್ಲ.

ಜಾತ್ಯಾತೀತತೆಯ ಪರವಾಗಿ ವಾದ ಮಾಡುವವರೆಲ್ಲಾ ಖೋಟಾ ಜಾತ್ಯಾತೀತರು, ಅವರು ಅಲ್ಪಸಂಖ್ಯಾತರ ತುಷ್ಟೀಕರಣದಲ್ಲಿ ತೊಡಗಿರುವವರು ಎಂಬುದು ಸಂಘ ಪರಿವಾರದ ಅಪಪ್ರಚಾರ. ಅವರ ಪ್ರಕಾರ ಜಾತ್ಯಾತೀತತೆಯ ಪರವಾಗಿ ವಾದ ಮಾಡುವ, ಅವರು 'ಖೋಟಾ ಜಾತ್ಯಾತೀತತೆ' ಎನ್ನುವುದನ್ನು ಪಾಲಿಸುವ ನಾವೆಲ್ಲ ಹಿಂದೂ ಧರ್ಮವನ್ನು ವಿರೋಧಿಸುವವರು! ಅವರ ಈ ಎರಡೂ ವಾದಗಳು ಶುದ್ಧ ಸುಳ್ಳುಗಳು. ನಮ್ಮ ಪರಿಕಲ್ಪನೆಯಲ್ಲಿ ಜಾತ್ಯಾತೀತತೆ (ಅಥವಾ ಧರ್ಮನಿರಪೇಕ್ಷತೆ)ಯೆಂದರೆ ಧರ್ಮ ಮತ್ತು ಪ್ರಭುತ್ವ ಇವೆರಡು ಪ್ರತ್ಯೇಕವಾಗಿರಬೇಕು ಎಂದರ್ಥ. ಜಾತ್ಯಾತೀತತೆ ಅಥವಾ ಧರ್ಮ ನಿರಪೇಕ್ಷತೆಯೆಂದರೆ ಧಾರ್ಮಿಕ ಸಹಿಷ್ಣುತೆಯಷ್ಟೇ ಅಲ್ಲ, ಆರೆಸ್ಸೆಸ್ ಪ್ರತಿಪಾದಿಸುವ 'ಸರ್ವ ಧರ್ಮ ಸಮಭಾವ'ವಷ್ಟೆ ಅಲ್ಲ. ನಮ್ಮ 'ಧರ್ಮನಿರಪೇಕ್ಷತೆ'ಯ ಅರ್ಥವೇನು, ಅದು ಹೇಗೆ ಆರೆಸ್ಸೆಸ್‌ನ 'ಪಂಥ ನಿರಪೇಕ್ಷತೆ'ಯಿಂದ ಭಿನ್ನವಾಗಿದೆ ಎಂಬುದನ್ನು ಹಿಂದೊಂದು ಲೇಖನದಲ್ಲಿ ನಾವು ವಿವರಿಸಿದ್ದೇವೆ. ಈ ಲೇಖನದಲ್ಲಿ ನಾವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ವಿವಿಧ ಧರ್ಮಗಳ ನಡುವಿನ ವಿವಾದಗಳ ಬಗ್ಗೆ ಅಥವಾ ಯಾವುದೇ ಒಂದು ಧರ್ಮದ ಪರವೋ ವಿರುದ್ಧವೋ ಎಂಬ ಬಗ್ಗೆಯಷ್ಟೇ ಅಲ್ಲ, ಒಟ್ಟಾರೆಯಾಗಿ ಧರ್ಮ ಎಂಬುದರ ಬಗ್ಗೆಯೇ ನಮ್ಮ ನೋಟಗಳನ್ನು ವಿವರಿಸುತ್ತೇವೆ.

ಕಮ್ಯುನಿಸ್ಟರು ದೇವರಿಗೆ ವಿರುದ್ಧ ವಾಗಿದ್ದಾರೆಯೇ? ಕಮ್ಯುನಿಸ್ಟ್ ಪಕ್ಷ ದೇವರನ್ನು ಅಥವಾ ದೇವರಲ್ಲಿ ನಂಬಿಕೆಯಿರುವವರನ್ನು ವಿರೋಧಿಸುವುದಿಲ್ಲ. ಕಮ್ಯುನಿಸ್ಟರಿಗೆ ದೇವರಲ್ಲಿ ನಂಬಿಕೆಯಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ದೇವರಲ್ಲಿ ನಂಬಿಕೆಯೆ ಇಲ್ಲದಿರುವಾಗ ವಿರೋಧಿಸುವ ಪ್ರಶ್ನೆಯೇ ಬರುವುದಿಲ್ಲ. ದೇವರು ಎಂಬ ಪರಿಕಲ್ಪನೆಯ ಬಗ್ಗೆ ಕಮ್ಯುನಿಸ್ಟರಿಗೆ ಚೆನ್ನಾಗಿ ತಿಳಿದಿದೆ. ಅದನ್ನು ಉಪೇಕ್ಷಿಸಿ ಅವರು ಜನಸಮೂಹಗಳ ನಡುವೆ ಕೆಲಸ ಮಾಡಲು ಸಾಧ್ಯವಿಲ್ಲ.


ಸಮಾನ ಆಧಾರ

ಎಲ್ಲಾ ಧರ್ಮಗಳಲ್ಲಿ ಒಂದು ಸಮಾನ ಆಧಾರವಿದೆ. ತಮ್ಮ ಸುತ್ತಲಿರುವ ಜಗತ್ತು, ಸಮಾಜ ಕೂಡ ದೈವದತ್ತ, ಅವಕ್ಕೆ ಒಂದು ದೈವಿಕ ಮೂಲವಿದೆ ಎಂದು ಅವು ಭಾವಿಸುತ್ತವೆ. ಅವೆಲ್ಲಾ ಈಗಿರುವ ಸಾಮಾಜಿಕ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳುವ ನಿಲುವು ತಳೆಯುತ್ತವೆ. ಜನಗಳ ಸಂಕಟ ಅವರ ಸ್ವಂತ ಪಾಪಗಳ ಫಲ, ಇಂತಹ ಪರಿಸ್ಥಿತಿಗಳಿಂದ ಮುಕ್ತಿ ಪಡೆಯಲು ಅವರು ಧಾರ್ಮಿಕ ನಂಬಿಕೆಗಳ, ಆಚರಣೆಗಳ ಮೊರೆ ಹೋಗಬೇಕು ಎಂದು ಅವು ಹೇಳುತ್ತವೆ. ಅವರಲ್ಲಿ ಈ ಬಗ್ಗೆ ಐಕ್ಯತೆಯಿದ್ದು, ಜನಗಳು ಅವರಿಗೆ ಒಪ್ಪಿಗೆಯಾದ ಆಚರಣೆಗಳನ್ನು ಅನುಸರಿಸಿ ಎಂದು ಪ್ರತಿಪಾದಿಸುತ್ತಿದ್ದರೆ, ನಾವು ಒಬ್ಬರನ್ನು ಇನ್ನೊಬ್ಬರಿಂದ ರಕ್ಷಿಸುವ ಪ್ರಯತ್ನದ ಭಾರ ಹೊರಬೇಕಾಗಿರಲಿಲ್ಲ. ನಾವು ಕೇವಲ ಧರ್ಮನಿರಪೇಕ್ಷರಾಗಿದ್ದು ಧರ್ಮವನ್ನು ರಾಜಕೀಯದೊಳಗೆ ತರಬೇಡಿ ಎಂದಷ್ಟೇ ಹೇಳುತ್ತಿದ್ದೆವು.

ಧರ್ಮದ ಹೆಸರಿನಲ್ಲಿ ರಾಜಕೀಯ

ಎಲ್ಲಾ ಧರ್ಮಗಳೂ, ಹಿಂದೆಯೂ ತಮ್ಮ ಹಿತಕ್ಕಾಗಿ ರಾಜಕೀಯದಲ್ಲಿ ತೊಡಗಿದ್ದವು, ಈಗಲೂ ತೊಡಗಿವೆ. ರಾಜಕೀಯ ಹಿತಗಳನ್ನು ಈಡೇರಿಸಿಕೊಳ್ಳಲು ಧಾರ್ಮಿಕ ನಂಬಿಕೆಗಳನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಸಂಘ ಪರಿವಾರ ಮಾಡುತ್ತಿರುವುದು ಇದನ್ನೇ. ಮೂಲಭೂತವಾದಿಗಳು ಮತ್ತು ಭಯೋತ್ಪಾದಕರು ಮಾಡುತ್ತಿರುವುದೂ ಇದನ್ನೇ. ನಿರ್ದಿಷ್ಟ ಧರ್ಮದ ಹೆಸರಿನಲ್ಲಿ ಅವರು ಪರಸ್ಪರ ದಾಳಿ ಮಾಡುತ್ತಿದ್ದಾರೆ.

ಅವೆಲ್ಲವುಗಳ ನಡುವೆ ಒಂದು ಮಹತ್ವದ ವಿಷಯದಲ್ಲಿ ಐಕ್ಯತೆ ಇದೆ. ಅವು ಕಾರ್ಮಿಕ ವರ್ಗದ ತತ್ವ ಮಾರ್ಕ್ಸ್‌ವಾದಕ್ಕೆ ವಿರುದ್ಧವಾಗಿವೆ. ಅವರು ಮಾರ್ಕ್ಸ್‌ವಾದಿಗಳು/ ಕಮ್ಯುನಿಸ್ಟರು ಧರ್ಮ-ವಿರೋಧಿಗಳು ಮತ್ತು ದೇವರ ಪರಿಕಲ್ಪನೆಗೆ ವಿರುದ್ಧವಾಗಿರುವವರು ಎಂದು ಬಗೆಯುತ್ತಾರೆ. ನಮ್ಮ ಪ್ರಚಾರಾಂದೋಲನದಲ್ಲಿ ವಿವಿಧ ಧಾರ್ಮಿಕ ಮುಖಂಡರೊಂದಿಗೆ ಸಂಪರ್ಕಕ್ಕೆ ಬರುವಾಗ ನಾವು ಈ ಅಂಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ.




"ಧರ್ಮ ಆಶಾಹೀನರ ಆಸೆ. ಹೃದಯಹೀನ ಜಗತ್ತಿನ ಹೃದಯ. ಅದು ದಮನಿತರ ನಿಟ್ಟುಸಿರು. ಆದ್ದರಿಂದ ಅದು ಜನಸಮೂಹಗಳ ಅಫೀಮು".
- ಕಾರ್ಲ್ ಮಾರ್ಕ್ಸ್

ಅವರು ಕಮ್ಯುನಿಸಂ/ ಮಾರ್ಕ್ಸ್‌ವಾದದ ಬಗ್ಗೆ ಏನು ಭಾವಿಸುತ್ತಾರೋ ಕಮ್ಯುನಿಸಂ/ ಮಾರ್ಕ್ಸ್‌ವಾದ ಅದಾಗಿಲ್ಲ. ಕಮ್ಯುನಿಸ್ಟರು ದೇವರಿಗೆ ವಿರುದ್ಧ ವಾಗಿದ್ದಾರೆಯೇ? ಕಮ್ಯುನಿಸ್ಟ್ ಪಕ್ಷ ದೇವರನ್ನು ಅಥವಾ ದೇವರಲ್ಲಿ ನಂಬಿಕೆಯಿರುವವರನ್ನು ವಿರೋಧಿಸುವುದಿಲ್ಲ. ಕಮ್ಯುನಿಸ್ಟರಿಗೆ ದೇವರಲ್ಲಿ ನಂಬಿಕೆಯಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ದೇವರಲ್ಲಿ ನಂಬಿಕೆಯೆ ಇಲ್ಲದಿರುವಾಗ ವಿರೋಧಿಸುವ ಪ್ರಶ್ನೆಯೇ ಬರುವುದಿಲ್ಲ. ದೇವರು ಎಂಬ ಪರಿಕಲ್ಪನೆಯ ಬಗ್ಗೆ ಕಮ್ಯುನಿಸ್ಟರಿಗೆ ಚೆನ್ನಾಗಿ ತಿಳಿದಿದೆ. ಅದನ್ನು ಉಪೇಕ್ಷಿಸಿ ಅವರು ಜನಸಮೂಹಗಳ ನಡುವೆ ಕೆಲಸ ಮಾಡಲು ಸಾಧ್ಯವಿಲ್ಲ. ಕಮ್ಯುನಿಸ್ಟರು ಪಕ್ಕಾ ಭೌತಿಕವಾದಿಗಳು. ಅವರಿಗೆ ಎಲ್ಲಾ ಧರ್ಮಗಳಿಗೆ ಇರುವಂತೆ ಭಾವವಾದದಲ್ಲಿ ನಂಬಿಕೆಯಿಲ್ಲ. ಇದರ ಅರ್ಥ ಅವರು ಭೌತ ಸುಖಗಳಲ್ಲಿ ಮುಳುಗಿರುವವರು, ಭಾವ, ಆದರ್ಶಗಳು ಇಲ್ಲದವರು ಎಂದಲ್ಲ. ವಾಸ್ತವವಾಗಿ ಅವರು ತಾವು ಇಷ್ಟಪಡುವ ಆದರ್ಶಗಳಿಗಾಗಿ ಭೌತಿಕ ಸುಖಗಳನ್ನು ತ್ಯಾಗ ಮಾಡಲು ಸಿದ್ಧರಿರುವವರು. ಜನಸಮೂಹಗಳನ್ನು ಅವರ ಸಾಮಾಜಿಕ ಸಂಕೋಲೆಗಳಿಂದ ಉದ್ಧಾರ ಮಾಡಬೇಕು ಎಂಬುದು ಅವರ ಆದರ್ಶ. ಈ ಆದರ್ಶದ ಈಡೇರಿಕೆಯ ಪ್ರಯತ್ನದಲ್ಲಿ ಅವರು ಈ ಸಂಕೋಲೆಗಳನ್ನೆಲ್ಲಾ ದೇವರೇ ಸೃಷ್ಟಿಸಿರುವುದು, ಉಳಿಸಿಕೊಂಡಿರುವುದು ಎಂಬ ಧಾರ್ಮಿಕ ಪರಿಕಲ್ಪನೆಯನ್ನು ಎದುರಿಸಲೇಬೇಕಾಗುತ್ತದೆ. ಕಮ್ಯುನಿಸ್ಟರು ಇದು ತಪ್ಪು ಕಲ್ಪನೆ ಎಂದು ವಿರೋಧಿಸುತ್ತಾರೆ. ಕಮ್ಯುನಿಸ್ಟರಿಗೆ ವೈಯಕ್ತಿಕ ಮೋಕ್ಷ ಆದರ್ಶವಲ್ಲ, ಬದಲಿಗೆ ವಿಶಾಲ ಜನಸಮೂಹಗಳನ್ನು ಬಿಗಿದಿರುವ ದರಿದ್ರ ಪರಿಸ್ಥಿತಿಗಳಿಂದ ಅವರನ್ನು ಉದ್ಧಾರ ಮಾಡುವುದು ಅವರ ಆದರ್ಶ. ಸಹಜವಾಗಿಯೇ, ಈ ಪರಿಸ್ಥಿತಿಗಳನ್ನು ಎಂದೂ ಮಾರ್ಪಾಟು ಗೊಳಿಸಲು ಸಾಧ್ಯವಿಲ್ಲ ಎಂಬ ವಿಚಾರವನ್ನು ಕಮ್ಯುನಿಸ್ಟರು ವಿರೋಧಿಸುತ್ತಾರೆ. ಇಂತಹ ಪರಿಸ್ಥಿತಿಗಳನ್ನು ಅವರು ಒಪ್ಪುವುದಿಲ್ಲ, ಸಮಾಜವನ್ನು ಬದಲಿಸಲು ಏನೂ ಮಾಡಲು ಸಾಧ್ಯವಿಲ್ಲ ಎಂಬುದನ್ನು ಅವರು ಒಪ್ಪುವುದಿಲ್ಲ, ಅವು ದೈವನಿರ್ಮಿತ, ಅವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಬೇಕಷ್ಟೇ ಎಂಬುದನ್ನು ಕೂಡಾ ಅವರು ಒಪ್ಪುವುದಿಲ್ಲ.

'ಕಮ್ಯುನಿಸ್ಟ'ರಿಗೆ ಆದರ್ಶವಾಗಿರುವುದನ್ನು ಕಮ್ಯುನಿಸ್ಟ್ ಪಕ್ಷದ ಪ್ರತಿಯೊಬ್ಬ ಸದಸ್ಯರ ಮೇಲೂ ಜಾರಿ ಗೊಳಿಸಲಾಗುವು ದಿಲ್ಲ. ದೇವರಲ್ಲಿ ನಂಬಿಕೆಯಿರುವವರನ್ನೂ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ ಸೇರಿಸಿ ಕೊಳ್ಳಲಾಗುತ್ತದೆ. ದೇವರನ್ನು ನಂಬುವ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಇದ್ದಾರೆ. ಅವರ ವೈಯಕ್ತಿಕ ನಂಬಿಕೆಯಲ್ಲಿ ಅದು ಅಡ್ಡ ಬರುವುದಿಲ್ಲ. ಆದರೆ ಪ್ರತಿಯೊಬ್ಬ ಸದಸ್ಯನೂ ಕಮ್ಯುನಿಸ್ಟ್ ಪಕ್ಷದ ಆದರ್ಶಗಳಿಗೆ ಅನುಗುಣವಾಗಿ ಕೆಲಸ ಮಾಡಬೇಕು ಎಂದು ನಿರೀಕ್ಷಿಸುತ್ತದೆ. ಪರಿಸ್ಥಿತಿಗಳು ದೈವ ನಿರ್ಮಿತ,





ಸಂಘ ಪರಿವಾರದಿಂದ ಬಾಬ್ರಿ ಮಸೀದಿ ಧ್ವಂಸ

ಸಮಾಜವನ್ನು ಸೂಕ್ತವಾಗಿ ನಿರ್ವಹಿಸಬೇಕು ಎಂಬಿತ್ಯಾದಿಗಳನ್ನು ಈ ಆದರ್ಶಗಳು ಸ್ವೀಕರಿಸುವುದಿಲ್ಲ. ಮಾನವ ಕುಲವನ್ನು ಕೋಮು ಆಧಾರದಲ್ಲಿ ಒಡೆಯುವುದು, ಒಂದು ಧರ್ಮವನ್ನು ಅನುಸರಿಸುವವರು ಇನ್ನೊಂದು ಧರ್ಮದ ಅನುಯಾಯಿಗಳ ಮೇಲೆ ದಾಳಿ ಮಾಡುವಂತೆ ಮಾಡುವುದು ದೈವ ಕ್ರಿಯೆಯಲ್ಲ ಎಂಬುದು ಕಮ್ಯುನಿಸ್ಟರಿಗೆ ಗೊತ್ತು. ಇತರ ಧರ್ಮಾನುಯಾಯಿಗಳ ರಕ್ತ ಹರಿಸಲು ಮುಂದಾಗುವುದು ಆಧ್ಯಾತ್ಮಿಕತೆಯಲ್ಲ. ಅದು ಧರ್ಮದ ರಾಜಕೀಯ; ಇದು ಧರ್ಮದ ಹೆಸರಿನಲ್ಲಿ ರಕ್ತಪಾತ ನಿರ್ಮಿಸುತ್ತದೆ. ಕಮ್ಯುನಿಸ್ಟರು ಮಾತ್ರವೇ ಏಕೆ, ಬೇರೆ ಯಾರೂ ಕೂಡಾ ಕೋಮು ಕಿತ್ತಾಟ, ಭಯೋತ್ಪಾದನೆಯನ್ನು ಯಾವುದೋ ದೈವ ಶಕ್ತಿ ನಿರ್ಮಿಸಿದೆ ಎಂದು ಹೇಳಲಾರರು. ಕಮ್ಯುನಿಸ್ಟರು ವಿರೋಧಿಸುವುದು ಈ ದೈವಿಕವಲ್ಲದ ಶಕ್ತಿಯನ್ನೇ. ಅವರಿಗೆ ದೇವರು ಇದ್ದಾನೋ ಇಲ್ಲವೋ ಎಂಬುದು ಪ್ರಶ್ನೆಯಲ್ಲ. ಆದರೆ ಯಾರಾದರೂ ಧರ್ಮದ ಕೋಮುವಾದಿ ಅಂಶಗಳನ್ನು ಅನುಸರಿಸದೆ, ಅದರ ಆಧ್ಯಾತ್ಮಿಕ ಅಂಶಗಳನ್ನು ಅನುಸರಿಸುತ್ತಾರೆಂದರೆ ಅದಕ್ಕೆ ಅವರ ವಿರೋಧವಿಲ್ಲ.

ಧರ್ಮದ ಬಗ್ಗೆ ಮಾರ್ಕ್ಸ್

ಧರ್ಮ ಜನಸಮೂಹಗಳ ಅಫೀಮು ಎಂದು ಮಾರ್ಕ್ಸ್ ಹೇಳಿರುವುದಾಗಿ ಅವರ ಒಂದು ವಾಕ್ಯವನ್ನು ಅವರು ಅದನ್ನು ಯಾವ ಸಂದರ್ಭದಲ್ಲಿ ಹೇಳಿದರು ಎಂಬುದನ್ನು ಮರೆಮಾಚಿ ಉದ್ಧರಿಸುವುದು ಹಲವರ ಮೆಚ್ಚಿನ ಹವ್ಯಾಸವಾಗಿಬಿಟ್ಟಿದೆ. ಮಾರ್ಕ್ಸ್ ಧರ್ಮದ ಬಗ್ಗೆ



ಪಟ್ಟುತ್ತಲೇ ಇರುವ ದಳ್ಳುರಿಗೆ ಬಲಿಯೆಷ್ಟು?

ಹೇಳುತ್ತ ಈ ಒಂದು ವಾಕ್ಯದ ಮೊದಲಿನ ವಾಕ್ಯದಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಉಪೇಕ್ಷಿಸಲಾಗುತ್ತದೆ. ಒಂದು ಶೋಷಿತ ಸಮಾಜದಲ್ಲಿ ಮಾನವ ಜೀವಿಗಳು ತಮ್ಮನ್ನು ಸಂಕಟಗಳಿಂದ ಬಿಡುಗಡೆಗೊಳಿಸುವ ಒಂದು ಶಕ್ತಿಯಿದೆ ಎಂದು ನಂಬಬೇಕಾಗುತ್ತದೆ. ಆದ್ದರಿಂದ ಮಾನವ ಜೀವಿಗಳು ದೇವರ ಪರಿಕಲ್ಪನೆಯನ್ನು ತಮಗೆ ಸಾಧ್ಯವಾದಷ್ಟು ಉತ್ತಮವಾದ ಸ್ವರೂಪದಲ್ಲಿ ಸೃಷ್ಟಿಸಿಕೊಳ್ಳುತ್ತಾರೆ ಎನ್ನುತ್ತಾರೆ ಮಾರ್ಕ್ಸ್. ಈ ಬಿಂಬವನ್ನು ನಂಬಿ ಶೋಷಣೆ ಮತ್ತು ದುಃಖಗಳಿಲ್ಲದ ಒಂದು ಜಗತ್ತಿನ ನಿರೀಕ್ಷೆಯಿಟ್ಟುಕೊಳ್ಳುತ್ತಾರೆ. ಹಲವು ಬಾರಿ ಉದ್ಧರಿಸಿರುವ ಈ 'ಅಫೀಮು' ವಾಕ್ಯದ ಹಿಂದಿನ ಎರಡು ವಾಕ್ಯಗಳು ಹೀಗಿವೆ: **"ಧರ್ಮ ಆಶಾಹೀನರ ಆಸೆ. ಹೃದಯಹೀನ ಜಗತ್ತಿನ ಹೃದಯ ಅದು ದಮನಿತರ ನಿಟ್ಟುಸಿರು. ಆದ್ದರಿಂದ ಅದು ಜನಸಮೂಹಗಳ ಅಫೀಮು".**

ಮಾರ್ಕ್ಸ್ ಹೀಗೆ ಹೇಳಿದುದರ ಅರ್ಥವೆಂದರೆ, ಧರ್ಮ ಎಂಬುದು ನರಳುತ್ತಿರುವ ಜನಗಳ ಆಸೆ, ನಿಟ್ಟುಸಿರು ಮತ್ತು ಭ್ರಮೆ. ವಾಸ್ತವತೆಯೆಂದರೆ ಹಿಂಡಿ ಹಿಪ್ಪೆ ಮಾಡುವ ಕಡು ಬಡತನ ಮತ್ತು ದುಃಖ. ಈ ಭ್ರಮೆ ಜನಸಮೂಹಗಳನ್ನು ಆವರಿಸಿರುವವರೆಗೆ ಅವರು ಶೋಷಣೆಯಿಲ್ಲದ ಒಂದು ಸಮಾಜವನ್ನು ನಿರ್ಮಿಸುವ ಪ್ರಯತ್ನಗಳಿಗೆ ಇಳಿಯಲು ಸಾಧ್ಯವಿಲ್ಲ. ಜನಸಮೂಹಗಳು ವಾಸ್ತವತೆಯ ಬಗ್ಗೆ ಜಾಗೃತಗೊಳ್ಳಬೇಕು, ಒಂದು ಭ್ರಮೆಯ ಪ್ರಭಾವದೊಳಗೆ ಉಳಿಯಬಾರದು ಎಂಬುದು ಮಾರ್ಕ್ಸ್‌ರವರ ಆಶಯ. ಅವರು ಈ ಭ್ರಮೆಯನ್ನು ಅಫೀಮಿನೊಂದಿಗೆ ಹೋಲಿಸುತ್ತಾರೆ.

ಇಲ್ಲಿ ಮಾರ್ಕ್ಸ್ ಬೇರೆ ಯಾವುದೇ ವ್ಯಕ್ತಿಗಿಂತ ಹೆಚ್ಚು ಮಾನವೀಯನಾಗಿ ಕಾಣುವುದಿಲ್ಲವೇ? ಅವರ ಕಾಳಜಿ ಜನಸಮೂಹಗಳ ನರಳಿಕೆಗಳ ಪರಿಸ್ಥಿತಿಗಳೇ ಹೊರತು ಧರ್ಮ ಅಥವಾ ದೇವರ ಯಾವುದೇ ವಿಚಾರಕ್ಕೆ ವಿರೋಧವಲ್ಲ. ದೇವರು ಮತ್ತು ಧರ್ಮಕ್ಕೆ ವಿರುದ್ಧವಾಗಿರುವ ವಿಚಾರವಾದಿಗಳಂತಲ್ಲ ಕಮ್ಯುನಿಸ್ಟರು. ಅವರು ಇದನ್ನು ಮುಖ್ಯ ವಿಷಯ ಎಂದು ಬಗೆಯುವುದಿಲ್ಲ. ಜನಗಳ-ದೇವರನ್ನು ನಂಬಿರುವವರ ಹಿತಾಸಕ್ತಿಗಳನ್ನು ಈಡೇರಿಸುವಲ್ಲಿ ಅವರನ್ನು ದೈವ-ವಿರೋಧಿಗಳು ಎಂದು ಕಾಣಬಾರದು. ಜನಗಳ ಹಿತಾಸಕ್ತಿಗಳನ್ನು ಈಡೇರಿಸಬೇಕಾದರೆ ಅವರು ದೇವರನ್ನು ನಂಬುವವರನ್ನು ಒಂದುಗೂಡಿಸಿ ದೇವರನ್ನು ನಂಬುವವರನ್ನು ಶೋಷಿಸುವ ಪರಿಸ್ಥಿತಿಗಳನ್ನು ಬದಲಿಸುವ ಹೋರಾಟ ನಡೆಸಬೇಕು.

ಇತರ ಧರ್ಮಾನುಯಾಯಿಗಳ ರಕ್ತ ಹರಿಸಲು ಮುಂದಾಗುವುದು ಆಧ್ಯಾತ್ಮಿಕತೆಯಲ್ಲ. ಅದು ಧರ್ಮದ ರಾಜಕೀಯ; ಇದು ಧರ್ಮದ ಹೆಸರಿನಲ್ಲಿ ರಕ್ತಪಾತ ನಿರ್ಮಿಸುತ್ತದೆ.

ಧಾರ್ಮಿಕ ಸಮಾಜವಾದ

ತಮ್ಮ ಧರ್ಮ, ಮೂಲತಃ ಶೋಷಣೆಗೆ ವಿರುದ್ಧವಾಗಿತ್ತು, ಸಮಾಜವಾದ/ಕಮ್ಯುನಿಸಂ ಪರವಾಗಿತ್ತು ಎಂದು ಎಲ್ಲಾ ಧರ್ಮಗಳೂ ಹೇಳಿಕೊಳ್ಳುತ್ತವೆ. ಸುಮಾರಾಗಿ ಪ್ರತಿಯೊಂದು ಧರ್ಮವೂ ಜಾಗತಿಕ ಸೋದರತ್ವದ ಮಾತಾಡುತ್ತದೆ. ವೈದಿಕ ಧರ್ಮದಲ್ಲಿ ಸಮಾನತೆಯ ಪರಿಕಲ್ಪನೆಯೊಂದಿಗೆ ಹುಟ್ಟಿನ ಆಧಾರದಲ್ಲಿಯೇ ಜನಗಳನ್ನು ಒಡೆಯುವ ವರ್ಣ-ಜಾತಿ ಪರಿಕಲ್ಪನೆಗಳೂ ಇವೆ. ಯೇಸು ಕ್ರಿಸ್ತ ಒಬ್ಬ ಕ್ರಾಂತಿಕಾರಿ ಎಂದು ಹೇಳುತ್ತಾರೆ. ಅದು ನಿಜ. ಶಾಂತಿಯ ಧರ್ಮವೆನಿಸಿದ ಇಸ್ಲಾಮ್‌ನಲ್ಲಿ ಬಡವರಿಗೆ ಭಿಕ್ಷೆ ನೀಡುವ ವ್ಯಾಪಕ ವ್ಯವಸ್ಥೆಗಳಿವೆ. ಕಾಯಕವೇ ಕೈಲಾಸ ಎನ್ನುತ್ತದೆ ಲಿಂಗಾಯತ ಧರ್ಮ. ಎಲ್ಲಾ ಧರ್ಮಗಳು ಕೆಲಸವೇ ಪೂಜೆ ಎಂಬುದನ್ನು ಸ್ವೀಕರಿಸಿವೆ. ಫಲಾಪೇಕ್ಷೆಯಿಲ್ಲದೆ ನಿನ್ನ ಕರ್ಮ ಮಾಡು ಎಂದು ಗೀತೆ ಪ್ರತಿಪಾದಿಸಿದೆ.

ಎಲ್ಲಾ ಧರ್ಮಗಳೂ ಅವುಗಳ ಹಿಂದಿನ





ಆಧ್ಯಾತ್ಮಿಕ ತುಡಿತವೇ ಬೇರೆ, ಕೋಮುವಾದಿ ರಾಜಕೀಯವೇ ಬೇರೆ

ವ್ಯವಸ್ಥೆಯಿಂದ ಹೊಮ್ಮಿದ್ದು, ಅದರ ವಿರುದ್ಧ ಬಂಡೆದ್ದುದರಿಂದ ಕ್ರಾಂತಿಕಾರಿ ಆಗಿರಲೇ ಬೇಕಿತ್ತು. ಅವು ತಮ್ಮ ಅನುಯಾಯಿಗಳ ಆಕಾಂಕ್ಷೆಗಳಿಗೆ ಸ್ಪಂದಿಸಲೇಬೇಕಿತ್ತು. ಆದಿಕಾಲದ ಪರಿಸ್ಥಿತಿಗಳಲ್ಲಿ ಎಲ್ಲಾ ಕಡೆ ಜಾಗತಿಕ ಸೋದರತ್ವ ಆಚರಣೆಯಲ್ಲಿತ್ತು. ಆದ್ದರಿಂದ ಅವುಗಳಲ್ಲಿ ಎಲ್ಲರಿಗೂ ಆದರ್ಶಪ್ರಾಯವೆನಿಸುವ ಕೆಲವು ಪರಿಕಲ್ಪನೆಗಳು ಇರುತ್ತವೆ. ನೈತಿಕತೆ, ಶಿಕ್ಷೆಯ ಭಯ ಮುಂತಾದವುಗಳೂ ಆದರ್ಶಗಳೇ.

ಆದರೆ ಸಮಾಜ ಬೆಳವಣಿಗೆ ಹೊಂದಿದಂತೆ ಧರ್ಮಗಳು ಒಂದು ನಿರ್ದಿಷ್ಟ ಸಮಾಜಕ್ಕೆ ಹೊಂದಾಣಿಕೆಯಾಗುವಂತೆ ತಮ್ಮ ಆಚರಣೆಗಳನ್ನೂ ಬದಲಿಸಿಕೊಂಡವು. ಹೀಗೆ ಧರ್ಮಗಳ, ಅವುಗಳ ವಿವಿಧ ಪಂಥಗಳ ಸ್ವರೂಪಗಳೂ ಬದಲಾಗುವಂತವು ಎಂಬುದನ್ನು ಕಾಣಬಹುದು. ಏಳು ದಶಕಗಳ ಹಿಂದೆ ಸ್ಪೇನಿನಲ್ಲಿ ಫ್ಯಾಸಿಸಂ ವಿರುದ್ಧ ಯುದ್ಧದಲ್ಲಿ ಪ್ರಾಣ ಕಳಕೊಂಡ ಯುವ ಮಾರ್ಕ್ಸ್‌ವಾದಿ, ಕ್ರಿಸ್ಟೊಫರ್ ಕಾಲ್ಡ್‌ವೆಲ್ ಧರ್ಮದ ಒಂದು ಉತ್ತಮ ವಿಶ್ಲೇಷಣೆಯನ್ನು ಕೊಟ್ಟು ಕತ್ತಲಿನಲ್ಲಿ ಬೆಳಕು ತೋರಿದ್ದಾನೆ. ಭ್ರಮೆ ಮತ್ತು ವಾಸ್ತವ, ಒಂದು ಸಾಯುತ್ತಿರುವ ಸಂಸ್ಕೃತಿಯಲ್ಲಿನ ಅಧ್ಯಯನಗಳು ಹಾಗೂ ಒಂದು ಸಾಯುತ್ತಿರುವ ಸಂಸ್ಕೃತಿಯಲ್ಲಿನ ಮತ್ತಷ್ಟು ಅಧ್ಯಯನಗಳು ಎಂಬುದು ಆತನ ಪ್ರಖ್ಯಾತ ಕೃತಿಗಳು. ಇವು ನಮಗೆ ಇಲ್ಲಿರುವ ಭ್ರಮೆ ಮತ್ತು ವಾಸ್ತವಗಳನ್ನು ಉತ್ತಮರೀತಿಯಲ್ಲಿ ಅರ್ಥಮಾಡಿಸುತ್ತವೆ. "ಧರ್ಮ ಅದನ್ನು ಸೃಷ್ಟಿಸುವ ಪರಿಸ್ಥಿತಿಗಳ ಸುಗಂಧ" ಎಂಬ ಆತನ ಮಾತುಗಳು ಎಷ್ಟು ಚಲನಶೀಲವಾಗಿವೆ! ಯಾವುದೇ ಒಂದು ಧರ್ಮದ "ಸುಗಂಧ", ಆಗಿನ ಪರಿಸ್ಥಿತಿಗಳ ಸುಗಂಧವೇ ಎಂಬುದನ್ನು ಆತ ಬಿಚ್ಚಿಟ್ಟಿದ್ದಾನೆ. ಮಾಟಮಂತ್ರಗಳಿಂದ ಹಿಡಿದು ಆಧುನಿಕ ಧರ್ಮಗಳ ವರೆಗಿನ ಬೆಳವಣಿಗೆಗಳನ್ನು ಗುರುತಿಸುತ್ತಾ ಆತ ಸಾಮಾಜಿಕ ಬೆಳವಣಿಗೆ ನಮ್ಮನ್ನು ಗುತ್ತೇದಾರಿಗಳ ಹಂತಕ್ಕೆ ಒಯ್ದಾಗ ಗುತ್ತೇದಾರಿ ಧರ್ಮಗಳು ಮೂಡಿ ಬರುತ್ತವೆ ಎಂಬ ನಿಯಮವನ್ನು ಹಾಕಿ ಕೊಡುತ್ತಾನೆ. ಭಾರತದಲ್ಲಿನ ಇಂದಿನ ಪರಿಸ್ಥಿತಿಗಳನ್ನು ಕಾಲ್ಡ್‌ವೆಲ್ ಮಾದರಿಯಲ್ಲಿ ಅರ್ಥ ಮಾಡಿಕೊಳ್ಳಬಹುದಾದರೆ, ವಿಶ್ವ ಗುತ್ತೇದಾರಿಗಳ ಪರಿಸ್ಥಿತಿಗಳಲ್ಲಿ ಭಾರತೀಯ ಗುತ್ತೇದಾರಿಗಳು ತಮ್ಮದೇ "ಸುಗಂಧ"ದ ಆವೃತ್ತಿಗಳನ್ನು ಗುಜರಾತ್ ಮಾದರಿಯಲ್ಲಿ ಪ್ರಯತ್ನಿಸುತ್ತಾರೆ ಇತ್ಯಾದಿಯಾಗಿ ಹೇಳಬಹುದು.

ಈಗಿನ "ಸುಗಂಧ"

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ ಪ್ರಕ್ರಿಯೆಗಳು ನಡೆಯುವ ಸಾಮಾಜಿಕ ಬೆಳವಣಿಗೆಯ ನಿರ್ದಿಷ್ಟ ಪರಿಸ್ಥಿತಿಗಳು, ರಾಜಕೀಯವಾಗಿ ಕ್ರಿಯೆಗಿಳಿಯುವ ಕೆಲವೇ ಗುತ್ತೇದಾರಿ ಗುಂಪುಗಳ ಗುತ್ತೇದಾರಿ ಆಚರಣೆಗಳನ್ನು ಸೃಷ್ಟಿಸುವ ಪರಿಸ್ಥಿತಿಗಳು. ಇಂತಹ ಪರಿಸ್ಥಿತಿಗಳೇ ಗುಜರಾತ್ ಮಾದರಿಯ ಅಥವಾ ಚರ್ಚುಗಳ ಮೇಲೆ ದಾಳಿಗಳ, ಜನಸಮೂಹಗಳಿಗೆ ಮಾಂಸದ ನಿರಾಕರಣೆಯ "ಸುಗಂಧ"ವನ್ನು ಸೃಷ್ಟಿಸುತ್ತವೆ. ಇದು ಬಹಿರಂಗವಾಗಿಯೇ ಕೋಮುವಾದವಾಗಿ, ಭಯೋತ್ಪಾದನೆಯಾಗಿ ಅಭಿವ್ಯಕ್ತಗೊಳ್ಳುತ್ತದೆ. ಮತ್ತು ಇವೇ ಪರಿಸ್ಥಿತಿಗಳು ನಾವೆಲ್ಲಾ ಒಂದುಗೂಡಿ ಕೋಮುವಾದ-ವಿರೋಧಿ, ಭಯೋತ್ಪಾದನಾ-ವಿರೋಧಿ ಕಾರ್ಯಾಚರಣೆಯ ಕಾರ್ಯಕ್ರಮದ "ಸುಗಂಧ"ವನ್ನು ಸೃಷ್ಟಿಸುವ ಅಗತ್ಯವನ್ನೂ ಕೂಡ ನಿರ್ಮಿಸುತ್ತವೆ.

'ಸೌಹಾರ್ದ ಕರ್ನಾಟಕ' ಪ್ರಸಕ್ತ ಪರಿಸ್ಥಿತಿಗಳ ಸುಗಂಧ. ಇದು ನಮ್ಮ ಸಂವಿಧಾನದ ನಾಲ್ಕು ಸ್ತಂಭಗಳಾದ ಸಾರ್ವಭೌಮತೆ, ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಮಾಜವಾದ ಇವುಗಳನ್ನು ರಕ್ಷಿಸಲು ಸಮರ್ಪಿತವಾಗಿದೆ. ಈ ನಾಲ್ಕು ಪರಿಕಲ್ಪನೆಗಳನ್ನು ಆಚರಣೆಗೆ ತರದೆ ಕೋಮುವಾದ ಮತ್ತು ಭಯೋತ್ಪಾದನೆಯನ್ನು ಹುಟ್ಟು ಹಾಕುವ ಪರಿಸ್ಥಿತಿಯನ್ನು, ಬಡತನವನ್ನು ನಿರ್ಮೂಲ ಮಾಡಲು ಸಾಧ್ಯವಿಲ್ಲ. ದರಿದ್ರ ಪರಿಸ್ಥಿತಿಗಳನ್ನು ಬದಲಿಸುವ ಈ ಹೋರಾಟದಲ್ಲಿ ನಮ್ಮ ಜತೆಗೂಡುವವರೆಲ್ಲಾ ನಮ್ಮ ಜಗತ್ತಿನಲ್ಲಿ ಹೊಸದೊಂದು ಸುಗಂಧವನ್ನು ಸೃಷ್ಟಿಸಲು ಪ್ರಯತ್ನಿಸುವವರು. ನಾವು ನಮ್ಮ ನಿರ್ದಿಷ್ಟ ಕಣ್ಣೋಟವನ್ನೇ ಆಧರಿಸಿಕೊಳ್ಳದೆ ಎಲ್ಲರೂ ಒಪ್ಪುವ ಅಂಶಗಳನ್ನು ಗುರುತಿಸುತ್ತೇವೆ. ಆದರೂ ಒಂದು ಕಾರ್ಮಿಕ ವರ್ಗದ ಪಕ್ಷಕ್ಕೆ ಇತರರೊಂದಿಗೆ ಅದನ್ನು ಬೆಸೆಯುವ ಸಮಾನ ಅಂಶಗಳನ್ನು ಕಂಡುಕೊಳ್ಳುವುದು ಮಹತ್ವದ್ದಾಗುತ್ತದೆ. ಆದ್ದರಿಂದಲೇ ಧರ್ಮದ ಕುರಿತಾದ ಈ ವಿಶ್ಲೇಷಣೆ.

ಆಯೋಗ ಸೃಷ್ಟಿಸಿದ ಆತಂಕ !

ಪುಟ 3 ರಿಂದ

ಜಿಲ್ಲಾಡಳಿತ ಈಗಿನ ಆದೇಶವನ್ನು ಬದಲಾಯಿಸಲು ಕೇಳಬಹುದು... ಹೀಗೆ ಸಾಗುತ್ತದೆ ಒಟ್ಟು 19 ಅಂಶಗಳ ವಿಧಿ.

ಇಲ್ಲಿ ನಮ್ಮ ಪ್ರಶ್ನೆ: ಈ ದೇಶದಲ್ಲಿ ಯಾರಾದರೂ ದೇವರನ್ನೂ ಪೂಜಿಸಲು, ಭಜಿಸಲು ಯಾವುದಾದರು ಅನುಮತಿಯನ್ನು ಪಡೆದಿರುತ್ತಾರಾ? ಹಾಗಾದರೆ ಈ ಕ್ರೈಸ್ತರಿಗೇ ಮಾತ್ರ ಯಾಕೆ? ಯಾರಾದರೂ ಪ್ರಾರ್ಥನೆ ಮಾಡುವವರು ವಿವರಗಳ ಅಫಿಡೆವಿಟ್ ನೀಡುವರಾ? ಸರ್ಕಾರಿ ಯಂತ್ರ ಯಾವಾಗಬೇಕಾದರೂ ದೇವಸ್ಥಾನ ಇತರೆಡೆ ಮಧ್ಯಪ್ರವೇಶಿಸಿ ತಪಾಸಣೆ ನಡೆಸುತ್ತಿದೆಯಾ? ಗುಡಿ-ಗುಂಡಾರ ದಿಢೀರನೇ ಉದ್ಭವವಾಗಿ ಹೇಗೆಲ್ಲ ನಿರ್ವಹಿಸುತ್ತವೆ, ಹುಂಡಿ, ಸಾರ್ವಜನಿಕ ಜಾಗಗಳನ್ನು ನುಂಗಿಹಾಕಿ ಹೇಗೆ ಬದುಕಿಕೊಳ್ಳುತ್ತವೆ? ಇವೆಲ್ಲ ಇಲ್ಲ ಎಂದರೆ ಕ್ರಿಶ್ಚಿಯನ್ನರಿಗೆ ವಿಶೇಷ ಯಾಕೆ ಈ ವಿಧಿಗಳು? ಬಹುಶಃ ದೇಶದ ಎಲ್ಲೂ ಕಂಡು ಬರದ ನಿರ್ದೇಶನಗಳು ಇಲ್ಲಿವೆ. ಇಂತಹ ಆದೇಶ ಹೊರಡಿಸುವಾಗಲೇ ಅವರ ಮನಸ್ಸಿನಲ್ಲಿ ಏನಿತ್ತು ಎಂಬುದೂ ತಿಳಿಯುತ್ತದೆ. ಕ್ರಿಶ್ಚಿಯನ್ನರು, ಮುಸ್ಲಿಮರು ಏನಿದ್ದರೂ ಎರಡನೇ ದರ್ಜೆ ನಾಗರಿಕರು. ಹಿಂದೂಗಳಿಗೆ ಸಿಗುವ ಯಾವ ಸ್ಥಾನವೂ ಅವರಿಗೆ ಕೂಡದು ಎಂದು ಆರ್.ಎಸ್.ಎಸ್. ವಾದಿಸುತ್ತದೆ. (ಹಿಂದುಗಳೆನ್ನುವ ದಲಿತರು, ಶೂದ್ರರ ಸ್ಥಿತಿ ಏನಾಗಿದೆ ಎಂಬುದು ಬೇರೆ ಮಾತು)ಈ ಆದೇಶಗಳು ಅವರ ವಾದಗಳನ್ನೇ ಸಮರ್ಥಿಸುತ್ತದೆಯೇ?

ಭಾರತದ ಪ್ರಜೆಗಳು-ಸಮಾನ ಹಕ್ಕು

ಮೇಲಾಗಿ ನಮ್ಮ ಸಂವಿಧಾನದ 25ರಿಂದ 30ರ ವರೆಗಿನ ಕಲಂಗೂ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಎತ್ತಿಹಿಡಿದಿದೆ. ಮನಸಾಕ್ಷಿಯ ಸ್ವಾತಂತ್ರ್ಯದ ಹಕ್ಕು, ಯಾವುದೇ ಧರ್ಮವನ್ನೂ ಪ್ರತಿಪಾದಿಸುವ, ಅನುಸರಿಸುವ, ಪೂಜಿಸುವ ಹಕ್ಕು ಧಾರ್ಮಿಕ ವ್ಯವಹಾರವನ್ನೂ ನಿರ್ವಹಿಸುವ ಹಕ್ಕು, ಅಲ್ಪಸಂಖ್ಯಾತರ ಹಿತ ರಕ್ಷಿಸುವ ಹಕ್ಕು ಇನ್ನೂ ಇತ್ಯಾದಿ ಮೂಲಭೂತ ಹಕ್ಕುಗಳನ್ನು ಪ್ರತಿಯೊಬ್ಬ ಭಾರತದ ಪ್ರಜೆಗೂ ನೀಡಿದೆ. ಹೀಗಿರುವಾಗ ಪ್ರಾರ್ಥನೆ ಮಾಡಲು ಪರವಾನಿಗೆ ಪಡೆಯಬೇಕೆಂಬುದು ಯಾವ ಹಕ್ಕನ್ನು, ನ್ಯಾಯವನ್ನು ಪ್ರತಿಪಾದಿಸುತ್ತದೆ? ಎಂದು ಪ್ರಶ್ನಿಸಬೇಕಾಗಿದೆ. ಇಲ್ಲಿ ಸರ್ಕಾರದ ಅಸಹನೆಯನ್ನು, ಆಡಳಿತದ ಮೂಲಕ ಅದನ್ನು ಜಾರಿಗೊಳಿಸುವ ಯತ್ನಗಳನ್ನು ನಾವು ಕಾಣಬಹುದು. ಇದನ್ನು ಪ್ರತಿಭಟಿಸಬೇಕಾಗಿದೆ. ಆದ್ದರಿಂದ ನ್ಯಾ. ಸೋಮಶೇಖರ್ ಆಯೋಗ ಕೂಡಲೇ ಇಂತಹ ಆದೇಶ ಹಿಂತೆಗೆಯಬೇಕು. ಪ್ರಾರ್ಥನೆಗೆ ಮುಕ್ತ ಅವಕಾಶ ಕಲ್ಪಿಸಬೇಕು.

ಬಾಲಂಗೋಚಿ : ಕ್ಲೂ ಇದ್ದರೂ ಒಂದು ಪ್ರಶ್ನೆ : ಕ್ರಿಶ್ಚಿಯನ್ನರು ಹಾಗೂ ಚರ್ಚ್‌ಗಳ ಮೇಲಿನ ಧಾಳಿಗಳನ್ನು ನ್ಯಾ.ಸೋಮಶೇಖರ ಆಯೋಗ ವಿಚಾರಿಸುತ್ತಿದೆ. ವರದಿಯ ಶೋಧನೆಗಳು ಏನಿರುತ್ತವೆ.? ಸರ್ಕಾರ ಏನು ಮಾಡುತ್ತದೆ? ವಿಚಾರಣೆ ಪೂರ್ಣವಾಗುವ ಮೊದಲೇ ತೀರ್ಪು ಬರೆಯಲಾಗಿದೆಯೆಂಬುದು ಶುದ್ಧ ಅವಿವೇಕಿಗಳು ಸೃಷ್ಟಿಸುವ ಸುದ್ದಿ!

ಸುಂದರ ಗಿರಿಯಿಂದ ಜಾಥಾ......

ಪುಟ 5 ರಿಂದ

ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಆಶಯಗಳಿಗೆ ಧಕ್ಕೆ ಬಂದಿದೆ. ಇಲ್ಲಿರುವ ಎಂ.ಎಲ್.ಎ ನಿಯಮಗಳನ್ನು ಉಲ್ಲಂಘಿಸಬಾರದು ಎಂದರು. ದರ್ಗಾದಲ್ಲಿ ಹಸಿರುಬಟ್ಟೆಯನ್ನು ಧರಿಸುವಂತೆ ಅವಕಾಶ ನೀಡಬೇಕು. ಹೂಪುಷ್ಪವನ್ನು ಧರಿಸಲು ದರ್ಗಾದ ಸಂತರಿಗೆ ಅವಕಾಶ ಕೊಡಬೆಕು. 1975 ರ ಸುಪ್ರಿಂ ಕೋರ್ಟಿನ ತೀರ್ಪು ಇದಾಗಿದ್ದು ಇದನ್ನು ಪಾಲಿಸಬೇಕೆಂದು ಸಿಪಿಐ(ಎಂ) ಸರ್ಕಾರಕ್ಕೆ ಎಚ್ಚರಿಸುತ್ತದೆ ಎಂದರು. ದರ್ಗಾದ ಗೋಪುರ ಕುಸಿದಿರುವುದನ್ನು ತಕ್ಷಣವೇ ಅಭಿವೃದ್ಧಿಪಡಿಸುವುದು ಬಿಟ್ಟು ಅದಕ್ಕೆ ಬಾಗಿಲು ಮುಚ್ಚಿ ಮಸಣದಂತೆ ಕಾಣುವಂತೆ ಮಾಡಿರುವ ಸರ್ಕಾರಕ್ಕೆ ಜನರ ಭಾವನೆಗಳ ಬಗ್ಗೆ ಮಾತಾಡಲು ಬಿಜೆಪಿಗೆ ಯಾವ ಯೋಗ್ಯತೆಯೂ ಇಲ್ಲ ಎಂದರು.

ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಹಾಸನ ಚಿಕ್ಕಮಗಳೂರು ಸಿಪಿಐ (ಎಂ) ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ವಿ.ಸುಕುಮಾರ್‌ರವರು ಕರ್ನಾಟಕದಾದ್ಯಂತ ಸಂಚರಿಸುವ ಈ ಜಾಥಾವನ್ನು ಬಾಬಾ ಬುಡನ್‌ಗಿರಿಯಿಂದಲೇ ಉದ್ಘಾಟಿಸಿದ್ದೇವೆ. ಡಿಸೆಂಬರ್ 23ಕ್ಕೆ ಬೆಂಗಳೂರಿನಲ್ಲಿ ಅಂತಿಮಗೊಳ್ಳಲಿದ್ದು ಈ ನಡುವೆ ರಾಜ್ಯದ ಎಲ್ಲಾ ಕಡೆ ಜನತೆಯ ಮುಂದೆ ಸೌಹಾರ್ದತೆಯನ್ನು ಬಿತ್ತುವುದೇ ಈ ಜಾಥಾದ ಮುಖ್ಯ ಉದ್ದೇಶವಾಗಿದೆ ಎಂದರು.

ರವಿ ಸಾಣೇನಹಳ್ಳಿ





ಪುಸ್ತಕ ಬಿಡುಗಡೆ: ಜಾಥಾ ಸಂದರ್ಭಕ್ಕೆ ಹೊರತರಲಾದ ಐದು ಕಿರುಪುಸ್ತಕಗಳ ಬಿಡುಗಡೆ - ಶ್ರೀ ಜಯಮೃತ್ಯುಂಜಯ ಸ್ವಾಮಿಗಳಗಳಿಂದ.

ಕೂಡಲಸಂಗಮದಿಂದ....

ಪುಟ 5 ರಿಂದ



ಬೆಳಗಾಂನ ಅಥಣಿಯಲ್ಲಿ ಪ್ರಸನ್ನ, ಮಹಂತೇಶ್ ಮತ್ತಿತರರು

ಎಸ್.ವೈ.ಗುರುಶಾಂತ್, ಭೀಮಸಿ ಕಲಾದಗಿ, ಕೆ.ಮಹಾಂತೇಶ, ಎಂ.ಬಿ.ನಾಡಗೌಡ, ಅಣ್ಣಾರಾಯ ಈಳಿಗೇರ ಜಾಥಾದ ನೇತೃತ್ವ ವಹಿಸಿ ಮಾತನಾಡಿದರು.

ಎಂ.ಎಸ್.ಹಡಪದ ನೇತೃತ್ವದ ಕಲಾತಂಡ ಸೌಹಾರ್ದತೆ ಸಾರುವ ಗೀತೆಗಳನ್ನು ಇಡೀ ಜಾಥಾದುದ್ದಕ್ಕೂ ಹೇಳುತ್ತಾ ಸಾಗಿರುವುದು ವಿಶೇಷವಾಗಿದೆ.

ಕೂಡಲಸಂಗಮದಿಂದ ಹೊರಟ ಜಾಥಾಕ್ಕೆ ಬಾಗಲಕೋಟೆಯಲ್ಲಿ ಗ್ರಾಮ ಪಂಚಾಯತಿ ನೌಕರರು, ಸಾರ್ವಜನಿಕರಿಂದ ಆತ್ಮೀಯ ಸ್ವಾಗತ ಸಿಕ್ಕಿತ್ತು. ಮುಂದೆ ಬಸವನಬಾಗೇವಾಡಿ, ಸಿಂದಗಿ, ಇಂಡಿ, ಆಲಮೇಲ, ಬಿಜಾಪುರದಲ್ಲಿ ಬೃಹತ್ ಯಶಸ್ವಿ ಸಾರ್ವಜನಿಕ ಸಭೆ ನಡೆಯಿತು. ಮರಾಠಿ ಪ್ರದೇಶಗಳಾದ ಬೆಳಗಾವಿ, ಅಥಣಿ, ಚಿಕ್ಕೋಡಿ, ನಿಪ್ಪಾಣಿಗಳಲ್ಲೂ ಯಶಸ್ವಿ ಸಭೆಗಳು ನಡೆದವು.

ಮುಂದೆ ಗೋಕಾಕ, ರಾಮದುರ್ಗ, ಸವದತ್ತಿಗಳಲ್ಲಿ ಯಶಸ್ವಿ ಸಭೆಗಳಾಗಿವೆ.

ಧಾರವಾಡ, ಹುಬ್ಬಳ್ಳಿ, ನವಲಗುಂದಗಳಲ್ಲೂ ಸಾರ್ವಜನಿಕ ಸಭೆಗಳು ನಡೆದವು.

ಗದಗ್ ಜಿಲ್ಲೆಯ ಬೆಳವಣಿಕೆ, ರೋಣ, ಗಜೇಂದ್ರಗಡ, ಗದಗ್, ಲಕ್ಷ್ಮೇಶ್ವರಗಳಲ್ಲಿ ಉತ್ಸಾಹದಾಯಕ ಸಭೆಗಳು ನಡೆದವು.

ದಿನಾಂಕ 21 ರಂದು ಹಾವೇರಿ ತಲುಪಿದ ಜಾಥಾದ ಸಮಾರೋಪ ಸಮಾರಂಭ ಯಶಸ್ವಿಯಾಗಿ ನಡೆದಿದೆ. ಈ ಸಮಾರೋಪದಲ್ಲಿ ರಾಜ್ಯ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಭಾಗವಹಿಸಿ ಮಾತನಾಡಿದ್ದಾರೆ.

ಬಿಜಾಪುರ -ಬಾಗಲಕೋಟೆ ಜಿಲ್ಲೆಗಳಲ್ಲಿ ಭೀಮಸಿ ಕಲಾದಗಿ, ಅಣ್ಣಾರಾಯ ಈಳಿಗೇರ, ಸುರೇಖಾ ರಜಪೂತ, ಬೆಳಗಾವಿ ಜಿಲ್ಲೆಯಲ್ಲಿ : ಗೈಬು ಜಾನೇಖಾನ್, ಕರಾಡೆ, ದೀಪಕ್ ಕಾಮತ್

ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಬಿ.ಎಸ್.ಸೊಪ್ಪಿನ, ಬಿ.ಐ.ಈಳಿಗೇರ, ರವೀಂದ್ರ, ಹೊನವಾಡ, ಮಹೇಶ್ ಪತ್ತಾರ, ನಾರಾಯಣ ಕಾಳೆ, ಬಸವರಾಜ ಮಂತೂರ, ವಿಠ್ಠಲ ನಾಯಕ, ಎಸ್.ಕೆ.ಮರದ, ಎಂ.ಕೆ.ಅಂಗಡಿ, ಆರ್.ಹೆಚ್.ಆಯಿ ನೇತೃತ್ವ ವಹಿಸಿದ್ದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನಕುಮಾರ್.ಎಸ್, ಎಸ್.ವೈ.ಗುರುಶಾಂತ್, ಜಿ.ಸಿ.ಬಯ್ಯಾರೆಡ್ಡಿ ಇವರಲ್ಲದೆ ಕೆ.ಮಹಾಂತೇಶ್, ಎಂ.ಬಿ.ನಾಡಗೌಡ ಒಟ್ಟು ಜಾಥಾದ ನೇತೃತ್ವ ವಹಿಸಿದ್ದರು.

ಎಂ.ಎಸ್.ಹಡಪದ - ಸಂಚಾಲಕರಾಗಿರುವ ಕಲಾತಂಡದಲ್ಲಿ ಬಿ.ಐ.ಈಳಿಗೇರ, ವಿಲಾಸ ಶೇರ್‌ಖಾನ್, ದುರ್ಗಾದಾಸ್, ಲೀಲಾ, ರೇಣುಕಾ, ಶೇಖರ ಮಾಳೋತ್ತರ, ಕುಬಾರ ಅಜ್ಮೇರ್, ಎಂ.ಎಸ್.ತಾಳಿಕೋಟೆ,. ಬಸವರಾಜ್ ಪೂಜಾರ ಮುಂತಾದವರಿದ್ದಾರೆ.

ವಿಮೆ, ಬ್ಯಾಂಕ್ ಅಕ್ಷರದಾಸೋಹ, ಗ್ರಾ.ಪಂ, ಅಂಗನವಾಡಿ ನೌಕರರು, ಬೀಡಿ ಕಾರ್ಮಿಕರು, ವಿದ್ಯಾರ್ಥಿ-ಯುವಜನರು ರೈತರು ಜಾಥಾಕ್ಕೆ ಎಲ್ಲಾ ಕಡೆ ಆದರದಿಂದ ಬರ ಮಾಡಿಕೊಂಡರು.

ಜಾಥಾ ಆರಂಭವಾದ ಎರಡು ದಿನಗಳಲ್ಲಿಯೇ ನೂರಾರು ಪುಸ್ತಕಗಳು ಮಾರಾಟವಾಗಿರುವುದು ವಿಶೇಷವಾಗಿದೆ. ಇದೇ ಸಂದರ್ಭದಲ್ಲಿ ನಿಧಿ ಸಂಗ್ರಹ ಕಾರ್ಯ ನಡೆಯುತ್ತಿದ್ದು ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ದಿನಾಂಕ 23ರಂದು ರಾಜ್ಯಮಟ್ಟದ ಸೌಹಾರ್ದ ರ್‍ಯಾಲಿಗೆ ಭಾಗವಹಿಸುವ ಹುಮ್ಮಸ್ಸು ವ್ಯಕ್ತವಾಗಿದೆ.


■ ರವೀಂದ್ರ ಹೊನವಾಡ

ಖ್ಯಾತ ವಿಚಾರವಾದಿ ಪ್ರೊ. ಜಿ.ಕೆ.ಗೋವಿಂದರಾವ್ ಅವರೊಬ್ಬ ನಿಷ್ಠುರ ಜಾತ್ಯಾತೀತವಾದಿ ಎಂಬುದು ಜನಜನಿತ ವಿಚಾರ. ಕೋಮುವಾದಿ ಶಕ್ತಿಗಳ ವಿರುದ್ಧ ತಮ್ಮ ದೃಢವಾದ ನಿಲುವು ಪ್ರತಿಪಾದಿಸುತ್ತಾ ನಮ್ಮ ಸುತ್ತಮುತ್ತಲ ಎಲ್ಲ ಸೌಹಾರ್ದಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವವರು. ಭಯೋತ್ಪಾದನೆ ಮತ್ತು ಕೋಮುವಾದಗಳ ವಿರುದ್ಧ ರಾಜ್ಯವ್ಯಾಪಿ ಸೌಹಾರ್ದ ಜಾಥಾಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಅವರ ಒಂದು ಕಿರು ಸಂದರ್ಶನ ಇಲ್ಲಿದೆ. ಭಯೋತ್ಪಾದನೆ, ಕೋಮುವಾದ ಅಲ್ಲದೆ ಜಾತೀಯತೆ, ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತಾದ ಅವರ ತಮ್ಮ ಕೆಲವು ಅನಿಸಿಕೆಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಸಂದರ್ಶಕರು: **ಎಸ್.ವೈ.ಗುರುಶಾಂತ್, ಆರ್.ರಾಮಕೃಷ್ಣ**

ವೈವಿಧ್ಯತೆಯೇ ಇಲ್ಲಿನ ಏಕತೆ

ಪ್ರೊ. ಜಿ.ಕೆ.ಗೋವಿಂದರಾವ್



ಜನಶಕ್ತಿ: ಪ್ರಸಕ್ತ ಭಯೋತ್ಪಾದನೆ ಕುರಿತು ನಿಮ್ಮ ಅಭಿಪ್ರಾಯ ತಿಳಿಸಿ...

ಭಯೋತ್ಪಾದನೆ ಬಿನ್‌ಲಾಡೆನ್‌ಗೆ ಮಾತ್ರ ಸೀಮಿತವಾಗಿಲ್ಲ. America is a greatest terrorist country. (ಅಮೇರಿಕ ಅತಿ ದೊಡ್ಡ ಭಯೋತ್ಪಾದಕ ರಾಷ್ಟ್ರ ಅಮೇರಿಕದ ಬಗ್ಗೆ ಯಾಕೆ ಸಿಟ್ಟು ಬರುತ್ತದೆ. ಯಾಕೆಂದರೆ ಅದೊಂದು Democracy (ಪ್ರಜಾಪ್ರಭುತ್ವ).

ಭಾರತ ಕೂಡ ಒಂದು ಪ್ರಜಾಪ್ರಭುತ್ವ. ...... ಆದರೆ ಅಮೇರಿಕ ಜಗತ್ತಿನ ವಿವಿಧ ದೇಶಗಳಲ್ಲಿನ ಪ್ರಜಾಪ್ರಭುತ್ವದ ವಿರುದ್ಧ ಕೆಲಸ ಮಾಡುತ್ತಿದೆ. (ಅಮೇರಿಕದಲ್ಲಿ ನಿನ್ನೆಯ ಗುಲಾಮ ಇಂದಿನ ಅಧ್ಯಕ್ಷನಾಗಿದ್ದಾನೆ. ನೈತಿಕವಾಗಿ ಅದನ್ನು ಬೆಂಬಲಿಸಬೇಕು.)

ಭಯೋತ್ಪಾದನೆಗೆ ಬೇಕಾದಷ್ಟು ಆಯಾಮಗಳಿವೆ. ಒಂದು ದೃಷ್ಟಿಯಿಂದ ನೋಡಿದರೆ ಪ್ರತಿಯೊಂದು ಮನೆಯೂ ಭಯೋತ್ಪಾದನಾ ಕೇಂದ್ರ. ನಾವು ಮಕ್ಕಳು ಹೆಂಡತಿಯೊಂದಿಗೆ ಮಾತನಾಡುತ್ತೀವಲ್ಲ ಏನು?..... ಅಸಹನೆ..... ಅವರ ವ್ಯಕ್ತಿತ್ವವನ್ನು ನಾಶ ಮಾಡುತ್ತಿದ್ದೇವೆ.

ಸಾಮಾನ್ಯ ಜನರಲ್ಲಿ ಬಹಳಷ್ಟು ಜನಕ್ಕೆ 'ಹಿಂದೂ ರಾಷ್ಟ್ರ' ಬೇಕಾಗಿದೆ. ಹೆಂಡತಿ ಹತ್ತಿರ, ಜಾತಿ ಬಾಂಧವರ ಹತ್ತಿರ ಮಾತಾಡುತ್ತಾರೆ.... ಬಹಿರಂಗವಾಗಿ ಮಾತನಾಡುವುದಿಲ್ಲ... ನೆರೆಯವರ ಬಗೆಗೆ ಅಸಹನೆ ಹರಡುವುದು... ಭಯೋತ್ಪಾದನೆಯ ಮೂಲ ಅಲ್ಲಿದೆ.

ಇಸ್ಲಾಮ್, ಹಿಂದೂ, ನಕ್ಸಲ್ ಭಯೋತ್ಪಾದನೆ ಇವೆಲ್ಲಾ ಭಯೋತ್ಪಾದನೆಯ ಪ್ರಕಟಿತ ರೂಪಗಳು. ನಕ್ಸಲರು.... ನಾವು ಹಿಂಸಾವಾದಿಗಳಲ್ಲ.... ಕೋಮುವಾದಿಗಳಲ್ಲ.... ಆದರೆ ಹಿಂಸೆ ಅನಿವಾರ್ಯವಾಗಿಬಿಟ್ಟಿದೆ.... ಅನ್ನುತ್ತಾರೆ ಮತ್ತು ಅವರು ನೀವು ಪ್ರಭುತ್ವ ಭಯೋತ್ಪಾದನೆ ಬಗೆಗೆ ಮಾತನಾಡುವುದಿಲ್ಲ ಎನ್ನುತ್ತಾರೆ.


ಇಡೀ ಜಗತ್ತಿನ ಇತಿಹಾಸದಲ್ಲಿ ವ್ಯವಸ್ಥೆ ಕ್ರೂರವಾಗಿಲ್ಲದಿರುವ ಒಂದಾದರೂ ಉದಾಹರಣೆ ತೋರಿಸಿ.... ನಾನು ಪ್ರಭುತ್ವ ಭಯೋತ್ಪಾದನೆಯನ್ನು ಸಮರ್ಥಿಸುವುದಿಲ್ಲ... ಇದು ಹೇಗಿದೆ ಎಂದರೆ ಕಾಶ್ಮೀರದಲ್ಲಿ ಹಿಂದೂಗಳಿಗೆ ಆಗಿರುವ ತೊಂದರೆ ಬಗೆಗೆ ನೀವು ಮಾತೇ ಆಡುವುದಿಲ್ಲ ಎಂದು ಕೋಮುವಾದಿಗಳು ಎನ್ನುತ್ತಾರಲ್ಲ ಹಾಗೆ ಇವರ ವಾದ...

ನೀವು ವ್ಯವಸ್ಥೆಯನ್ನು ಸಂಪೂರ್ಣವಾಗಿ ಒಪ್ಪುತ್ತೀರಾ?... ಅಥವಾ ವ್ಯವಸ್ಥೆಯನ್ನು ಪೂರ್ಣವಾಗಿ ವಿರೋಧಿಸುತ್ತೀರಾ....?

ಧರಣ, ಮೆರವಣಿಗೆ ಮಾಡಿ ಮನವಿ ಕೊಡುತ್ತೀರಿ. ಪ್ರಜಾಪ್ರಭುತ್ವದ ಅವಕಾಶವನ್ನು ಬಳಸಿಕೊಳ್ಳುತ್ತೀರಿ....!?

ಜನಶಕ್ತಿ: ಮುಂಬೈ ಭಯೋತ್ಪಾದಕ ಧಾಳಿಯ ಹಿಂದಿನ ಉದ್ದೇಶವೇನಿರಬಹುದು?

ದೇಶವನ್ನು ಅಸ್ಥಿರಗೊಳಿಸುವುದು ಇಸ್ಲಾಮಿಕ್ ಭಯೋತ್ಪಾದಕರ ಉದ್ದೇಶ.



ಗುಜರಾತ್‌ನಲ್ಲಿ 2 ಸಾವಿರ ಜನರನ್ನು ಕೊಲ್ಲಲಿಲ್ಲವಾ? ಬಾಬರಿ ಮಸೀದಿ ನಾಶ ಮಾಡಲಿಲ್ಲವಾ? ಎಂದು ಅವರು ಕೇಳುತ್ತಾರೆ? ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ. ಬರೀ ಪಾಕಿಸ್ತಾನ ಮಾತ್ರವಲ್ಲ ಇಡೀ ಜಗತ್ತನ್ನು ಇಸ್ಲಾಮೀಕರಣ ಮಾಡಬೇಕೆನ್ನುವ ಕೆಲವು ಶಕ್ತಿಗಳೂ ಈ ದಾಳಿಗಳ ಹಿಂದಿರುತ್ತವೆ. ಹಾಗೆಯೇ ಆರ್ಥಿಕ ರಾಜಕೀಯ ಶಕ್ತಿಗಳೂ.

ನಾವೇನು ಮಾಡಬೇಕು ಅನ್ನೋದು ಮುಖ್ಯ.

ನಾವು ಬರೀ ಸೆಮಿನಾರು ಮಾಡಿದರೆ ಸಾಲದು. ಊರು ಊರುಗಳಲ್ಲಿ ಹುಡುಗರ ಹತ್ತಿರ (ಯುವಜನರ ಬಳಿ) ಮಾತನಾಡಬೇಕು.

ಉಪ ಚುನಾವಣೆ ಬಂದಿದೆ..... ಸಿದ್ಧರಾಮಯ್ಯನಿಗೆ ಬಹಿರಂಗ ಪತ್ರ ಬರೆದೆ. ಬಿಜೆಪಿ ಅಂದರೆ ಒಂದು ಸಿದ್ಧಾಂತ, ದೇವೇಗೌಡರು ಒಬ್ಬ ವ್ಯಕ್ತಿ. ದುರದೃಷ್ಟವಶಾತ್ ಆ ಸಿದ್ಧಾಂತ ಶಾಶ್ವತ ಆಗಬಹುದಾದ ಅಪಾಯ ಇದೆ. ಅಪಾಯಕಾರಿಯಾದದ್ದನ್ನು ಎದುರಿಸಬೇಕು ಅಂತ...

ಜನಶಕ್ತಿ: ಕೋಮುವಾದವು ಇಷ್ಟೊಂದು ದೊಡ್ಡದಾಗಿ ಬೆಳೆಯುತ್ತಿರುವುದಕ್ಕೆ ಕಾರಣ ಏನು?

ಜಾಗತೀಕರಣದಿಂದ ಇಡೀ ಜಗತ್ತಿನಲ್ಲಿ ಆರ್ಥಿಕತೆಗಳು ನಾಶವಾಗುತ್ತಿವೆ... ಒಂದೊಂದು ದೇಶದಲ್ಲಿ ಒಂದೊಂದು ರೀತಿ. ಫಿಲಿಪೈನ್ಸ್... ಇಂಡೋನೇಷಿಯಾ.... ಭಾರತ.... ಒಂದೊಂದು ದೇಶಗಳಲ್ಲಿ ಒಂದೊಂದು ರೀತಿ. 'ನನ್ನ ಶ್ರಮ ನನ್ನ ಕ್ರಿಯಾಶೀಲತೆಯಿಂದ ನನ್ನ ಕಲ್ಪನಾ ಶಕ್ತಿಯಿಂದ ಸೃಷ್ಟಿಗೊಳ್ಳುವುದು ಕಡಿಮೆಯಾಗುತ್ತಿದೆ. ... ನನ್ನ ಅಥವಾ ವ್ಯಕ್ತಿಯ ಹತಾಶೆ, ದಾರಿದ್ರ್ಯತೆ, ಕ್ರಿಯಾಶೀಲತೆ ಸುಮ್ಮನೆ ಕೂರುವುದಿಲ್ಲ... ಕೋಮುವಾದ, ಜಾತಿವಾದ... ಲಿಂಗ ತಾರತಮ್ಯ ಇತ್ಯಾದಿಗಳಾಗಿ ಪ್ರಕಟವಾಗುತ್ತದೆ.

ಜನಶಕ್ತಿ: ಮಾಲೇಗಾಂವ್ ಪ್ರಕರಣದ ಬಗೆಗೆ ಏನನ್ನಿಸುತ್ತದೆ?

ನಿವೃತ್ತ ನ್ಯಾಯಮೂರ್ತಿ ರಾಮಾ ಜೋಯೀಸರು ಭಗತ್‌ಸಿಂಗ್ ರೀತಿಯಲ್ಲಿ ಸಾಧ್ವಿ ಪ್ರಜ್ಞಾಸಿಂಗ್ ಪ್ರತೀಕಾರ ತೆಗೆದುಕೊಂಡಿದ್ದಾಳೆ. ಅವರನ್ನು ಟೆರರಿಸ್ಟ್ ಅಂತ ಕರೀತೀರಾ? ಅಂತ ಬರೆದು ಮಾಲೇಗಾಂವ್ ಪ್ರಕರಣವನ್ನು ಸಮರ್ಥಿಸಿದ್ದಾರೆ....

ಭಯೋತ್ಪಾದಕರಿಗೆ ಸಹಕರಿಸುವವರು ಸಾಕಷ್ಟು ಜನ ಇದ್ದಾರೆ. ಅವರಿಲ್ಲದೇ ಇಷ್ಟೆಲ್ಲಾ ನಡೆಯುವುದು ಸಾಧ್ಯವಿಲ್ಲ. ಭಾರತದ ಅಷ್ಟು ಉದ್ದದ ಸಮುದ್ರ ತೀರ ದಾಟಿ ಬಂದು ದಾಳಿ ಮಾಡಬೇಕಾದರೆ ಯಾರೋ ನಮ್ಮಲ್ಲಿ ಅಧಿಕಾರ ಇದ್ದವರು ಸಹಕರಿಸಿರಬೇಕು...

ಇವರೆಲ್ಲಾ ಧರ್ಮ ರಕ್ಷಣೆ ಎನ್ನುತ್ತಾರೆ... ಅದೆಲ್ಲಾ ಏನಿಲ್ಲ... ಪರ ಧರ್ಮ ವಿನಾಶ, ಪರ ಧರ್ಮ ದ್ವೇಷ ಅಷ್ಟೇ ಇದು.

ಈ ದೇಶದಲ್ಲಿ ಹಿಂದೂಗಳು ಶೇ.85ರಷ್ಟು ಜನ ಇದ್ದಾರೆ. ಅವರಿಗೆ ವಿವೇಕ ಇದ್ದರೆ ಶೇ.13 ರಷ್ಟು ಇರುವ ಜನರ ಮನಸ್ಥಿತಿಯನ್ನು ದಿನಕ್ಕೆ 2 ನಿಮಿಷ ಯೋಚಿಸಿದರೂ ಸಾಕು.. ಹಿಂದಿ ಬರದ, ಕನ್ನಡಿಗನೊಬ್ಬ ದೆಹಲಿಗೆ ಹೋದಾಗ ಏನು ಪರಿಸ್ಥಿತಿ ಎದುರಾಗುತ್ತೆ?

ಪ್ರತಿಯೊಬ್ಬರೂ ತನಗೆ ಮೋಸ ಮಾಡೋದಕ್ಕೆ ಪ್ರಯತ್ನ ಪಡುತ್ತಾ ಇದ್ದಾರೆ ಅನ್ನಿಸುತ್ತೆ. ಸಂದರ್ಭವನ್ನು ದುರುಪಯೋಗ ಮಾಡಿಕೊಳ್ಳೋದಕ್ಕೆ ಪ್ರಯತ್ನ ಪಡ್ತಾ ಇದ್ದಾರೆ ಅನ್ನಿಸುತ್ತೆ....

ಹಾಗೆ.. ಮುಸ್ಲೀಮರಿಗೆ ಒಬ್ಬ ಸಾಮಾನ್ಯ ಹಿಂದು ಹೇಗೆ ಯೋಚಿಸುತ್ತಾನೆ ಅನ್ನುವುದನ್ನು ತಿಳಿದುಕೊಳ್ಳೋದಕ್ಕೆ ಸಾಧ್ಯವಾಗಬೇಕು.

ಭಟ್ಕಳದಲ್ಲಿ 8-10 ಜನ ಮುಸ್ಲೀಮರು ಪಿಕ್‌ನಿಕ್‌ಗೆ ಹೋಗಿದ್ದಾಗ ಭಜರಂಗದಳದವರು ಆ ಕುಟುಂಬದವರ ಮೇಲೆ ದಾಳಿ ಮಾಡಿದ್ದಾರೆ. ಪೊಲೀಸರು ದಾಳಿಗೀಡಾದವರನ್ನೇ ಬಂಧಿಸಿದ್ದಾರೆ....

ಪ್ರಜಾಪ್ರಭುತ್ವ ಒಂದೇ ಧರ್ಮ... ಆ ಧರ್ಮಕ್ಕೊಂದಕ್ಕೆ ಮಾತ್ರ ನನ್ನ ನಿಷ್ಠೆ.

ಜನಶಕ್ತಿ: ನೀವು ಅನೇಕ ದಶಕಗಳಿಂದ ಕೋಮು ಸೌಹಾರ್ದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾ ಬಂದಿದ್ದೀರ. ಅದಕ್ಕೆ ಏನು ಪ್ರೇರಣೆ?

ಕಮ್ಯೂನಲ್ (ಕೋಮುವಾದಿ) ಆಗಿರುವುದಕ್ಕಿಂತ ಗ್ರೇಟ್ ಇವಿಲ್ (ತೀರಾ ಕೆಟ್ಟದ್ದು) ಆ ಬಗ್ಗೆ ಬಾಯಿ ಮುಚ್ಚಿಕೊಂಡಿರುವುದು ಅಂತ ಅನಿಸುವುದರಿಂದ, ಪ್ರಜಾಪ್ರಭುತ್ವ ಒಂದೇ ಧರ್ಮ ಅಂತ ನಂಬಿರುವುದರಿಂದ, ಜಾತ್ಯಾತೀತತೆ ಅನಿವಾರ್ಯವಾಗಿರುವುದರಿಂದ ನಾನು ಈ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾ ಇದ್ದೇನೆ.

ಜನಶಕ್ತಿ : ನಮ್ಮ ಸಮಾಜದಲ್ಲಿ ಮಠಗಳ ಪಾತ್ರ ಏನಿರಬೇಕು?

ವಸುಧೈವ ಕುಟುಂಬಕಂ ಎಂಬುದು ಅಂತರ್ಯದ ನಂಬಿಕೆಯಾಗಿದ್ದರೆ ಶೂದ್ರ, ದಲಿತರನ್ನು ಒಪ್ಪಿಕೊಳ್ಳಿ.

....ಸಂವಿಧಾನದಲ್ಲಿ ...

ಪುಟ ...

'ಆರ್ಥಿಕ ಬಿಕ್ಕಟ್ಟು ನಿಭಾಯಿಸುವಲ್ಲಿ ಕೇಂದ್ರ ವಿಫಲ'

ರತ್ನಾಕರ ಶೆಣೈ ಟೀಕೆ

ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಆರ್ಥಿಕ ಬಿಕ್ಕಟ್ಟಿನ ತಲ್ಲಣಗಳ ಪರಿಣಾಮ ಭಾರತದ ಮೇಲಾಗುತ್ತಿದ್ದರೂ ಈ ಬಗ್ಗೆ ಅರಿವಿಲ್ಲದಂತೆ ಕೇಂದ್ರ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ ಎಂದು ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ ಬಿಇಎಫ್ಐ ಮುಖಂಡರಾದ ರತ್ನಾಕರ ಶೆಣೈ ಟೀಕಿಸಿದರು.



ಡಿಸೆಂಬರ್ 1,2008ರಂದು ಮೈಸೂರಿನ ಪುರಭವನದಲ್ಲಿ ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗ ಹಾಗೂ ಬೆಂಗಳೂರು ಪ್ರದೇಶ ಸಾಮಾನ್ಯ ವಿಮಾ ನೌಕರರ ಸಂಘ 'ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರಬಂಡವಾಳ ಹೂಡಿಕೆ(ಎಫ್‌ಡಿಐ) ಮಿತಿ ಹೆಚ್ಚಳ ಮತ್ತು ವಿಮಾ ಕಾಯ್ದೆಗೆ ತಿದ್ದುಪಡಿ ವಿರೋಧಿಸಿ' ಸಮಾವೇಶ ಆಯೋಜಿಸಿದ್ದವು.

ಸಮಾವೇಶದ ಮುಖ್ಯ ಅತಿಥಿಯಾಗಿ ಶೆಣೈರವರು ಮಾತನಾಡಿ 'ನಮ್ಮ ದೇಶದ ಬ್ಯಾಂಕ್‌ಗಳು ಸುರಕ್ಷಿತ' ಎಂದು ಹಣಕಾಸು ಸಚಿವ ಚಿದಂಬರಂ ಹೇಳಿದ್ದಾರೆ. ಆದರೆ ಅದು ಸಾರ್ವಜನಿಕ ವಲಯದ ಬ್ಯಾಂಕ್ ಆಗಿ ಉಳಿದಿರುವುದು ಮತ್ತು ಅದಕ್ಕೆ ಕಾರಣ ನೌಕರರು ಎಂಬುದನ್ನು ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಆದರೂ ನಮ್ಮದೇಶದ ಮೇಲೆ ಆರ್ಥಿಕ ಬಿಕ್ಕಟ್ಟು ಪರಿಣಾಮ ಬೀರುವುದಿಲ್ಲ ಎಂದಿರುವುದು ಒಪ್ಪಲಾಗದು. ಮೇಲ್ನೋಟಕ್ಕೆ ಯಾವುದೇ ಬಿಕ್ಕಟ್ಟು ಕಾಣದಿದ್ದರೂ ಒಳಹೊಕ್ಕು ನೋಡುವ ಅಗತ್ಯವಿದೆ. ಮುಳುಗುತ್ತಿರುವ ಎಐಜಿ, ಪ್ರುಡೆನ್ಶಿಯಲ್, ಅವಿವಾ ಪೋರ್ಟಿಸ್ ಮತ್ತಿತರ ವಿದೇಶಿ ವಿಮಾ ಸಂಸ್ಥೆಗಳು ಸಂಕಷ್ಟದಲ್ಲಿದ್ದು ಸರ್ಕಾರದ ನೆರವು ಬೇಡುತ್ತಿವೆ. ಆಯಾ ದೇಶಗಳಲ್ಲೇ ಉಳಿವಿಗಾಗಿ ಹೋರಾಟ ನಡೆಸುತ್ತಿರುವ ಕಂಪನಿಗಳಿಗೆ ಭಾರತದಲ್ಲೇಕೆ ಮಣೆ ಹಾಕಲಾಗುತ್ತಿದೆ ಎಂಬುದು ಪ್ರಶ್ನಾರ್ಹವಾಗಿದೆ.

ವಿದೇಶಿ ಕಂಪನಿಗಳು ನಮ್ಮ ದೇಶದ ಷೇರು ಮಾರುಕಟ್ಟೆಯಲ್ಲಿ ಹೂಡಿದ್ದ 13 ಬಿಲಿಯನ್ ಡಾಲರ್ ಮೊತ್ತವನ್ನು ಹಿಂಪಡೆದುಕೊಂಡಿವೆ. ಅಕ್ಟೋಬರ್ ತಿಂಗಳಲ್ಲೇ ರಫ್ತು ಪ್ರಮಾಣ ಶೇ.15 ರಷ್ಟು ಕುಸಿದಿದೆ. ದೀಪಾವಳಿ ಸಂದರ್ಭದಲ್ಲಿ ವಾಹನ ಮಾರಾಟ ಶೇ.12 ರಷ್ಟು ಏರಿಕೆಯಾಗಬೇಕಿತ್ತು. ಇದೇ ಮೊದಲ ಬಾರಿಗೆ ಶೇ.14 ರಷ್ಟು ಕುಸಿತ ಕಂಡಿದೆ.

ಸಾವಿರ ಔಷಧ ತಯಾರಿಕಾ ಘಟಕಗಳು ಮುಳುಗಿವೆ. ದಿಢೀರ್ ಏರಿಕೆ ಕಂಡಿದ್ದ ಉಕ್ಕಿನ ಬೆಲೆ ಅಷ್ಟೇ ಪ್ರಮಾಣದಲ್ಲಿ ದಿಢೀರ್ ಕುಸಿತ ಕಂಡಿದೆ. ಜವಳಿ ಉದ್ಯಮ ಮತ್ತು ಕರಕುಶಲ ಉದ್ಯಮ ದಲ್ಲಿರುವ ತಲಾ 5 ಲಕ್ಷ ಮಂದಿ ಕೆಲಸವಿಲ್ಲದೆ ನಿರುದ್ಯೋಗಿಗಳಾಗುವ ಭೀತಿ ಎದುರಿಸುತ್ತಿದ್ದಾರೆ. ಶಿವಕಾಶಿಯ ಅತಿ ದೊಡ್ಡ ಮುದ್ರಣ ಉದ್ಯಮ ಶೇ.15 ರಷ್ಟು ಇಳಿದಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಜಾಗತಿಕ ಆರ್ಥಿಕ ಬಿಕ್ಕಟ್ಟಿನಲ್ಲಿ ಬೃಹತ್ ವಿಮಾ ಕಂಪನಿಗಳು ಮುಳುಗುತ್ತಿವೆ. ಹೀಗಿದ್ದರೂ ಕೇಂದ್ರ ಸರ್ಕಾರ ವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ಮಿತಿಯನ್ನು ಶೇ.26 ರಿಂದ ಶೇ.49ಕ್ಕೆ ಹೆಚ್ಚಿಸುವ, ಎಲ್‌ಐಸಿಯ ಮೂಲ ಬಂಡವಾಳವನ್ನು 5 ಕೋಟಿ ರೂ.ಗಳಿಂದ 100 ಕೋಟಿಗೆ ವಿಸ್ತರಿಸುವ, ಹೂಡಿಕೆ ವಿಧಾನವನ್ನು ಬದಲಿಸುವ ಮಸೂದೆಗಳನ್ನು ಸಂಸತ್‌ನಲ್ಲಿ ಮಂಡಿಸಲು ನಿರ್ಧರಿಸಿರುವುದು ಸರಿಯಲ್ಲ.

ನಷ್ಟದಲ್ಲಿರುವ ವಿದೇಶಿ ವಿಮಾ ಕಂಪನಿಗಳಿಗೆ ಬಂಡವಾಳ ಹೆಚ್ಚಿಸಲು ಅವಕಾಶ ನೀಡಿದರೆ ಜನರ ಉಳಿತಾಯದ ಹಣ ಉಳಿಯುವ ಸಾಧ್ಯತೆಗಳಿಲ್ಲ. ಹೂಡಿಕೆ ವಿಧಾನ ಬದಲಾಯಿಸುವುದರಿಂದ ಖಾಸಗಿ ವಿಮಾ ಕಂಪನಿಗಳು ಸಂಗ್ರಹವಾಗುವ ಹಣವನ್ನು ವಿದೇಶಗಳಿಗೆ ಸಾಗಿಸುವ ಸಾಧ್ಯತೆ ಹೆಚ್ಚು. ಈ ಬಗ್ಗೆ ನೌಕರ ವಲಯ ಅರ್ಥ ಮಾಡಿಕೊಂಡು ಹೋರಾಟ ರೂಪಿಸುವ ತುರ್ತಿದೆ ಎಂದರು.

ಸಂಘದ ಅಧ್ಯಕ್ಷ ಎನ್.ವಿಜಯಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ ಹಣಕಾಸು ರಂಗದ ಉದಾರೀಕರಣ ಪ್ರಕ್ರಿಯೆಯನ್ನು ವಿರೋಧಿಸುವ ಘೋಷಣೆಯನ್ನು ಮಾಡಲಾಯಿತು. ಅಧ್ಯಕ್ಷತೆಯನ್ನು ಉಪಾಧ್ಯಕ್ಷ ಲ.ಜಗನ್ನಾಥ್ ವಹಿಸಿದ್ದರು. ಬೆಂಗಳೂರು ಪ್ರದೇಶ ಸಾಮಾನ್ಯ ವಿಮಾ ನೌಕರರ ಸಂಘದ ಅಧ್ಯಕ್ಷ ಎಸ್.ಬಿ. ಬಲರಾಂ, ಕಾರ್ಯದರ್ಶಿ ಬಿ.ಎ.ಪ್ರೇಮ್‌ಕುಮಾರ್, ಎಸ್.ಎಸ್. ನಾಗೇಶ್ ಹಾಜರಿದ್ದರು.

ಧರ್ಮದ ಜಾಗತೀಕರಣ.........

ಪುಟ 2 ರಿಂದ

ಮಾಡಿದ 'ಪ್ರಕಾಶಮಣಿ' ಈ ಸಂಸ್ಥೆಯ ಸಂಚಾಲಕಿ. ಈ ಸಂಸ್ಥೆಯು ಲಕ್ಷಗಟ್ಟಲೆ ಅರೆಹುಚ್ಚರನ್ನು ತಯಾರಿಸಿದೆ. ಇದರ ಕಾರುಬಾರು ಕೂಡಾ ಕೆಲವು ಶತ ಕೋಟಿ ರೂಪಾಯಿಗಳಷ್ಟು. ಈ ಸಂಸ್ಥೆಗೆ ಭಾರತೀಯ ದರ್ಶನಶಾಸ್ತ್ರದ ಕಿಂಚಿತ್ತೂ ಪರಿಚಯವಿಲ್ಲ. ಕಾಗಕ್ಕ ಗುಬ್ಬಕ್ಕನ ಪುರಾಣಕತೆಗಳೇ ಇದರ ಬಂಡವಾಳ.

ಆಚಾರ್ಯ ರಜನೀಶ್:

ಶಾಸ್ತ್ರಗಳನ್ನು ಧರ್ಮಗಳೆಂದು ಒಪ್ಪದ ರಜನೀಶ್ ಸ್ವಘೋಷಿತ ಭಗವಾನ್ ಆಗಿದ್ದ. ಆತ ಕೊಟ್ಟ ಪ್ರವಚನಗಳೇ 'ಶಾಸ್ತ್ರಗಳು'. ಆಚಾರ್ಯ ರಜನೀಶ್ ಸತ್ತ ನಂತರ ಅವನ ಅಪಾರ ಆಸ್ತಿಯ ಒಡೆತನದ ಬಗ್ಗೆ ವಿವಾದ ಅಮೆರಿಕಾದಲ್ಲಿರುವ ಮೂವರು ಘಟನಾಘಟಿಗಳಿಂದ ನಡೆಯಿತು. ಆಕಸ್ಮಿಕವೆಂಬಂತೆ ಪೂನಾದ ಓಶೋ ಇಂಟರ್‌ನ್ಯಾಶನಲ್ ಮುಖ್ಯಾಲಯವು ಪೂನಾದಿಂದ ನ್ಯೂಯಾರ್ಕಿಗೆ ವರ್ಗಾಯಿಸಲಾಯಿತು. ಅದರಲ್ಲಾ ಕಾಪಿರೈಟ್, ಟ್ರೇಡ್‌ಮಾರ್ಕ್ ತಮ್ಮಲ್ಲಿವೆ ಎಂಬುದು ಅವರ ವಾದ. ಬಿಜೆಪಿಯ ದೀನನಾಥ್ ಮಿಶ್ರ ಮತ್ತು ಬಾಜಪಾ ಸಂಸದ ವಿನೋದ್ ಖನ್ನಾ ಈ ಬಗ್ಗೆ ಹಸ್ತಕ್ಷೇಪ ನಡೆಸಲು ಸರ್ಕಾರವನ್ನು ಒತ್ತಾಯಿಸಿದರು.

ಅಮೆರಿಕಾ ಮತ್ತು ಸ್ವಿಜರ್‌ಲೆಂಡ್‌ನಲ್ಲಿರುವ ಓಶೋ ಇಂಟರ್‌ನ್ಯಾಶನಲ್ ಭಾರತೀಯ ಶಿಷ್ಯರಿಂದ ರಾಯಲ್ಟಿ ಕೇಳುತ್ತದೆ. ಏಕೆಂದರೆ ಓಶೋ ಪುಸ್ತಕ, ಕ್ಯಾಸೆಟ್ ಆಡಿಯೋ, ವಿಡಿಯೋಗಳ ಕಾಪಿರೈಟ್ ಅವರ ಕೈಯಲ್ಲಿದೆ. ಜಪಾನ್ ಮತ್ತು ಫ್ರಾನ್ಸಿನ ಓಶೋ ಶಿಷ್ಯರಿಗೂ ಹೀಗೆ ನೋಟಿಸು ಕಳುಹಿಸಲಾಗಿದೆ.

ರಜನೀಶ್ ಅಮೆರಿಕಾದ ಓರೆಗಾನ್ ರಾಜ್ಯದಲ್ಲಿ 64,000 ಎಕ್ರೆ ಜಮೀನು ಖರೀದಿಸಿ 'ರಜನೀಶಪುರಂ' ಸ್ಥಾಪಿಸಿದ. ಅಲ್ಲಿ 25,000 ಜನ ಕುಳಿತುಕೊಳ್ಳುವ ಸಭಾಭವನ, ವಿಲಾಸಿ ವೈಭವದ ಹೋಟೆಲ್, ಹೆಲಿಪ್ಯಾಡ್‌ಗಳನ್ನು ನಿರ್ಮಿಸಿದ್ದ. ರಜನೀಶ್‌ಪುರಂ ಟ್ರಸ್ಟ್ ಬಳಿ 86 ರೋಲ್ಸ್ ರಾಯ್ ಕಾರುಗಳಿವೆ. ರಜನೀಶ್‌ನ ಕಾರ್ಯದರ್ಶಿ ಮಾ ಶೀಲಾ 1985ರಲ್ಲಿ ಓಡಿಬಂದು ಅಲ್ಲಿನ ಕತ್ತಲ ಲೋಕದ ರಹಸ್ಯಗಳನ್ನು ಹೊರಗೆಡಹಿದ ನಂತರವೇ ಅಮೇರಿಕಾ ರಜನೀಶನನ್ನು ಬಂಧಿಸಿತು. ನಂತರ ಆತ ಪೂನಾಕ್ಕೆ ಬಂದು ನೆಲಸಿದ.

ರಜನೀಶ್ ಪ್ರಕಾರ ಮತಧರ್ಮಗಳು ಮನುಷ್ಯನ ವ್ಯಕ್ತಿತ್ವಕ್ಕೆ ಬಹಳ ಹಾನಿಯನ್ನುಂಟುಮಾಡಿವೆ. ಅವು ಮನುಷ್ಯನ ಲೈಂಗಿಕತೆಯನ್ನು ನಾಶಮಾಡಿವೆ. ರಜನೀಶ್ ವಿವಾಹ ವ್ಯವಸ್ಥೆಯನ್ನು ದಾಸ್ಯದ ಪ್ರತೀಕವೆಂದು ಹೀಗಳೆಯುತ್ತಿದ್ದ. ರಜನೀಶನ ದರ್ಶನವು ಮುಕ್ತ ಪ್ರೇಮ ಮತ್ತು ಸ್ವಚ್ಛಂದ ಸಂಭೋಗವಾಗಿದೆ. ಇದೂ ಕೂಡಾ ಹಿಂದೂ ಧರ್ಮದ ಒಂದು ಜಾಗತಿಕ ರೂಪ! ○

........ಭಯೋತ್ಪಾದನೆ ಧರ್ಮನಿಷ್ಠೆಯಲ್ಲ

ಪುಟ 16 ರಿಂದ

ಧರ್ಮಗಳನ್ನು ಜನ ಸ್ವೀಕರಿಸುತ್ತಾ ಬಂದಿದ್ದಾರೆ. ಹಾಗಾಗಿ ಇದು ಸಮ್ಮಿಶ್ರ ಸಂಸ್ಕೃತಿ. ಸಮ್ಮಿಶ್ರ ಸಂಸ್ಕೃತಿಯ ಜೀವಾಳ ಸೌಹಾರ್ದತೆ ಮತ್ತು ಸಾಮರಸ್ಯ.

ಈ ವಿಶಿಷ್ಟ ಗುಣದಿಂದಾಗಿಯೇ ಭಾರತ ವಿಶ್ವದಲ್ಲಿಯೇ ತನ್ನತನವನ್ನು ಕಾಯ್ದುಕೊಂಡಿದ್ದು. ಈ ದೇಶದ ಶರಣರು, ಭಕ್ತಿ ಪಂಥದವರು, ಅನುಭಾವಿ ಪಂಥದವರು, ಸೂಫಿಗಳು, ಸಂತರು, ಈ ಸೌಹಾರ್ದ ಸಂಸ್ಕೃತಿ ಬೆಳೆದು ಬರಲಿಕ್ಕೆ ಕಾರಣಕರ್ತರಾದವರು.

ಸೌಹಾರ್ದ, ಸಾಮರಸ್ಯ ಎಂಬುದು ಭಾರತೀಯರ ಜೀವನ ವಿಧಾನವಾಗಿತ್ತು. ಜಾತಿ ಬೇಧ, ಧರ್ಮಬೇಧಗಳು ಬಾಹ್ಯದಲ್ಲಿ ತಕ್ಕಮಟ್ಟಿಗೆ ಕಂಡುಬಂದರೂ ಜನ ಇವುಗಳನ್ನು ಮೀರಿ ಅನೋನ್ಯವಾಗಿ ಸಹಬಾಳ್ವೆ ನಡೆಸುತ್ತಾ ಬಂದಿದ್ದಾರೆ. ಇಂತಹ ಸಹಬಾಳ್ವೆಗೆ ಕಿಚ್ಚನ್ನು ಹಚ್ಚುವ ಕೆಲಸ ಹಿಂದೂ ಮತ್ತು ಮುಸ್ಲಿಂ, ಕ್ರೈಸ್ತ ಮತಾಂಧರಿಂದ ನಡೆದಿದೆ. ನಮ್ಮ ಜನರನ್ನು ಪ್ರಜಾಪೂರ್ವಕವಾಗಿ ಜಾತಿವಾದಿಗಳನ್ನಾಗಿ, ಕೋಮುವಾದಿಗಳನ್ನಾಗಿ ಉಗ್ರಗಾಮಿ ಗಳನ್ನಾಗಿ, ಪರಿವರ್ತಿಸಲಾಗುತ್ತಿದೆ. ತಮ್ಮ ತಮ್ಮ ರಾಜಕೀಯ ಸ್ವಾರ್ಥಕ್ಕೆ ಸಾಮಾನ್ಯ ಜನರನ್ನು ಬಲಿಕೊಡಲಾಗುತ್ತಿದೆ. ಜನ ಇದನ್ನು ಅರ್ಥ ಮಾಡಿಕೊಂಡು ವಿಭಜಕ ಶಕ್ತಿಗಳನ್ನು ದೂರವಿಡಬೇಕಾಗಿದೆ. ಸೌಹಾರ್ದ ಸಹಬಾಳ್ವೆಯ ಆಶಯಕ್ಕೆ ಪೂರಕವಾದ ತಿಳುವಳಿಕೆ ನಡವಳಿಕೆಯನ್ನು ಎಲ್ಲ ಸಮುದಾಯದ ಜನ ತೋರಿಸಬೇಕಿದೆ. ಆಯಾ ಧರ್ಮಗಳಲ್ಲಿನ ಜನ ತಮ್ಮಲ್ಲಿನ ಪ್ರತ್ಯೇಕವಾದಿಗಳನ್ನು ದೂರವಿಟ್ಟು ರಾಷ್ಟ್ರ ಮತ್ತು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಒಂದುಗೂಡಿ ಸೌಹಾರ್ದ, ಸಾಮರಸ್ಯದ ಪರಂಪರೆಯನ್ನು ಕಾಪಾಡಿಕೊಳ್ಳ ಬೇಕಾಗಿದೆ. ಈ ಸೌಹಾರ್ದ ಸಾಮರಸ್ಯ ಸಂಸ್ಕೃತಿಯೇ ಭಾರತ ಜಗತ್ತಿಗೆ ಕೊಟ್ಟಿರುವ ಮೊದಲ ಉತ್ತಮ ಕೊಡುಗೆ.

ಪ್ರಶ್ನೆ: ಜಾತಿ ವರ್ಗದ ಪ್ರಶ್ನೆ ಕುರಿತು ನಿಮ್ಮ ನಿಲುವು ವಿವರಿಸಿ

ಜಾತಿ, ಉಪ ಜಾತಿಗಳು, ವಾಸ್ತವವೇ ವಿನಃ ಸತ್ಯವಲ್ಲ. ವರ್ಗ ಒಂದೇ ಸತ್ಯ. ಆದರೆ ಜಾತಿ, ಉಪಜಾತಿಗಳೇ ಪರಮ ಸತ್ಯಗಳೆಂದು ನಂಬಿಸಲಾಗುತ್ತಿದೆ. ಆತ್ಮಗೌರವದ ಸಂಕೇತವಾಗಿ ಹಾಗೂ ಮೇಲ್ವರ್ಗದ ದಬ್ಬಾಳಿಕೆಯ ವಿರುದ್ಧವಾಗಿ ಕೆಳವರ್ಗದ ಜನ ಜಾತಿ ಹೋರಾಟವನ್ನು ಮಾಡಬೇಕಾಗಿದೆಯೇ ವಿನಃ ಜಾತಿ ಉಪಜಾತಿಗಳ ವ್ಯವಸ್ಥೆಯನ್ನು ಬಲಪಡಿಸಲು ಅಲ್ಲ. ಮೇಲ್ವರ್ಗದ ಜನ ಜಾತಿ ವ್ಯವಸ್ಥೆಯನ್ನು ಬಲಗೊಳಿಸಲು ಸಂಘಟಿತರಾದರೆ ಕೆಳವರ್ಗದ ಜನ, ಜಾತಿ ವ್ಯವಸ್ಥೆಯನ್ನು ನಾಶ ಮಾಡಲು ಹೋರಾಟ ಮಾಡಬೇಕಾಗುತ್ತದೆ. ಮುಖ್ಯವಾಗಿ ನಮ್ಮ ದೇಶದಲ್ಲಿ ಜಾತಿ ಹೋರಾಟ, ವರ್ಗ ಹೋರಾಟ ಒಂದಾಗಿ ಹೋಗಬೇಕಾಗಿದೆ. ಜಾತಿಪ್ರಶ್ನೆ ವರ್ಗ ಪ್ರಶ್ನೆಯಲ್ಲಿ ಪರ್ಯಾವಸಾನವಾದಾಗ ಈ ದೇಶದಲ್ಲಿ ಅದ್ಭುತ ಬದಲಾವಣೆಯಾಗುತ್ತದೆ.

ಹಿಂದುತ್ವವೇ ಹಿಂದೂ ಧರ್ಮದ ಶತ್ರು

ಗೋಕರ್ಣ ದೇವಸ್ಥಾನದ ಹಸ್ತಾಂತರ ಪ್ರಜಾಸತ್ತೆ ಮೇಲೆ ದಾಳಿ

■ ಜಿ.ಎನ್.ನಾಗರಾಜ್

ದುಡಿಯುವ ಜನತೆಗೆ ಕೋಮುವಾದ ಮತ್ತು ಭಯೋತ್ಪಾದನೆ ಎರಡೂ ಪೈಶಾಚಿಕವಾಗಿ, ಮೃಗೀಯವಾಗಿ ಹಿಂಸಿಸುತ್ತಿರುವ ಶತ್ರುಗಳು. ರಾಜಕೀಯ ಹಿತಾಸಕ್ತಿಗಳಲ್ಲಿ ಕೆಲವರು



ಮುಖ್ಯವಾಗಿ ಬಲಪಂಥೀಯ ಪರಿವಾರಗಳೇ ಇಂಥದಕ್ಕೆ ಪ್ರಚೋದಕ ಶಕ್ತಿಗಳು. ಹಾಗಾಗಿಯೇ ದೇಶದೆಲ್ಲೆಡೆ ಚರ್ಚ್‌ಗಳ ಮೇಲಿನ ದಾಳಿ, ಅಲ್ಪಸಂಖ್ಯಾತರನ್ನು ಗುರಿಯಾಗಿಸಿದ ದುಷ್ಕೃತ್ಯಗಳು ನಡೆದು ಮಾನವೀಯತೆ ಮೇಲೆ ಪ್ರಹಾರ ನಡೆಸುತ್ತಿದೆ. ಕುವೆಂಪು ನಾಡಗೀತೆಯಲ್ಲಿ ಹೇಳಿದ 'ಸರ್ವ ಜನಾಂಗದ ಶಾಂತಿಯ ತೋಟ' ಉಳಿಯಬೇಕಾದರೆ ಹಿಂದೂ ಧರ್ಮಕ್ಕೆ ಶತ್ರುವಾಗಿ ಬಂದೆರಗಿದ ಹಿಂದುತ್ವ-ಕೋಮುವಾದ ಅಳಿಯಬೇಕು. ಅಲ್ಪಸಂಖ್ಯಾತ ಮೂಲಭೂತವಾದ ನಿಲ್ಲಬೇಕು ಅಂದಾಗ ಭಯೋತ್ಪಾದನೆ ನಾಶವಾಗಲು ದಾರಿಯಾಗುತ್ತದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜರವರು ದಿನಾಂಕ 13-12-08 ರಂದು ಗೋಕರ್ಣದಲ್ಲಿ ಸೌಹಾರ್ದ ಕರ್ನಾಟಕ ಜಾಥಾ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ಬಿಜೆಪಿ ಸರ್ಕಾರವು ವ್ಯವಸ್ಥಿತವಾಗಿ ಕೋಮುವಾದವನ್ನು ಪೋಷಿಸಿ ಬೆಳೆಸುತ್ತಿದೆ. ದೇವಾಲಯಗಳನ್ನು ಕೋಮುವಾದಿಗಳ ಹಿಡಿತಕ್ಕೆ ನೀಡುತ್ತಿದೆ. ಗೋಕರ್ಣದ ಮಹಾಬಲೇಶ್ವರ ದೇವಸ್ಥಾನವನ್ನು ಆರ್‌ಎಸ್‌ಎಸ್ ಪ್ರಣೀತ ರಾಮಚಂದ್ರಾಪುರ ಮಠಕ್ಕೆ ವಹಿಸಿದ್ದು ಭಕ್ತಾದಿಗಳ- ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಧಾಳಿ ಎಂದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಅತಿಥಿ ಬಿ.ಮಾಧವರವರು ಮಾತನಾಡಿ ಆರ್ಥಿಕ ಕುಸಿತ, ಉದ್ಯೋಗನಾಶದ ಗಂಭೀರ ಪರಿಸ್ಥಿತಿಯ ಲಾಭ ಪಡೆದು ದೇಶದಲ್ಲಿ ಅಭದ್ರತೆ ಸೃಷ್ಟಿಸಲು ಭಯೋತ್ಪಾದನೆ ಕೋಮುವಾದದ ಹೀನ ಕೃತ್ಯಗಳು ನರ್ತಿಸುತ್ತಿವೆ. ಮಾಲೇಗಾಂವ್ ಸ್ಫೋಟದ ಕುಮಾರಿ ಸಾಧ್ವಿ ಪ್ರಜ್ಞಾಸಿಂಗ್, ಲೆಫ್ಟಿನೆಂಟ್ ಪುರೋಹಿತರನ್ನು ಸಮರ್ಥಿಸಿಕೊಂಡ ಬಿಜೆಪಿ ಸಂಘ ಪರಿವಾರ ಜನರಲ್ಲಿ ಭಯೋತ್ಪಾದಿಸುವ ಹಲವಾರು ಕೃತ್ಯ ಎಸಗಿದೆ. ಇದರ ವಿರುದ್ಧ ಧಾರ್ಮಿಕ ಸಮನ್ವಯದ ನಾಡಾದ ಭಾರತದಲ್ಲಿ ಸೌಹಾರ್ದತೆ ನೆಲೆಸಲಿ, ಜನತೆಯನ್ನು ಬಾಧಿಸುವ ನೈಜ ಸಮಸ್ಯೆಗಳ ವಿರುದ್ಧ ಹೋರಾಟಕ್ಕೆ ಮುಂದಾಗಲಿ ಎಂದರು. ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಉ.ಕ. ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ್ ನಾಯಕ್ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಕಾರ್ಮಿಕ ಮುಖಂಡರಾದ ತಿಲಕಗೌಡ, ಮೈಸೂರು ಸಿಪಿಐ(ಎಂ) ಕಾರ್ಯದರ್ಶಿ ಲ. ಜಗನ್ನಾಥ್ ಸ್ಥಳೀಯ ಶಾಖಾ ಕಾರ್ಯದರ್ಶಿ ಶಾಲಿನಿ ಕಲ್ಗನೆ ಹಾಜರಿದ್ದರು. ಶುಭಾಶ ಕೊಪ್ಪೀಕರ್ ನಿರೂಪಿಸಿದರು. ಯಮುನಾ ಗಾಂವ್ಕರ್ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು. ಸಭೆಗೆ ಗೋಕರ್ಣ ಸುತ್ತಮುತ್ತಲ ಊರುಗಳಿಂದ ಜನ ಆಗಮಿಸಿದರು. ಕಲಾತಂಡದವರು ಸೌಹಾರ್ದತೆಯ ಹಾಡುಗಳನ್ನು ಪ್ರಸ್ತುತಪಡಿಸಿದರು.



ಜಾಥಾ ಮುಂದೆ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಶಿರಾಲಿ, ಭಟ್ಕಳದಲ್ಲಿ ಸಭೆ ನಡೆಸಿದಾಗ ಉತ್ತಮ ಸ್ಪಂದನ ದೊರೆಯಿತು. ಮಾಲಿನಿ ಮೇಸ್ತ, ಕೆ.ಜೋಸ್, ಶಿವರಾಯ ದೇಸಾಯಿ, ಬೆಲೆಕೇರಿ ನಾಗೇಶ, ದಾಮೋದರ ನಾಯ್ಕ, ಗೌರೀಶ ನಾಯ್ಕ, ಸವಿತಾ ತನ್ಮಡ್ಡಿ, ರಾಮಶಿವಯ್ಯಗೌಡ ಕೃಷ್ಣಗೌಡ, ಮಾಸ್ತಿಗೌಡ, ಸುರೇಶ್ ನಾಯ್ಕ, ತಿಮ್ಮಪ್ಪ, ಮಂಜುನಾಥ, ಶಂಕರ ದೇವಾಡಿಗ, ಮಾಸ್ತಿ ನಾಯ್ಕ, ಹರಿಶ್ಚಂದ್ರ, ಗೀತಾ ನಾಯ್ಕ ಪುಷ್ಪವತಿ ನಾಯ್ಕ, ಗಜೇಂದ್ರ, ಶಿರಾಲಿ ಜಿಲ್ಲೆಯ ವಿವಿಧ ಸಭೆಗಳಲ್ಲಿ ನೇತೃತ್ವ ವಹಿಸಿದ್ದರು.

- ಯಮುನಾ ಗಾಂವ್ಕಾರ್

ವೈವಿಧ್ಯತೆಯೇ ಇಲ್ಲಿನ ಏಕತೆ

ಪುಟ 11ರಿಂದ

ಸಿಕ್ಕಿರೋದು ಬಿಟ್ಟರೆ ದಲಿತರ ವಿಚಾರದಲ್ಲಿ ಹಿಂದೂಗಳು ಮೂರುಕಾಸು ಏನಾದರೂ ಚೇಂಜ್ ಆಗಿದ್ದಾರಾ....? ಪೇಜಾವರರಿಗೆ ಬಹಿರಂಗ ಪತ್ರ ಬರೆಯುತ್ತಿದ್ದೇನೆ... ದಲಿತರ ಕೇರಿಗೆ ಹೋಗಿ ಭಗವದ್ಗೀತೆ ಪಠಣ ಮಾಡೋದೇನಿದೆ.....? ದಲಿತರನ್ನು ನಿಮ್ಮ ಮಠಕ್ಕೆ ಕರೆಸಿಕೊಳ್ಳಿ. ನಿಮ್ಮ ಮಠದ ಆವರಣದಲ್ಲಿ ಮಂಟೇಸ್ವಾಮಿ ಕಥೆ, ಹಾಡು ಕೇಳಿ. ದಲಿತರನ್ನು ಪಕ್ಕದಲ್ಲಿ ಕೂರಿಸಿಕೊಂಡು ಊಟ ಮಾಡಿ.... ಅಂತ.

ಬ್ರಾಹ್ಮಣರು ತಪ್ಪು ಮಾಡಿದಾಗ ಟೀಕಿಸಬೇಕು. ಆದರೆ ದಲಿತರು ತಪ್ಪು ಮಾಡಿದಾಗ ಅದೇ ಮಟ್ಟಕ್ಕೆ ಟೀಕೆ ಮಾಡಬಾರದು.

ಮೇಲ್ಜಾತಿಯ ಜನರು ದಲಿತರನ್ನು ಕುರಿತು, ದಲಿತರ ಮಂತ್ರಿಗಳನ್ನು ಕುರಿತು ಜೋಕ್ ಮಾಡುತ್ತಾರೆ. ದಲಿತ ಮಂತ್ರಿಯೊಬ್ಬರು ತನ್ನ ಕಾರ್ ಡ್ರೈವರ್‌ನನ್ನು ಕೇಳಿದರು 'ಏನದು ಶಬ್ದ?' ಅಂತ. ಡ್ರೈವರ್ ಅಂದ 'ಗೇರ್ ಚೇಂಜ್ ಮಾಡಿದೆ' ಅಂತ. ಅದಕ್ಕೆ ಮಂತ್ರಿ ಅಂದರಂತೆ 'ಹೊಸ ಕಾರು... ಆಗಲೆ ಗೇರ್ ಚೇಂಜ್ ಮಾಡಿದೆಯಾ?' ಅಂತ.

ಹಿಂದೆ ಚೆನ್ನಿಗಪ್ಪ ಅಂತ ಒಬ್ಬ ದಲಿತರು ಮಂತ್ರಿಯಾಗಿದ್ದರು. ಅವರ ಬಗೆಗೆ ಇಂತಹ ಜೋಕ್ ಹೇಳಿ ಗೇಲಿ ಮಾಡುತ್ತಿದ್ದರು. ಆಗ ನಾನೂ ಅಂಥಾ ತಪ್ಪು ಮಾಡಿದ್ದಿದೆ.

ಧರ್ಮ ಅಂದರೆ ಚಲನಶೀಲ, ಮೂವ್‌ಮೆಂಟ್ (ಚಳುವಳಿ) ಅದು ಸ್ಥಿರ ಅಲ್ಲ. ಮಠ ಸ್ಥಾವರ.. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

ಮತಾಂತರ ನಿಷೇಧಕ್ಕೆ ನನ್ನ ವಿರೋಧವಿದೆ. ನಾವು ದಿನವೂ ಹೊಸದಾಗಬೇಕು. ಅಪ್ಪ ಅಮ್ಮ ನಿಮಿತ್ತ ಮಾತ್ರ. ನಮ್ಮ ನಿಷ್ಠೆ ಪ್ರಕೃತಿಗೆ... ಅಪ್ಪ ಅಮ್ಮನಿಗಲ್ಲ. (ಅವರ ಬಗ್ಗೆ ಗೌರವವಿದೆ. ಅದು ಬೇರೆ....)

ಜನಶಕ್ತಿ: ಪ್ರಚಲಿತ ರಾಜಕೀಯ ವಿದ್ಯಮಾನಗಳ ಬಗೆಗೆ?

ಜನತೆ ವಿರೋಧ ಪಕ್ಷವಾಗಿ ಕೆಲಸ ಮಾಡಬೇಕು. ಬಿಜೆಪಿ ಬರುವಂತಾದದ್ದು ಜೆಡಿ(ಎಸ್) ನಾಯಕರ ತಪ್ಪಿನಿಂದ.



ಕಾಂಗ್ರೆಸ್ಸಿನಲ್ಲಿ ಗೆದ್ದು, ಬಿಜೆಪಿಗೆ ಹೋಗಿದ್ದು, ಜೆಡಿ(ಎಸ್)ನಲ್ಲಿ ಗೆದ್ದು ಬಿಜೆಪಿಗೆ ಹೋಗಿದ್ದು ಮೋಸ. ಕುಮಾರಸ್ವಾಮಿ ಬಿಜೆಪಿಗೆ ಮಾಡಿದ್ದು ಮೋಸ ಅಲ್ಲ. ಯಾಕೆಂದರೆ ಅಧಿಕಾರ ಹಂಚಿಕೆಯ ಒಪ್ಪಂದ ಮಾಡಿಕೊಂಡಿದ್ದು ಕುಮಾರಸ್ವಾಮಿ ಮತ್ತು ಯಡಿಯೂರಪ್ಪ. ಈ ಮಾತು ಮುರಿದರೆ ಜನರಿಗೆ ಹೇಗೆ ಮೋಸ ಮಾಡಿದ ಹಾಗಾಯ್ತು? ಅಂತ ಜಿ.ರಾಜಶೇಖರ್ ಅವರು ಕೇಳಿದ್ದು ಸರಿ.

ಬಿಜೆಪಿಯ ಹೆಸರಿನಲ್ಲಿ ಸ್ವರ್ಗವನ್ನೇ ತಂದರೂ ನಾನು ಅದನ್ನು ಒಪ್ಪುವುದಿಲ್ಲ. ವರ್ಗಾವಣೆ ಅದು ಐ.ಎ.ಎಸ್, ಐ.ಪಿ.ಎಸ್ ಗಳನ್ನೆಲ್ಲಾ ಯಾಕೆ ಅಷ್ಟೊಂದು ಮಾಡುತ್ತಿದ್ದಾರೆ!!?

ಹಾಸನ ಜಿಲ್ಲೆಯಲ್ಲಿ ಸೌಹಾರ್ದ ಜಾಥಾ ಹಾದು ಹೋದಾಗ ಭಜರಂಗಿ ಪಡೆಗಳು ಕಲ್ಲು ಕೈಲಿ ಹಿಡಿದು ಬಂದರು. ಆದರೆ ಶಾಂತಿ ಸೌಹಾರ್ದತೆಯ ರಕ್ಷಣೆಗೆ ಬದ್ಧರಾದವರು ವಿಚಲಿತರಾಗಲಿಲ್ಲ. ಹಾಸನ ಜಿಲ್ಲೆಯಿಂದ ಒಂದು ಪ್ರತ್ಯಕ್ಷ ವರದಿ

ಕೋಮುವಾದ ಭಯೋತ್ಪಾದನೆಗೆ ಪೂರಕ–ಪ್ರೇರಕ

ಕೋಮುವಾದ ಮತ್ತು ಭಯೋತ್ಪಾದನೆ ವಿರೋಧಿಸಿ, ಸರ್ವ ಜನಾಂಗದ ಶಾಂತಿಯ ತೋಟ ಕರ್ನಾಟಕದ ಸೌಹಾರ್ದ ಪರಂಪರೆಯನ್ನು ರಕ್ಷಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ರಾಜ್ಯಾದ್ಯಂತ ಸಂಘಟಿಸಿರುವ ನಾಲ್ಕು ಜಾಥಾಗಳಲ್ಲಿ ಸೂಫಿ ಸಂತರ ನಾಡಾದ ಬಾಬಾಬುಡನ್‌ಗಿರಿ (ಚಿಕ್ಕಮಗಳೂರು ಜಿಲ್ಲೆ)ಯಲ್ಲಿ ಡಿಸೆಂಬರ್ 8 ರಂದು ಉದ್ಘಾಟನೆಯಾದ ಜಾಥಾ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಚರಿಸಿ ಡಿಸೆಂಬರ್ 13, 14 ಮತ್ತು 16 ರಂದು ಹಾಸನ ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಯಿತು. ಡಿಸೆಂಬರ್ 13 ರಂದು ಬೇಲೂರಿನಲ್ಲಿ ಡಿಸೆಂಬರ್ 14 ರಂದು ಹಾಸನ, ಹಳೆಬೀಡು, ಡಿಸೆಂಬರ್ 15 ರಂದು ಅರೇಹಳ್ಳೀ, ಸಕಲೇಶಪುರ ಅರಸೀಕೆರೆಯಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಿತು. ಹಾಸನದಲ್ಲಿ ಬೈಕ್ ರ್‍ಯಾಲಿ, ಸಕಲೇಶಪುರದಲ್ಲಿ ಬೃಹತ್ ಮೆರವಣಿಗೆ ನಡೆಸಿತು.

ಜಾಥಾದ ನೇತೃತ್ವದ ವಹಿಸಿದ್ದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಮಾರುತಿ ಮಾನ್ಪಡೆ, ಡಿವೈಎಫ್‌ಐ ನ ರಾಜ್ಯ ಉಪಾಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ಸಿಪಿಐ(ಎಂ)ನ ರಾಜ್ಯಸಮಿತಿ ಸದಸ್ಯರಾದ ಕಾಂ.ಗಂಗುಲಪ್ಪ, ಕಾಂ.ವೆಂಕಟಸ್ವಾಮಿರೆಡ್ಡಿ ಜಾಥಾದ ಜೊತೆಯಲ್ಲಿದ್ದರು.

"ಕೋಮುವಾದವು ಭಯೋತ್ಪಾದನೆಗೆ ಪೂರಕ ಹಾಗೂ ಪ್ರೇರಕ"

ಹಾಸನದಲ್ಲಿ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ)ನ ರಾಜ್ಯಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಭಯೋತ್ಪಾದನೆಗೆ ಕೋಮುವಾದ ಪ್ರೇರಕವಾಗಿದ್ದು, ಭಯೋತ್ಪಾದನೆಯು ಕೋಮುವಾದಕ್ಕೆ ಪೂರಕವಾಗಿ ಬೆಳೆಯುತ್ತಿದೆ. ಒಂದಕ್ಕೊಂದು ಪೂರಕ ಹಾಗೂ ಪ್ರೇರಕವಾಗಿ ಬೆಳೆಯಲು ಪರಸ್ಪರ ಸಹಾಯ ಮಾಡುತ್ತವೆ. ಹೀಗಾಗಿ ಕೋಮುವಾದವೇ ಭಯೋತ್ಪಾದನೆಗೆ ಮೂಲವಾಗಿದ್ದು ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸಲು ಕೋಮುವಾದವನ್ನು ಮೊದಲು ಮಟ್ಟಹಾಕಬೇಕು ಎಂದು ಅಭಿಪ್ರಾಯಪಟ್ಟರು. ಡಿಸೆಂಬರ್ 1 ರಂದು ಮುಖ್ಯಮಂತ್ರಿಗಳು ಭಯೋತ್ಪಾದನೆಯನ್ನು ನಿಗ್ರಹಿಸಲು ಸರ್ವ ಪಕ್ಷಗಳ ಸಭೆ ಕರೆದಿದ್ದರು. ಅದರಲ್ಲಿ ಎಲ್ಲರೂ ಪೊಲೀಸ್ ವ್ಯವಸ್ಥೆ ಬಲಪಡಿಸಬೇಕು. ಅವರಿಗೆ ಅತ್ಯಾಧುನಿಕ ಶಸ್ತ್ರಗಳನ್ನು ಪೂರೈಸಬೇಕು ಎಂದೆಲ್ಲ ಸಲಹೆ ನೀಡಿದರು. ಆದರೆ ಅವರ್‍ಯಾರಿಗೂ ಭಯೋತ್ಪಾದನೆಯ ಮೂಲವೇ ಅರ್ಥವಾದಂತೆ ಇಲ್ಲ. ಆದರೆ ಸಿಪಿಐ(ಎಂ) ಭಯೋತ್ಪಾದನೆಯ ನಿಗ್ರಹಕ್ಕೆ ಕೋಮುವಾದವನ್ನು ಮಟ್ಟಹಾಕಬೇಕು. ಜೊತೆಗೆ ಜನರಿಂದಲೇ ಭಯೋತ್ಪಾದನೆ ಹಾಗೂ ಕೋಮುವಾದದ ವಿರುದ್ಧ ಹೋರಾಟ ಚಳುವಳಿ ನಡೆಯಬೇಕು. ಅದಕ್ಕಾಗಿ ಕೆಲಸ ಮಾಡುವಂತೆ ಸರ್ಕಾರಕ್ಕೆ ಸಲಹೆ ನೀಡಿದೆ ಎಂದರು. ಜಾಗತಿಕ ಮಹಾಯುದ್ಧಕ್ಕೆ ಕಾರಣವಾದ ಫ್ಯಾಸಿಸಂ ಯಹೂದಿಗಳನ್ನು ದ್ವೇಷಿಸಿ ಸಾಮೂಹಿಕ ಹತ್ಯೆ ಮಾಡಿತು. ನಂತರ ಯಹೂದಿಗಳ ರಕ್ಷಣೆಗಾಗಿ ಇಸ್ರೇಲ್ ಅನ್ನು ಸೃಷ್ಟಿಸಿ ಅದಕ್ಕೆ ಶಸ್ತ್ರಾಸ್ತ್ರಗಳು, ಅಣುಶಕ್ತಿ ಪೂರೈಕೆ ಮಾಡಿ, ಫ್ಯಾಲಸ್ತೇನ್ ಅನ್ನು ನಾಶ ಮಾಡಲು ಪ್ರಯತ್ನಿಸಲಾಯಿತು. ಅಲ್ಲಿ ಈಗ ಶಾಲೆಗೆ ಹೋದ ಮಗು ಮರಳಿ ಮನೆಗೆ ಬರುವುದಿಲ್ಲ. ಕಟ್ಟಿದ ಮನೆಯಲ್ಲಿ ವಾಸ ಮಾಡಲು ಆಗುವುದಿಲ್ಲ. ಆಸ್ಪತ್ರೆಗೆ ಹೋದವರು ಮನೆಗೆ ಮರಳುವ ಖಾತರಿಯಿಲ್ಲ. ಪ್ಯಾಲಸ್ತೇನಿಯರಿಗೆ ಸ್ವಂತ ತಾಯ್ನಾಡೇ ಇಲ್ಲ. ಹೀಗಿರುವಾಗ ಅವರು ಭಯೋತ್ಪಾದನೆಗೆ ಇಳಿಯದೇ ಇರಬೇಕು ಎಂದು ನಿರೀಕ್ಷಿಸಿದರೆ ಅದು ಹಾಗೆ ನಡೆಯಲು ಸಾಧ್ಯವೇ ಎಂದ ಅವರು ಭಯೋತ್ಪಾದನೆಗೆ ಕೋಮುವಾದ ಹೇಗೆ ಮೂಲ ಎಂದು ವಿವರಿಸಿದರು.

ನಾಜಿವಾದದ ಪ್ರೇರಣೆ ಪಡೆದ ಆರ್‌ಎಸ್‌ಎಸ್‌ನ ಕೋಮುವಾದ ಈ ದೇಶದ ವಿಭಜನೆಗೆ ಕಾರಣವಾಯಿತು. ತಿಲಕ್‌ರಂತಹವರು 2000 ವರ್ಷದ ಹಿಂದಿನ ಸುವರ್ಣ ಯುಗದ ಪ್ರತಿಪಾದನೆ ಮಾಡಿದರೆ, ಕೆಲವರು ಮೊಘಲ ಆಡಳಿತದ ಕಾಲದ ಸುವರ್ಣ ಯುಗದ ಪ್ರತಿಪಾದನೆ ಮಾಡಿದರು. ಕೊನೆಗೆ ಭಾರತ ಮತ್ತು ಪಾಕಿಸ್ತಾನ ಎಂದು ವಿಭಜನೆಯಾಯಿತು. ಧರ್ಮವನ್ನು ರಾಜಕೀಯ ಉದ್ದೇಶಕ್ಕೆ ಬಳಸಿದ ಪರಿಣಾಮವೇ ದೇಶದ ವಿಭಜನೆಯಾಗಿದೆ. ಇದೇ ಉದ್ದೇಶ ಇಟ್ಟುಕೊಂಡಿರುವ ಆರ್‌ಎಸ್‌ಎಸ್, ಬಿಜೆಪಿ, ವಿಹೆಚ್‌ಪಿ ಗಳು ಕೂಡ ಮತ್ತೊಂದು ದೇಶ ವಿಭಜನೆಗೆ ಕಾರಣವಾಗುತ್ತಾರೆ. ಆರ್‌ಎಸ್‌ಎಸ್, ವಿಹೆಚ್‌ಪಿಗಳು ಸಂವಿಧಾನೇತರ ಶಕ್ತಿಗಳಂತೆ ವರ್ತಿಸುತ್ತಿದ್ದು ಅದರ ರಾಜಕೀಯ ಮುಖ ಬಿಜೆಪಿಯು ಕೂಡ ಒಂದು ರಾಜಕೀಯ ಪಕ್ಷವಾಗಿಯಾದರೂ ಈ ದೇಶದ ಸಂವಿಧಾನಕ್ಕೆ ಬದ್ಧವಾಗಿಲ್ಲ ಎಂದರು. ಈ ದೇಶದ ಜಾತ್ಯಾತೀತ ನಿಲುವಿಗೆ ಬಿಜೆಪಿ ವಿರೋಧವಾಗಿದ್ದು, ಆದರೆ ಅದು ರಾಷ್ಟ್ರೀಯತೆಯ ಬಗ್ಗೆ ಮಾತನಾಡುತ್ತದೆ. ಅಂದರೆ ಅದು ಏಕಸಂಸ್ಕೃತಿ ಹಾಗೂ ಸಾಂಸ್ಕೃತಿಕ ರಾಷ್ಟ್ರೀಯತೆಯ ಕುರಿತು ನಿರ್ಧಾರಕ ಶಕ್ತಿಯಂತೆ ಮಾತನಾಡುತ್ತದೆ. ಇದು ದೇಶದ ಏಕತೆಗೆ ಅಪಾಯಕಾರಿಯಾದುದು. ಹಿಂದೂ ಕೋಮುವಾದಿಗಳು ಮುಸ್ಲಿಮರು, ಕ್ರೈಸ್ತರ ಮೇಲೆ ಅವರ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ಮಾಡುತ್ತಾರೆ. ಅವರೂ ಭಾರತೀಯರಲ್ಲವೇ ಎಂದು ಪ್ರಶ್ನಿಸಿದ ವಿಜೆಕೆ ನಾಯರ್ ಆರ್.ಎಸ್.ಎಸ್, ವಿಹೆಚ್‌ಪಿ, ಬಿಜೆಪಿ ಯುವರು ಎಂದೂ ಭಾರತೀಯರಾಗಿ ಯೋಚಿಸಲೇ ಇಲ್ಲ ಎಂದು ಅಭಿಪ್ರಾಯಪಟ್ಟರು.



ಬಸವಕಲ್ಯಾಣದಿಂದ ಹೊರಟ ಸೌಹಾರ್ದ ಜಾಥಾ ಬೀದರ್‌ಗೆ ಬಂದಾಗ ಸಭೆಯಲ್ಲಿ ಮುಸ್ಲಿಂ ಸಮುದಾಯದ ಪರವಾಗಿ ಸೌಹಾರ್ದ ಪರ ಮಾತು.

1982ರವರೆಗೂ ಆರ್‌ಎಸ್‌ಎಸ್‌ನ ವಾರ್ಷಿಕ ನಿರ್ಣಯಗಳಲ್ಲಿ ಬಾಬರಿ ಮಸೀದಿ ಕೆಡವಲು ತೀರ್ಮಾನಿಸಿಲ್ಲ. ವಾರಣಾಸಿ, ಮಥುರೆಯ ಮಸೀದಿಗಳನ್ನು ನೆಲಸಮ ಮಾಡಲು ಉದ್ದೇಶಿಸಲಾಗಿತ್ತು. ಆದರೆ ರಾಜ್ ನಾರಾಯಣ್ ನೇತೃತ್ವದಲ್ಲಿ ದ್ವಿಸದಸ್ಯತ್ವದ ವಿರುದ್ಧ ಚಳುವಳಿಯಾದಾಗ ಹೆಚ್ಚಿನ ಸ್ಥಾನ ಪಡೆಯಲು ಬಾಬರಿ ಮಸೀದಿ ಕೆಡವಿ ರಾಮಮಂದಿರ ಕಟ್ಟಲು ಆರ್‌ಎಸ್‌ಎಸ್ ನಿರ್ಣಯಿಸಿತು. ಆನಂತರವೇ ಭಾರತದಲ್ಲಿ ಕೋಮುವಾದ, ನಂತರದಲ್ಲಿ ಅದರಿಂದ ಭಯೋತ್ಪಾದನೆ ತೀವ್ರಗೊಂಡು ಬೆಳೆಯಿತು. ಆದರೆ ಭಯೋತ್ಪಾದನೆ, ಹಿಂದೂ- ಮುಸ್ಲಿಂ ಎಂದು ಯಾವುದೇ ಧರ್ಮವಿಲ್ಲ. ಆದರೆ ಭಯೋತ್ಪಾದನೆಗೆ ಧರ್ಮಾಂಧತೆ ಕಾರಣ ಎಂದು ಒತ್ತಿ ಒತ್ತಿ ಹೇಳಿದರು.

ಬಾಂಬೆಯಲ್ಲಿ ಭಯೋತ್ಪಾದಕ ದಾಳಿಯ ನಂತರ ರಾಜಕಾರಣದ ಬಗ್ಗೆ ತಿರಸ್ಕಾರ ಬೆಳೆದಿದೆ. ಸಂಸದೀಯ ಮಾರ್ಗಕ್ಕೆ ವಿರೋಧ ಹುಟ್ಟಿಕೊಂಡಿದೆ. ಆದರೆ ಇದು ಪ್ರಜಾಪ್ರಭುತ್ವದ ವಿರೋಧವಾಗಿ ಬೆಳೆಯುವ ಅಪಾಯವಿದೆ. ಏಕೆಂದರೆ ಕಾನೂನುಗಳನ್ನು ಮೀರುವ ಕಾನೂನುಗಳ ರಚಿಸುವ ಬಲವನ್ನು ಹೊಂದಿರುವ ಅಧಿಕಾರಶಾಹಿಯು ಇದನ್ನು ದುರುಪಯೋಗಪಡಿಸಿಕೊಳ್ಳುವ ಅವಕಾಶವಿದೆ. ಪ್ರಜಾಪ್ರಭುತ್ವ ರಕ್ಷಣೆಗಾಗಿ ಚಳುವಳಿಗಳನ್ನು ನಡೆಸಬೇಕಾಗುತ್ತದೆ. ಹಾಗಾಗಿ ಜನಸಂಸ್ಕೃತಿಯ ರಕ್ಷಣೆಗಾಗಿ ಜನ ಚಳುವಳಿಯನ್ನು ಕಟ್ಟುವ ಸಲುವಾಗಿ ಈ ಜಾಥಾಗಳನ್ನು ಸಿಪಿಐ(ಎಂ) ಸಂಘಟಿಸಲಾಗಿದ್ದು, ಬೆಂಬಲಿಸಿ ಯಶಸ್ವಿಗೊಳಿ ಎಂದು ಮನವಿ ಮಾಡಿದರು.

ಭಯೋತ್ಪಾದನೆ, ಕೋಮುವಾದದ ನಿಗ್ರಹಕ್ಕೆ ಜನಚಳುವಳಿಯೇ ಪ್ರಬಲ ಅಸ್ತ್ರ

ಕಾಂ.ಮಾರುತಿ ಮಾನ್ಪಡೆ

ಸೂಫಿ ಸಂತರ ನಾಡಿನಿಂದ ಈ ನಾಡಿನ ಸೌಹಾರ್ದ ಪರಂಪರೆಯನ್ನು ರಕ್ಷಿಸಲು ಸಿಪಿಐ(ಎಂ)ನ ಜಾಥಾ ಹೊರಟಿದೆ. ಬಿಜೆಪಿಯು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಸಂವಿಧಾನವನ್ನೇ ಬುಡಮೇಲು ಮಾಡುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ.

ತಿಪಟೂರಿನಲ್ಲಿ ಗಣೇಶ ಉತ್ಸವದ ಸಂದರ್ಭದಲ್ಲಿ ಸುಮಾರು 108 ಅಂಗಡಿಗಳಿಗೆ ಬೆಂಕಿ ಹಾಕಲಾಗಿದೆ. ಈ ಅಂಗಡಿಗಳೆಲ್ಲವೂ ಮುಸ್ಲೀಮರಿಗೆ ಸೇರಿದ್ದು. ಬೆಂಕಿ ಹಚ್ಚುವ ಕೆಲಸಕ್ಕೆ ನೇತೃತ್ವ ವಹಿಸಿದ್ದು ತಿಪಟೂರಿನ ಬಿಜೆಪಿ ಶಾಸಕ. ಆದರೆ ಅವನ ಮೇಲೆ ಯಾವುದೇ ದೂರು ದಾಖಲಾಗಿಲ್ಲ.

2. ರಾಯಚೂರಿನಲ್ಲಿ ಗಣೇಶ ಪೆಂಡಾಲ್‌ಗೆ ಬೆಂಕಿ ಹಾಕಿದ್ದಾರೆ ಎಂದು ಮುಸ್ಲಿಂರ ಮೇಲೆ ದಾಳಿ ಮಾಡಲಾಯಿತು. ಪೊಲೀಸ್ ಉನ್ನತಾಧಿಕಾರಿಗಳ ಪ್ರಕಾರವೇ ಇದು ಶಾರ್ಟ್ ಸರ್ಕ್ಯೂಟ್ ನಿಂದಾಗಿದ್ದು ಎಂದರೂ ಕೇಳದೇ ಮುಸ್ಲೀಮರ ಮೇಲೆ ದಾಳಿ ಮಾಡಲಾಯಿತು. ಆದರೂ ಪೊಲೀಸರು ಕ್ರಮ ತೆಗೆದುಕೊಳ್ಳಲು ಅಸಹಾಯಕರಾಗಿದ್ದಾರೆ.

3) ದಾವಣಗೆರೆಯಲ್ಲಿ ಬಾಡಾ ಚರ್ಚ್‌ಗಳ ಮೇಲೆ ದಾಳಿ ಮಾಡಲಾಯಿತು. ಆ ದಾಳಿಯ ನೇತೃತ್ವ ವಹಿಸಿದ ಹಿಂದೂ ಜಾಗರಣ ವೇದಿಕೆಯ ರಾಜ್ಯ ಸಂಚಾಲಕ ಜಗದೀಶ ಕಾರಂತರನ್ನು ಆರೋಪಿಯಾಗಿಸಿದರೂ ಬಂಧಿಸದೆ ಹಾಗೆ ಬಿಡಲಾಗಿದೆ.

4) ಬೆಂಗಳೂರಿನ ಮಸೀದಿಗಳ ಮುಂದೆ ಹಂದಿ ಮಾಂಸ, ತಲೆಗಳನ್ನು ಎಸೆದವರು ಶ್ರೀರಾಮಸೇನೆ ಎಂದು ತಿಳಿದು ಬಂಧಿಸಿದರೂ ಕಠಿಣ ಕ್ರಮವಹಿಸಿಲ್ಲ.

ಮೇಲಿನ ನಾಲ್ಕು ಘಟನೆಗಳ ಜೊತೆಗೆ ರಾಜ್ಯಾದ್ಯಂತ ಚರ್ಚ್‌ಗಳ ಮೇಲೆ ದಾಳಿ ಮಾಡಿದಾಗಲೂ ಪೊಲೀಸರು ಸೇರಿದಂತೆ ಸರ್ಕಾರ

ನವಾಗಿತ್ತು. ಕಲಂ 355ನ್ನು ರಿಗೊಳಿಸುವುದೆಂದು ಕೇಂದ್ರ ಸರ್ಕಾರ ಹೇಳಿದ ತರವೇ ಕೆಲವರನ್ನು ಬಂಧಿಸುವ ನಾಟಕವಾಡಿತು. ದರೆ ವಿಜಾಪುರದಲ್ಲಿ ಕಿಡಿಗೇಡಿಗಳು ಪಾಕ್ ಜವನ್ನು ಹಾರಿಸಿದರೆಂದು ಕ್ರಮ ಕೈಗೊಳ್ಳಲು ತ್ಸುಕರಾದರು. ಕಿಡಿಗೇಡಿಗಳ ಮೇಲೆ ಕ್ರಮ ಳ್ಳಲು ಯಾವುದೇ ವಿರೋಧವಿಲ್ಲ. ಆದರೆ ನೂನನ್ನು ಪಕ್ಷಪಾತವಾಗಿ ಬಳಸುವುದು ಎಷ್ಟು ಎಂದು ಮಾನ್ಪಡೆ ಪ್ರಶ್ನೆ ಮಾಡಿದರು.

ಈ ರೀತಿ ಬಿಜೆಪಿಯು ಸೌಹಾರ್ದತೆಯನ್ನು ಳು ಮಾಡುವಾಗ ವಿರೋಧಪಕ್ಷವಾಗಿರುವ ಂಗ್ರೆಸ್ ಇದನ್ನು ವಿರೋಧಿಸಿದರೆ ಸಂಖ್ಯಾತರು ಬೇಸರ ಮಾಡಿಕೊಳ್ಳುವರೆಂಬ ವನೆಯಿಂದ ಸುಮ್ಮನಿದೆ. ಈ ದೇಶದ ಸಂಖ್ಯಾತರು ಬಿಜೆಪಿಯು ಧರ್ಮವನ್ನು ಜಕೀಯ ಉದ್ದೇಶಕ್ಕಾಗಿ ಬಳಸುವುದನ್ನು ಪ್ಪಿಕೊಂಡಿಲ್ಲ ಎಂಬ ಸತ್ಯ ಕಾಂಗ್ರೆಸ್‌ಗೆ ಗೊತ್ತಿಲ್ಲ. ಗಾಗಿ ಕಾಂಗ್ರೆಸ್‌ಗೆ ಬಿಜೆಪಿಯನ್ನು ಯವಾಗಿಯೂ ಎದುರಿಸುವ ಶಕ್ತಿ ಇಲ್ಲ. ಲಿಗೆ ಉಗ್ರವಾದವನ್ನು ಪೊಲೀಸರಿಂದ ದುರಿಸುತ್ತೇವೆ ಎಂದು ಹೇಳುತ್ತಾರೆ. ಆದರೆ ಅದು ಧ್ಯವಿಲ್ಲ ಎಂಬುದು ಸಿಪಿಐ(ಎಂ)ನ ನಿಲುವು. ಗ್ರವಾದ ಭಯೋತ್ಪಾದನೆಯನ್ನು ಜನ ಳುವಳಿಯಿಂದಲೇ ಎದುರಿಸಲು ಸಾಧ್ಯ. ಅದು ಾತ್ರವೇ ಪ್ರಬಲ ಅಸ್ತ್ರವಾಗಬಲ್ಲದು ಎಂದು ಾನ್ಪಡೆ ವಿವರಿಸಿದರು.

1993ರ ಬಾಂಬೆ ಗಲಭೆಯಲ್ಲಿ ಸಾವಿರಾರು ುಸ್ಲಿಂರನ್ನು ಕಗ್ಗೊಲೆ ಮಾಡಲಾಯಿತು. ನಂತರ ಂಗ್ರೆಸ್‌ನವರೇ ಶ್ರೀಕೃಷ್ಣ ಆಯೋಗ ರಚಿಸಿದರು. ದರೆ ಅದರ ವರದಿಯನ್ನು ಜಾರಿಗೊಳಿಸುವ ೈರ್ಯ ಅವರಲ್ಲಿಲ್ಲ. ಹೀಗಾಗಿಯೇ ಹಾರಾಷ್ಟ್ರದಲ್ಲಿ ಶಿವಸೇನೆ, ಮಹಾರಾಷ್ಟ್ರ ವನಿರ್ಮಾಣ ಸೇನೆ ಮುಂತಾದವರ ಂಡಾಟಿಕೆಗಳು ಹೆಚ್ಚಾಗಿವೆ.

ಾರ ಹಕ್ಕಿನ ಮೇಲೆ ದಾಳಿ

ನಗಳ ಮಾಂಸವನ್ನು ತಿನ್ನಬಾರದೆಂದು ದ್ದಗಲಕ್ಕೂ ಗಲಭೆ ಎಬ್ಬಿಸಿ ಆಹಾರದ ಹಕ್ಕಿನ ಲೆ ದಾಳಿ ಮಾಡಲಾಗುತ್ತಿದೆ. 1.5 ಕೋಟಿಯಷ್ಟು ನರ ಆಹಾರವಾಗಿರುವ ದನದ ಮಾಂಸ ಯೋಗ್ಯವಾಗಿಲ್ಲ ಎಂದು ಗಲಾಟೆ ಾಡುತ್ತಿರುವವರಿಗೆ ಹೇಗೆ ಗೊತ್ತು. ಅವರಿಗೆ ಅದು ಯೋಗ್ಯವಾಗಿಲ್ಲ ಎಂದು. ಒಳ್ಳೆಯ ಮಾಂಸ ಅಲ್ಲ ದ ಮಾರುತಿ ಮಾನ್ಪಡೆಯವರು ಇದು ದೊಡ್ಡ ಾರವಾಗಿದೆ ಎಂದರು.

ಸರ್ವರಿಗೂ ಒಳ್ಳೆಯದಾಗಲೆಂದು ಹರಸುವ ಶರು, ಸಾಧುಗಳು, ಮಹಾಧೀಶರು, ಧರ್ಮಗಳ ುವ ಬೆಂಕಿಹಚ್ಚುವ ಆರ್‌ಎಸ್‌ಎಸ್, ವಿಹೆಚ್‌ಪಿ, ಜೆಪಿಯವರು ಸಂಘಟಿಸುವ ಯಾವುದೇ ಮಾವೇಶಗಳಿಗೆ ಹೋಗಬಾರದೆಂದು ಮನವಿ ಾಡಿದರು.

ಂದಕ್ಕೊಂದು ಪೋಷಣೆ

ಮುಖ್ಯ ಅತಿಥಿಗಳು ಭಾಗವಹಿಸಿ ಮಾತನಾಡಿದ ಸಾಹಿತಿಗಳಾದ ಭಾನು ಮುಷ್ತಾಕ್ ೋಮುವಾದ ಮತ್ತು ಭಯೋತ್ಪಾದನೆಯು ಒಂದೇ ಾಣ್ಯದ ಎರಡು ಮುಖಗಳಾಗಿದ್ದು, ಒಂದಕ್ಕೊಂದು ೋಷಿಸುತ್ತವೆ ಎಂದು ಹೇಳಿದರು.



ಬೀದರ್ ಸಭೆಯಲ್ಲಿ ಸಿಖ್ ಧರ್ಮ ಗುರುಗಳ ಸೌಹಾರ್ದ ಪರ ಮಾತು

ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಒಬ್ಬ ಪತ್ರಕರ್ತ 'ಭಯೋತ್ಪಾದನೆಯು ಮುಸ್ಲಿಮರ ಪ್ರಶ್ನೆಯಾಗಿದ್ದು, ಸಾರ್ವಜನಿಕ ಸಮಸ್ಯೆ ಅಲ್ಲ' ಎಂದು ವಾದಿಸಿದ್ದರು. ಈಗ ಭಯೋತ್ಪಾದನೆ ಯಾರ ಪ್ರಶ್ನೆ ಎಂಬುದು ಈಗ ಅವರಿಗೆ ಅರ್ಥವಾಗಿರಬಹುದು ಎಂದು ಮಾರ್ಮಿಕವಾಗಿ ನುಡಿದರು. ಭಯೋತ್ಪಾದನೆಯ ನಿಗ್ರಹಕ್ಕೆ ಕಾನೂನಿನ ಅವಶ್ಯಕತೆ ಇರುವಂತೆಯೇ ಕೋಮುವಾದದ ನಿಗ್ರಹಕ್ಕೂ ಒಂದು ಕಾನೂನಿನ ಅವಶ್ಯಕತೆ ಇದೆ. ಮುಸ್ಲೀಮರ ಮೇಲೆ ಅಶ್ಲೀಲ ಘೋಷಣೆಗಳಿಂದ, ಆ ಘೋಷಣೆಗಳನ್ನು ಹೇಳಿಕೊಟ್ಟ ಸಿ.ಟಿ. ರವಿಗೆ ಕೇಳಿಸಿಕೊಳ್ಳಲಾಗದೆ ಕಪಾಳಮೋಕ್ಷ ಮಾಡಿದ್ದಾರೆಂದರೆ ಜನಸಾಮಾನ್ಯರು ಉದ್ರೇಕಗೊಳ್ಳದೆ ಇರುತ್ತಾರೆಯೇ? ಇದು ಭಯೋತ್ಪಾದನೆಗೆ ಉಗ್ರವಾದಕ್ಕೆ ಕಾರಣವಲ್ಲವೇ ಎಂದ ಭಾನು ಮುಷ್ತಾಕ್, ಗೊಬ್ಬರ ಕೇಳಿದ ರೈತರ ಮೇಲೆ ಗೋಲಿಬಾರ್ ಮಾಡಿಸಿದ್ದಕ್ಕೆ, ಕ್ರೈಸ್ತರ ಮೇಲೆ ದಾಳಿ ಮಾಡಿಸಿದ್ದಕ್ಕೆ ಡಾಕ್ಟರೇಟ್ ಪಡೆಯಬಹುದು. ಇದು ಯಾವ ಅಂತಃಸಾಕ್ಷಿ ಎಂದ ಅವರು ಜನರ ಮುಂದೆ ಬಿಜೆಪಿಯು ಪದೇ ಪದೇ ಬೆತ್ತಲಾಗುತ್ತಿದೆ. ಜನ ಪ್ರಜ್ಞಾವಂತರಾಗಿ ಪಾಠ ಕಲಿಸಬೇಕು ಎಂದರು.

ಮಾಧ್ಯಮಗಳು ಏಕಮುಖಿಯಾಗಿದ್ದು, ಅವು ವೃತ್ತಿಧರ್ಮಕ್ಕೆ ಪ್ರಾಮುಖ್ಯತೆ ನೀಡಬೇಕು. ಭಯೋತ್ಪಾದಕರು ಮುಸ್ಲಿಮರಾದಾದರೆ ಈ ದೇಶದ ಕುರಿತ ಬದ್ಧತೆಯನ್ನು ಮುಸ್ಲಿಮರು ಸ್ಪಷ್ಟಪಡಿಸಬೇಕು. ಆದರೆ ಅವರು ಹಿಂದುಗಳಾದರೆ ಅವರಿಗೆ ಅಂತಹ ಒತ್ತಡ ಯಾಕಿಲ್ಲ ಎಂಬು ಆತಂಕದಿಂದಲೇ ಪಕ್ಷಪಾತವನ್ನು ಖಂಡಿಸಿದರು.

ಮನಸ್ಸುಗಳನ್ನು, ಭಾವನೆಗಳನ್ನು ಕಟ್ಟುವ ಇಂತಹ ಕಾರ್ಯಕ್ರಮಗಳಿಗೆ ಕೆಲಸಕ್ಕೆ ನಮ್ಮ ಬೆಂಬಲ ಸದಾ ಇರುತ್ತದೆ ಎಂದು ಭಾನುಮುಷ್ತಾಕ್ ಹೇಳಿದರು.

ಆರ್.ಎಸ್.ಎಸ್-ಭಜರಂಗಿಗಳಿಂದ ಕಿರಿ ಕಿರಿ

ಮುಸ್ಲಿಂ, ಕ್ರೈಸ್ತರ ವಿರುದ್ಧ ಕೆಲಸ ಮಾಡಿ, ಪ್ರಚೋದಿಸಿ ಅವರ ವಿರುದ್ಧ ಹಿಂದೂ ಧರ್ಮದ ರಕ್ಷಣೆಗಾಗಿ ಎಂದು ದೌರ್ಜನ್ಯ ಎಸಗುತ್ತಿದ್ದ ಆರ್‌ಎಸ್‌ಎಸ್, ಭಜರಂಗಿಗಳು ಸಿಪಿಐ(ಎಂ)ನ ಈ ಜಾಥಾದಿಂದಾಗಿ ಇನ್ನು ಮುಂದೆ ಅಂತಹ ಕೆಲಸಗಳಿಗೆ ಬೆಂಬಲ ಸಿಗದೆ ಹೋಗುತ್ತದೆ ಎಂದು ಸಾರ್ವಜನಿಕ ಸಭೆಗೆ ಸೇರಿದ್ದ ಜನಸ್ತೋಮವನ್ನು ನೋಡಿ ಅನಿಸಿತ್ತೋ ಏನೋ! ಸಕಲೇಶಪುರದ ಪುರಭವನದ ಎದುರಿನಲ್ಲಿ ನಡೆಯುತ್ತಿದ್ದ ಸಾರ್ವಜನಿಕ ಸಭೆಯಲ್ಲಿ ಜಾಥಾದ ನೇತೃತ್ವ ವಹಿಸಿದ್ದ ಮಾರುತಿ ಮಾನ್ಪಡೆಯವರು ಮಾತನಾಡುತ್ತಿದ್ದಾಗ 18 ಜನರಿದ್ದ ಆರ್‌ಎಸ್‌ಎಸ್ ಭಜರಂಗಿಗಳು ಕಿರಿಕಿರಿ ಮಾಡಲು ಪ್ರಾರಂಭಿಸಿದರು. ಆಹಾರದ ಹಕ್ಕಿನ ಮೇಲಿನ ದಾಳಿಯ ವಿಷಯದಲ್ಲಿ ನಿಜಾಂಶವನ್ನು ವಿವರಿಸಿದಾಗ ತೀರಾ ಹತಾಶರಾದ ಅವರು ವೇದಿಕೆ ಬಳಿ ಬರಲು ಪ್ರಯತ್ನಿಸಿದರು. ಮಾನ್ಪಡೆಯವರ ಮಾತಿಗೆ ಅಡ್ಡಿಯನ್ನುಂಟುಮಾಡಲು ಮುಂದಾದರು. ಜಾಥಾದ ಕಲಾವಿದರು ಹಾಗೂ ಸಾರ್ವಜನಿಕರು ತಡೆಯೊಡ್ಡಿದರು. ಅದರಿಂದ ವಿಚಲಿತರಾಗದ ಮಾನ್ಪಡೆ ಮಾತನ್ನು ಇನ್ನಷ್ಟು ತೀಕ್ಷ್ಣಗೊಳಿಸಿದಾಗ ಕುದಿದ ಕೇಸರಿ ಪಡೆ ಕಲ್ಲನ್ನು ಜೋಡಿಸಿಕೊಳ್ಳುತ್ತಿದ್ದುದನ್ನು ನೋಡಿ ಸಾರ್ವಜನಿಕರು ಪೊಲೀಸರಿಗೆ ಸುದ್ದಿ ಮುಟ್ಟಿಸಿದರು. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು ಸಾರ್ವಜನಿಕ ಸಭೆಗೆ ರಕ್ಷಣೆ ನೀಡಿ ಕೇಸರಿ ಬಂಟರನ್ನು ದೂರಕ್ಕೆ ಕಳುಹಿಸಿದರು. ಸಕಲೇಶಪುರದ ರೈತ ಮುಖಂಡ ಸ.ಬ.ಸೋಮಶೇಖರ್ ಯಡಿಯೂರಪ್ಪನಿಗೆ ಡಾಕ್ಟರೇಟ್ ಕೊಟ್ಟಿದ್ದನ್ನು ಖಂಡಿಸಿ ಕೊಲೆಗಡುಕನ ರಾಷ್ಟ್ರದಿಂದ ಕೊಲೆಗಡುಕನಿಗೆ ಡಾಕ್ಟರೇಟ್ ಸನ್ಮಾನ ಮಾಡಿದ್ದು ಇನ್ನಷ್ಟು ಕೊಲೆ ಮಾಡಲು ಶಸ್ತ್ರಗಳು ಹಾಗೂ ಅನುದಾನ ನೀಡಲಿದ್ದಾನೆ' ಎಂದಿದ್ದು ಅವರಲ್ಲಿ ಮತ್ತೊಮ್ಮೆ ಹತಾಶೆ ಮೂಡಿಸಿ ಇನ್ನೊಂದು ಸಾರಿ ವೇದಿಕೆಗೆ ಬರಲು ಪ್ರಯತ್ನಿಸಿದರು. ಆದರೆ ಪೊಲೀಸ್ ಅವರನ್ನು ವ್ಯಾನಿನಲ್ಲಿ ಕೂರಿಸಿಕೊಂಡು 'ಪಾಠ' ಮಾಡಿ ಕಾರ್ಯಕ್ರಮ ಮುಗಿದ ನಂತರ ಬಿಡುಗಡೆ ಮಾಡಿದರು.



ದುಡಿಯುವ ಕೈಗಳಿಗೆ ಕೆಲಸ ನೀಡದಿದ್ರೆ ಅವರು ಲಾಂಗು, ಬಂದೂಕು ಬಾಂಬು ಹಿಡಿಯದೆ ಇನ್ನೇನಾಡ್ತಾರೆ' ಧರ್ಮೇಶ್

ಹಾಸನ ಸ್ಥಳೀಯ ಸಮಿತಿ ಕಾರ್ಯದರ್ಶಿ ದುಡಿಯಲು ಎಲ್ಲ ಅರ್ಹತೆ, ಆಸಕ್ತಿ ಇರುವ ಕೈಗಳಿಗೆ ಕೆಲಸ ನೀಡದಿದ್ರೆ, ಸಿಪಿಐ(ಎಂ) ಬದುಕಲು ಯಾವುದಾದರೊಂದು ದಾರಿ ಆರಿಸಿಕೊಳ್ಳುವ ಸಂದಿಗ್ಧತೆಯಲ್ಲಿದ್ದಾಗ ಸಮಾಜದಲ್ಲಿ ವಿದ್ರೋಹಿಗಳು ಅವರನ್ನು ಸಮಾಜ ವಿರೋಧಿ ಕೃತ್ಯಗಳಿಗೆ ಬಳಸಿಕೊಳ್ಳುತ್ತಾರೆ ಎಂದು ಜಾಥಾದ ಸಾರ್ವಜನಿಕ ಸಭೆಗಳ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ)ನ ಸ್ಥಳೀಯ ಸಮಿತಿ ಕಾರ್ಯದರ್ಶಿ ಕಾಂ.ಧರ್ಮೇಶ್ ಅಭಿಪ್ರಾಯಪಟ್ಟರು. ದುಡಿಯುವ ಜನಕ್ಕೆ ಒಂದೇ ಧರ್ಮ ಇದ್ದು ಅವರು ಯಾವುದೇ ಮೂಲಭೂತ ವಾದಕ್ಕೆ ಅವಕಾಶ ನೀಡುವುದಿಲ್ಲ ಎಂದರು. ಕೋಮುವಾದದ ಮೂಲಕ ಜನ ಚಳುವಳಿಯನ್ನು ವಿಫಲಗೊಳಿಸುವ, ದುರ್ಬಲಗೊಳಿಸುವ ಹುನ್ನಾರ ಎಲ್ಲ ಧರ್ಮಗಳ ಕೋಮುವಾದಿಗಳದು ಎಂದು ಟೀಕಿಸಿದ ಧರ್ಮೇಶ್, ಕೋಮುವಾದಿಗಳ ಹುನ್ನಾರ ವಿಫಲಗೊಳಿಸಲು ಎಲ್ಲ ಜನರು ಐಕ್ಯ ಹೋರಾಟ ನಡೆಸಬೇಕು. ಅಂತಹ ಜನಚಳುವಳಿಯ ಸಂಘಟನೆಗಾಗಿಯೇ ಸಿಪಿಐ(ಎಂ) ಜಾಥಾಗಳನ್ನು ಸಂಘಟಿಸುತ್ತಿದೆ ಎಂದು ವಿವರಿಸಿದರು.

'ಭಾರತ ಬಲಪಡಿಸುವ ಶಿಕ್ಷಣ ಮತ್ತು ಉದ್ಯೋಗ ನೀತಿ ಬೇಕು'

ಕಾಂ.ಬಿ.ರಾಜಶೇಖರಮೂರ್ತಿ, ಡಿವೈಎಫ್‌ಐ ರಾಜ್ಯ ಉಪಾಧ್ಯಕ್ಷರು, ಯುವಜನರನ್ನು ತೊಡಗಿಸಿ ಭಾರತವನ್ನು ಬಲಪಡಿಸಲು ಯೋಜಿತ ಶಿಕ್ಷಣ ಹಾಗೂ ಉದ್ಯೋಗ ನೀತಿ ಬೇಕಾಗಿದೆ. ಬ್ರಿಟೀಷರ ಕಾಲದ ನೀತಿಗಳು ಸಮಕಾಲೀನವಾಗಿಲ್ಲ. ಆದುದರಿಂದ ಈ ವ್ಯವಸ್ಥೆಯ ವಿರುದ್ಧ ಸಹಜವಾದ ಯುವಜನರ ಮನಸ್ಥಿತಿಯನ್ನು ವಿಚ್ಛಿದ್ರಕಾರಿ ಶಕ್ತಿಗಳು ದುರುಪಯೋಗ ಮಾಡಿಕೊಳ್ಳುತ್ತಿವೆ. ಮಲೆನಾಡಿನಲ್ಲಿ ನಕ್ಸಲರನ್ನು ಹತ್ಯೆ ಮಾಡಿದರೂ ಕೂಡ ಪ್ರತೀಕಾರವಾಗಿ ಅವರು ಮತ್ತೊಬ್ಬರನ್ನು ಹತ್ಯೆ ಮಾಡುತ್ತಾರೆ. ಪ್ರತಿಯಾಗಿ ಹಿಂಸೆಯಾಗುತ್ತದೆ. ಹಿಂಸೆ ಎಂದೂ ಉತ್ತರವಾಗದೇ ಅದು ಹಿಂಸೆಯನ್ನು ಪುನರುತ್ಪಾದಿಸುತ್ತದೆ. ಆದುದರಿಂದ ಭಾರತವನ್ನು ಬಲಪಡಿಸಲು, ಕೋಮುವಾದ ಮತ್ತು ಭಯೋತ್ಪಾದನೆಯನ್ನು ಪಡೆಯಲು ಶಿಕ್ಷಣ ಹಾಗೂ ಉದ್ಯೋಗ ನೀತಿಯು ಸ್ಪಷ್ಟವಾಗಿದ್ದು ಜಾರಿಯಾಗಬೇಕಾಗಿದೆ ಎಂದರು.

ಜಾಥಾದ ಕಲಾವಿದರು ಜಾಥಾದ ಕಾರ್ಯಕ್ರಮಗಳಿಗೆ ಹಾಡಿನ ಮೂಲಕ ಜನರನ್ನು ಸ್ವಾಗತಿಸಿ, ಹಾಡಿನ ಮೂಲಕವೇ ಜಾಥಾದ ಉದ್ದೇಶಗಳನ್ನು ಹೇಳುತ್ತಿದ್ದರು.

ಸಿಪಿಐ(ಎಂ)ನ ಜಾಥಾದ ಸಂದೇಶ ಜನರನ್ನು ತಟ್ಟಿದೆ ಅನಿಸಿತು. ಬೆಂಕಿ ಹಚ್ಚುವ ಮೂಲಭೂತವಾದಿಗಳಿಂದ ಬೇಸರವಾಗಿದ್ದ ಜನರಿಗೆ ಸಿಪಿಐ(ಎಂ) ಒಂದು ಸಮರ್ಥವಾಗಿ ಕೋಮುವಾದ ಹಾಗೂ ಭಯೋತ್ಪಾದನೆಯನ್ನು ಎದುರಿಸಲು ಸ್ಪಷ್ಟತೆಯನ್ನು ಹೊಂದಿದೆ ಎಂದು ಭರವಸೆ ಮೂಡಿಸಿತು.

ಲಿಂಗರಾಜು ಬಿ.ಎಸ್
ಹಾಸನ

ನಿಡುಮಾಮಿಡಿ ಮಾನವಧರ್ಮ ಪೀಠದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಗಳು ಸಾಮಾಜಿಕ ನ್ಯಾಯದ ಪರವಾದ ಮತ್ತು ಜೀವ ವಿರೋಧಿ ಕೋಮುವಾದವನ್ನು ವಿರೋಧಿಸುವ ತಮ್ಮ ಪ್ರಖರ ವಿಚಾರಗಳಿಂದಲೇ ಖ್ಯಾತರಾದವರು. ಸೌಹಾರ್ದ ಜಾಥಾಗಳು ನಾಡಿನಾದ್ಯಂತ ಸಂಚರಿಸುತ್ತಿರುವ ಈ ಹೊತ್ತಿನಲ್ಲಿ ಜನಶಕ್ತಿ ಓದುಗರಿಗಾಗಿ ಒಂದು ಕಿರು ಸಂದರ್ಶನ.



ಸಂದರ್ಶಕರು: **ಆರ್.ರಾಮಕೃಷ್ಣ**

'ಕೋಮುವಾದ ದೇಶಪ್ರೇಮವಲ್ಲ ಭಯೋತ್ಪಾದನೆ ಧರ್ಮನಿಷ್ಠೆಯಲ್ಲ'

ಪ್ರಶ್ನೆ: ನಾವಿಂದು ಕಾಣುತ್ತಿರುವ ಭಯೋತ್ಪಾದನೆಯ ಮೂಲವೇನು?

ಭಯೋತ್ಪಾದನೆ ಅದೊಂದು ಜಾಗತಿಕ ಸಮಸ್ಯೆ. ಭಯೋತ್ಪಾದನೆಗೆ ಮೂಲ ಮುಸ್ಲೀಮರಲ್ಲ. ಅಮೇರಿಕ. ಅಮೇರಿಕಾದ ಸಾಮ್ರಾಜ್ಯಶಾಹಿಯ ಸಾಮಾಜಿಕ, ಆರ್ಥಿಕ, ರಾಜಕೀಯ ನಿಲುವುಗಳು ಭಯೋತ್ಪಾದನೆ ಜಾಗತಿಕ ವ್ಯಾಪ್ತಿಗೊಳ್ಳಲು ಪ್ರಮುಖ ಕಾರಣ. ಅಮೇರಿಕಾದ ಈ ನಿಲುವು ಬದಲಾಗುವವರೆಗೆ ಭಯೋತ್ಪಾದನೆಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬರುವುದಿಲ್ಲ. ಧಾರ್ಮಿಕ ಮುಖವಾಡ ಧರಿಸಿ, ನಡೆಯುತ್ತಿರುವ ಭಯೋತ್ಪಾದನೆಯ ಮೂಲ ಅಮೇರಿಕಾದ ಆರ್ಥಿಕ, ರಾಜಕೀಯ ಭಯೋತ್ಪಾದನೆ. ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ ಭಯೋತ್ಪಾದನೆಯ ವಾಸ್ತವತೆ ಅರ್ಥವಾಗುವುದಿಲ್ಲ. ಕೆಲವು ದೇಶಗಳಲ್ಲಿ ಜನರು ಅನ್ಯಾಯಗಳ ವಿರುದ್ಧ ಅನಿವಾರ್ಯವಾಗಿ ಶಸ್ತ್ರಗಳನ್ನು ಹಿಡಿದಿದ್ದಾರೆ. ಅಲ್ಲಿ ಅವರ ಹೋರಾಟ ನ್ಯಾಯವಾಗಿದೆ. ಆದರೆ ಭಯೋತ್ಪಾದನೆ ಅನ್ಯಾಯದಿಂದ ಕೂಡಿದೆ.



ಅವರು ಗುರಿಸಾಧನೆಗೆ ಅಮಾಯಕ ಜನರನ್ನು ಕೊಲ್ಲುತ್ತಿರುವುದು ಅವರ ಕ್ರೌರ್ಯದ ಮನಸ್ಥಿತಿಯನ್ನು ತೋರಿಸುತ್ತದೆ. ಅಮಾಯಕರ ಹತ್ಯೆಯನ್ನು ಯಾವ ಧರ್ಮವೂ ಸಮ್ಮತಿಸುವುದಿಲ್ಲ. ಅದು ಧರ್ಮದ ಹೆಸರಿನಲ್ಲಿ ಮುಗ್ದರನ್ನು ಹತ್ಯೆ ಮಾಡುವ ಉಗ್ರಗಾಮಿಗಳ/ಭಯೋತ್ಪಾದಕರ ಧೋರಣೆ ಅಧಾರ್ಮಿಕವಾದದ್ದು.

ಪ್ರಶ್ನೆ: ಭಯೋತ್ಪಾದನೆಯನ್ನು ಒಂದು ಧರ್ಮದವರ ಹಣೆಗೆ ಅಂಟಿಸುವುದು ಈ ಬಗ್ಗೆ...

ಭಯೋತ್ಪಾದನೆ ಬಹುಮುಖಿಯಾಗಿದೆ. ಭಯೋತ್ಪಾದನೆ ಎಂದಾಗ ಕೇವಲ ಮುಸ್ಲೀಮರನ್ನುದ್ದೇಶಿಸಿ, ಮುಸ್ಲೀಮರನ್ನು ಕೇಂದ್ರೀಕರಿಸಿ ಮಾತನಾಡಲಾಗುತ್ತದೆ. ಅಲ್ಲದೆ ಭಯೋತ್ಪಾದಕರೆಲ್ಲರೂ ಮುಸಲ್ಮಾನರು ಎಂದು ಮುಸ್ಲೀಮರೆಲ್ಲರೂ ಭಯೋತ್ಪಾದನೆ ಪರ ಇದ್ದಾರೆಂದು ವ್ಯಾಖ್ಯಾನಿಸಲಾಗಿದೆ. ಇದು ಮಿಥ್ಯಾರೋಪವಲ್ಲದೇ ಬೇರೇನೂ ಅಲ್ಲ.

ಯಾವುದೇ ಒಂದು ಧರ್ಮದ, ಸಮುದಾಯದ ಜನರನ್ನು ಇಡಿಯಾಗಿ ಭಯೋತ್ಪಾದಕರೆಂದು ಹಣೆಪಟ್ಟಿ ಅಂಟಿಸುವುದು ಫ್ಯಾಸಿಸ್ಟ್ ಧೋರಣೆಯಾಗುತ್ತದೆ. ಬಿಂದ್ರನ್‌ವಾಲೆ ಕಾರಣದಿಂದ ಇಡೀ ಸಿಖ್ ಸಮುದಾಯವನ್ನು ಭಯೋತ್ಪಾದಕರು ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಭಗತ್‌ಸಿಂಗ್ ಇರುವುದನ್ನು ನಾವು ಗಮನಿಸಬೇಕು. ಇತ್ತೀಚೆಗೆ ಸಾಧ್ವಿ ಪ್ರಜ್ಞಾಸಿಂಗ್ ಹಿಂದೂ ಭಯೋತ್ಪಾದಕಿ ಎಂಬ ಆರೋಪ ಹೊತ್ತಿದ್ದಾರೆ. ಹಾಗಂತ ಇಡೀ ಹಿಂದೂ ಮಹಿಳೆಯರೆಲ್ಲಾ ಭಯೋತ್ಪಾದಕಿಯರು ಎನ್ನಲಾಗುತ್ತದೆಯೇ? ಪ್ರತಿಯೊಂದು ಧರ್ಮದಲ್ಲಿಯೂ ಗಾಂಧೀಜಿ-ಗೋಡ್ಸೆ, ಹಿಟ್ಲರ್-ತೆರೇಸಾ, ಭಗತ್‌ಸಿಂಗ್-ಬಿಂದ್ರನ್‌ವಾಲೆ, ಅಬ್ದುಲ್ ಕಲಾಂ ಆಜಾದ್ ಮತ್ತು ಬಿನ್ ಲಾಡೆನ್ ಇರುತ್ತಾರೆ. ಇಡೀ ಸಮುದಾಯವನ್ನು ಕೋಮುವಾದಿಗಳೆಂದು, ಭಯೋತ್ಪಾದಕರೆಂದು ಕರೆಯುವುದು ಸರ್ವಥಾ ಸರಿಯಲ್ಲ.

ಪ್ರತಿಯೊಂದೂ ಧರ್ಮದಲ್ಲಿರುವ ಬಹುಸಂಖ್ಯಾತ ಜನ ಶಾಂತಿಪ್ರಿಯರು. ಅಹಿಂಸೆಯ ಪರವಾಗಿರುವವರು, ಸೌಹಾರ್ದ, ಸಾಮರಸ್ಯವನ್ನು ಬಯಸುವವರು. ನಿಜವಾದ ಅರ್ಥದಲ್ಲಿ ಸೆಕ್ಯೂಲರ್ ಮನಸ್ಥಿತಿಯುವರು. ಆದರೆ ಇಂಥವರನ್ನು ಈಗ ಪ್ರಜ್ಞಾಪೂರ್ವಕವಾಗಿ, ಕೋಮುವಾದಿಗಳನ್ನಾಗಿ, ಉಗ್ರಗ್ರಾಮಿಗಳನ್ನಾಗಿ ಪರಿವರ್ತಿಸುವ ಪ್ರಯತ್ನ ಮತಾಂಧರಿಂದ ನಡೆದಿದೆ. **ಕೋಮುವಾದನ್ನೇ ದೇಶಭಕ್ತಿಯೆಂದು ಹಿಂದೂ, ಫ್ಯಾಸಿಸ್ಟರು, ಭಯೋತ್ಪಾದನೆಯನ್ನೇ ಧರ್ಮನಿಷ್ಠೆ ಎಂದು ಮುಸ್ಲಿಂ ಫ್ಯಾಸಿಸ್ಟರು ಪ್ರತಿಪಾದಿಸಲಿಕ್ಕೆ ಹೊರಟಿದ್ದಾರೆ. ದ್ವೇಷದ ಸಂಸ್ಕೃತಿಯನ್ನು ಬಿತ್ತಿ ದೇಶವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಕೋಮುವಾದಿಗಳು ಮತ್ತು ಭಯೋತ್ಪಾದಕರಿಗೆ, ಧರ್ಮವಾಗಲಿ, ದೇಶವಾಗಲಿ ಮುಖ್ಯ ಅಲ್ಲವೇ ಅಲ್ಲ, ಅವರಿಗೆ ಮುಖ್ಯವಾಗಿರುವುದು ಅವರ ರಾಜಕೀಯ ಅಜೆಂಡಾ.** ಕೋಮುವಾದ ಸ್ಪಷ್ಟವಾಗಿ ಒಂದು ರಾಜಕೀಯ ಅಜೆಂಡಾ. ಹಿಂದೂ ಓಟ್‌ಬ್ಯಾಂಕ್ ರಾಜ ಕಾರಣವಲ್ಲದೇ ಬೇರೇನೂ ಅಲ್ಲ.

ಪ್ರಶ್ನೆ: ಈ ಅಪಾಯಗಳನ್ನು ಎದುರಿಸುವ ಬಗೆ ಹೇಗೆ?

ಎಲ್ಲ ಧರ್ಮಗಳಲ್ಲಿರುವ ಸಾತ್ವಿಕ ಜನ ಒಟ್ಟಾಗಿ ಈ ಕೋಮುವಾದ ಮತ್ತು ಉಗ್ರವಾದವನ್ನು ಎದುರಿಸಬೇಕು. ಈ ಕೋಮುವಾದ ಮತ್ತು ಉಗ್ರವಾದ ಪ್ರಜಾಪ್ರಭುತ್ವಕ್ಕೆ ಮಾರಕವಾದುದು. ಪ್ರಜಾಸತ್ತೆಯನ್ನು ಉಳಿಸಿಕೊಳ್ಳಲು ಮತ್ತು ಬಲಗೊಳಿಸಲು ಇವೆರಡೂ ನಿರ್ಮೂಲ ಗೊಳ್ಳಬೇಕಾದದ್ದು ಅತೀ ಅವಶ್ಯ. ಎಲ್ಲಾ ಧರ್ಮಗಳಲ್ಲಿನ ಸಾಮಾನ್ಯರು ಪ್ರಜಾಪ್ರಭುತ್ವವನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊರಬೇಕಾಗಿದೆ. ಪ್ರಜಾಸತ್ತೆಯ ಪರವಾಗಿರುವ ಭಾರತದ ಏಕತೆ ಮತ್ತು ಸಮಗ್ರತೆಯಲ್ಲಿ ನಂಬಿಕೆ ಇರುವ ರಾಜಕೀಯ ಪಕ್ಷಗಳು ಒಂದಾಗಿ ಜನರನ್ನು ಜಾಗೃತಿಸಿ, ಸಂಘಟಿಸಿ, ಹೋರಾಟವನ್ನು ಮಾಡುವಂತಾಗಬೇಕು.

ಪ್ರಶ್ನೆ: ಹಿಂದುತ್ವವನ್ನೇ ಭಾರತೀಯತೆ ಎನ್ನುವ ಕುರಿತು ನಿಮ್ಮ ಅಭಿಪ್ರಾಯ?



ಹಿಂದುತ್ವ ಮೂಲತಃ ರಾಜಕೀಯ ಸಿದ್ಧಾಂತ. ಧರ್ಮಕ್ಕಾಗಲೀ, ಭಾರತೀಯತೆಗಾಗಲೀ ಅದಕ್ಕೆ ಸಂಬಂಧವಿಲ್ಲ. ಹಿಂದ… ಭಾರತೀಯತೆಗೆ ವಿರುದ್ಧವಾ… ಭಾರತದಲ್ಲಿ ಕೇವಲ ಹಿಂದೂ… ಮಾತ್ರ ವಾಸವಾಗಿಲ್ಲ. ಇಲ್ಲಿ ಬೌದ್ಧ… ಜೈನರು, ಲಿಂಗಾಯರು, ಸಿಖ… ಹಾಗೂ ಮುಸ್ಲೀಮರು, ಕ್ರಿಶ್ಚಿಯನ್… ಪಾರ್ಸಿಗಳು ಮತ್ತು ಯಾ… ಧರ್ಮಕ್ಕೂ… ವ ಜನ… ವಾಸವಾಗಿದ್ದಾರೆ. ಹಿಂದೂ ಧರ್ಮ… ಎನ್ನುವುದು ಭಾರತೀಯತೆಯ ಒಂ… ಭಾಗವಾಗಬಹುದೇ ಹೊರತು ಅದೇ ಭಾರತೀಯ… ಅಲ್ಲ. ಬುದ್ಧತ್ವ, ಜಿನತ್ವ, ಸಿಖ್ಖತ್ವ, ಲಿಂಗಾಯ… ಮುಸ್ಲೀಮತ್ವ, ಕ್ರಿಶ್ಚಿಯನ್ನತ್ವ ಎಲ್ಲವ… ಒಳಗೊಳ್ಳುವುದು ಭಾರತೀಯತೆ. ಶರೀರದ ಒಂ… ಅಂಗವನ್ನು ತೋರಿಸಿ, ಇದೇ ಶರೀರವೆಂ… ಹೇಳಲು ಬರುವುದಿಲ್ಲ. ಭಾರತದ… ವಾಸವಾಗಿರುವವರೆಲ್ಲರೂ ಭಾರತೀಯರ… ಹಿಂದೂ ಧರ್ಮವೇ ಬೇರೆ ಹಿಂದುತ್ವವೇ ಬೇ… ಎಂಬುದನ್ನು ನಾವು ಮನಗಾಣಬೇಕಾಗಿದೆ.

ಪ್ರಶ್ನೆ: ಈಗ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಅಡ್ಡಿ ಆತಂಕಗಳೇನು?

ನಮ್ಮದು ತೋರಿಕೆಯ ಪ್ರಜಾಪ್ರಭುತ್ವ… ಪ್ರಜಾಪ್ರಭುತ್ವದ ಮೌಲ್ಯಗಳು ವಾಸ್ತವಗೊಳ್ಳ… ಇಲ್ಲ. ನಮ್ಮನ್ನು ಆಳಿದ ರಾಜಕೀಯ ಪಕ್ಷ… ಪ್ರಜಾಪ್ರಭುತ್ವದ ಪ್ರಜ್ಞೆಯನ್ನು ಮೂಡಿಸು… ವಿಫಲವಾಗಿರುವುದೇ ಇದಕ್ಕೆ ಕಾರ… ನಿಜವಾಗಿಯೂ ಪ್ರಜಾಪ್ರಭುತ್ವ ದಿನದಿ… ದುರ್ಬಲಗೊಳ್ಳುತ್ತಿದೆ. ಉಗ್ರವಾ… ಕೋಮುವಾದದಷ್ಟೇ ಮುಖ್ಯವಾದದ್ದು ಭ್ರಷ್ಟಾಚಾ… ಸ್ವಜನ ಪಕ್ಷಪಾತ, ಜಾತಿ, ಉಪಜಾತಿ… ಸಂಘರ್ಷ, ಸಾಮಾಜಿಕ ನ್ಯಾಯದ ತಿರಸ್ಕಾ… ಏರುತ್ತಿರುವ ಜನಸಂಖ್ಯೆ ಇತ್ಯಾದಿ... ಇತ್ಯಾದಿ…

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದ… ಪ್ರತಿಯೊಬ್ಬ ಮನಷ್ಯ ಘನತೆಯಿಂದ, ಗೌರವದಿಂ… ಬದುಕುವಂತಾಗಬೇಕು. ದುರ್ಬಲರಿ… ಶತಮಾನಗಳ ಕಾಲ, ಮಾನವ ಹಕ್ಕು… ಅವಕಾಶಗಳಿಂದ ವಂಚಿತರಾದವರಿಗೆ ನ್ಯಾ… ದೊರೆಯಬೇಕು. ಸಂಪತ್ತಿನ ಸಮಾನ ಹಂ… ಆಗಬೇಕು. ಎಲ್ಲರಿಗೂ ಶಿಕ್ಷಣ ಉದ್ಯೋ… ದೊರೆಯುವಂತಾಗಬೇಕು. ಮುಖ್ಯವಾ… ಸರ್ವರಿಗೂ ಸಾಮಾ… ನ್ಯಾಯ ಅನ್ವಯವಾಗಬೇ…

ಪ್ರಶ್ನೆ: ಭಾರತದ ಸಮಾಜ, ಸಂಸ್ಕೃತಿ ಕುರಿತು ನಿಮ್ಮ ಗ್ರಹಿಕೆ ಏನು?

ಭಾರತ ಬಹುಧರ್ಮ… ಬಹುಸಂಸ್ಕೃತಿ, ಬಹುಭಾಷೆ… ಮಹಾನ್ ರಾಷ್ಟ್ರ. ಈ ದೇ… ಮೊದಲಿನಿಂದಲೂ ಯಾವು… ಒಂದು ಧರ್ಮ… ಸೀಮಿತವಾಗಿಲ್ಲ. ಕಾಲಕಾಲ… ಕಾಣಿಸಿಕೊಂಡ, ಹೆ… ದೇಶೀಯ ಧರ್ಮಗಳ… ಹಾಗೂ ಹೊರಗಿ…

ಪುಟ 1…

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH